## ಅಧ್ಯಾಯ 19

# ಸರ್ವಶಕ್ತನಾದ ಕರ್ತನು ಆಳುತ್ತಾನೆ

ಜಗತ್ತಿನಲ್ಲಿಯೇ ಅತ್ಯಂಥ ಚಿರಪರಿಚಿತವಾದ ಸಂಗೀತ ಸಂಯೋಜನೆಯೆಂದರೆ ಅದು Handelನ *Messiah* ದಲ್ಲಿರುವ "ಹಲ್ಲೆಲೂಯಾ ಪಲ್ಲವಿ." ಪಲ್ಲವಿಯ ಮಾತುಗಳು ಸರಳವಾಗಿವೆ, ಮುಖ್ಯವಾಗಿ "ಹಲ್ಲೆಲೂಯಾ" ಪದವನ್ನು ಮತ್ತು ಕೆಲವು ಪದಗುಚ್ಛಗಳನ್ನು ಪುನರಾವರ್ತಿಸುವದು ಆಗಿರುತ್ತದೆ: "ಸರ್ವಶಕ್ತನಾದ ದೇವರು ಆಳ್ವಿಕೆ ಮಾಡುತ್ತಾನೆ"; "ಆತನು ಸದಾಕಾಲಕ್ಕೂ, ಎಂದೆಂದಿಗೂ ಆಳ್ವಿಕೆ ಮಾಡುವನು"; "ರಾಜಾಧಿರಾಜನು ಮತ್ತು ಕರ್ತಾಧಿಕರ್ತನು!" ಹಾಗಿದ್ದರೂ, ಉತ್ತಮವಾಗಿ ಹಾಡುವದಾದಲ್ಲಿ, ಹಾಡು ಕೇಳುವವನ ಮೈಯನ್ನು ಜುಮ್ಮೆನ್ನಿಸುತ್ತದೆ. Handelನು ಹೇಳಿದ್ದೇನೆಂದರೆ, ಆತನು ಈ ಪಲ್ಲವಿಯನ್ನು ಸಂಯೋಜನೆ ಮಾಡುವ ವೇಳೆ ತಾನು ಪರಲೋಕಕ್ಕೆ ಎತ್ತಿಕೊಂಡು ಒಯ್ಯಲ್ಪಟ್ಟು ದೇವರ ಸಮ್ಮುಖದಲ್ಲಿದ್ದನೋ ಎಂಬಂಥ ಅನುಭವವಾಗಿತ್ತು ಎಂಬದೆ.[1]

ಅನೇಕರಿಗೆ ಪಲ್ಲವಿಯು ಗೊತ್ತಿದೆ, ಆದರೆ ಬಹಳಷ್ಟು ಮಂದಿ Handelನ ಮೇರುಕೃತಿಗೆ ಪ್ರೇರಣೆಯು ಹೆಚ್ಚುಕಡಿಮೆ ಖಂಡಿತವಾಗಿಯೂ ಪ್ರಕಟನೆ 19ನೇ ಅಧ್ಯಾಯವೇ ಆಗಿತ್ತೆಂಬುದನ್ನು ತಿಳಿಯದವರಾಗಿದ್ದಾರೆ. ಅಧ್ಯಾಯವು ಹೀಗೆ ಆರಂಭಗೊಳ್ಳುತ್ತದೆ, "ಇದಾದ ಮೇಲೆ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವೋ ಎಂಬಂತೆ ಒಂದು ಶಬ್ದವನ್ನು ಕೇಳಿದೆನು" (ವ. 1). ಪದೇ ಪದೇ ಮೊದಲ ಆರು ವಚನಗಳಲ್ಲಿ, ಸಂತೋಷಭರಿತ ಕೂಗು ಪ್ರತಿಧ್ವನಿಸುತ್ತದೆ: "ಹಲ್ಲೆಲೂಯಾ!" (ವಚನಗಳು 1, 3, 4, 6). 6ನೇ ವಚನದಲ್ಲಿ ಪರಲೋಕದ ಹಾಗೂ ಭೂಲೋಕದ ಗಾನವೃಂದದವರು ಒಂದುಗೂಡಿ ಹೀಗೆ ಹಾಡುವರು, "ಹಲ್ಲೆಲೂಯಾ; ಸರ್ವಶಕ್ತನಾಗಿರುವ ನಮ್ಮ ದೇವರಾದ ಕರ್ತನು ಆಳುತ್ತಾನೆ." ಅಂತಿಮವಾಗಿ, 16ನೇ ವಚನವು ಹೀಗೆ ಹೇಳುತ್ತದೆ, "ಆತನ ... ರಾಜಾಧಿರಾಜನೂ ಕರ್ತರ ಕರ್ತನೂ ಎಂಬ ಹೆಸರು ಬರೆದದೆ." Handelನು ಸ್ಪಷ್ಟವಾಗಿರುವ ಪ್ರಕಾರ 11:15ರಿಂದ ಸಹ ಎರವಲು ಪಡೆದುಕೊಂಡಿರುತ್ತಾನೆ: "ಆತನು ಯುಗಯುಗಾಂತರಗಳಲ್ಲಿಯೂ ರಾಜ್ಯವನ್ನಾಳುವನು."

Handelನ ಪಲ್ಲವಿಯಲ್ಲಿನ ಮತ್ತು ಪ್ರಕಟನೆ 19:1-6ರಲ್ಲಿನ ಮುಖ್ಯ ಪದವು "ಹಲ್ಲೆಲೂಯಾ" ಎಂಬದೆ. "ಹಲ್ಲೆಲೂಯಾ" ಎಂಬುದು ಇಬ್ರಿಯ ಭಾಷೆಯ (הַלְלוּיָהּ, *haleluyāh*) ಪದವಾಗಿದ್ದು ಅದು ಮೊದಲು ಗ್ರೀಕ್ ಭಾಷೆಯಲ್ಲಿ ಲಿಪ್ಯಂತರಣ ಮಾಡಲ್ಪಟ್ಟಿತು (Ἀλληλουϊά, *Hallēlouia*) ಮತ್ತು ಬಳಿಕ ಆಂಗ್ಲದಲ್ಲಿ ಲಿಪ್ಯಂತರಣಗೊಂಡಿತು. KJVಯಲ್ಲಿ "ಅಲ್ಲೆಲೂಯಾ" ಎಂದಿದ್ದು, ಇದು ಗ್ರೀಕ್ ಲಿಪ್ಯಂತರಣವನ್ನು ಉಚ್ಛರಿಸುವ ಇನ್ನೊಂದು ವಿಧವಾಗಿದೆ. *Haleluyāh* ಎಂಬುದು ಒಂದು ಸಂಯುಕ್ತ ಪದವಾಗಿದ್ದು, "ಸ್ತುತಿ" (הָלַל, *hālal*) ಎಂಬುದಕ್ಕಿರುವ ಇಬ್ರಿಯ ಪದವನ್ನು ದೇವರಿಗಾಗಿ (יָהּ, *Yāh*, ಇದು "ಯೆಹೋವ" ಅಥವಾ "ಯಾಹವೇ" ಎಂಬುದರ ಸಂಕ್ಷಿಪ್ತ ರೂಪವಾಗಿದೆ) ಬಳಸುವ ಪವಿತ್ರ ಪದದೊಂದಿಗೆ ಒಂದುಗೂಡಿಸುತ್ತದೆ. ಇದರ ಅಕ್ಷರಶಃ ಅರ್ಥವು "ಯೆಹೋವನಿಗೆ ಸ್ತುತಿ" ಎಂದಾಗಿರುತ್ತದೆ - ಅಥವಾ, ಅದು ಸಾಮಾನ್ಯವಾಗಿ ಅನುವಾದಿಸಲ್ಪಟ್ಟಿರುವಂತೆ "ಕರ್ತನಿಗೆ ಸ್ತೋತ್ರ"

ಎಂದಾಗಿರುತ್ತದೆ!

ಬಹುಪಾಲು ಆಂಗ್ಲ ಬೈಬಲ್‌ಗಳಲ್ಲಿ "ಹಲ್ಲೆಲೂಯಾ" ಎಂಬ ಪದವು ಕಾಣಿಸಿಕೊಳ್ಳುವ ಏಕೈಕ ಸ್ಥಳವು ಪ್ರಕಟನೆ 19:1-16ರಲ್ಲಿ ಮಾತ್ರವೇ ಎಂಬುದನ್ನು ತಿಳಿದರೆ ಅನೇಕರಿಗೆ ಅಚ್ಚರಿಯಾಗುವದು. ಪದವು ಶಾಸ್ತ್ರಗಳುದ್ದಕ್ಕೂ ಸಿಕ್ಕುತ್ತದೆಂಬಂತೆ ನಮ್ಮ ಧಾರ್ಮಿಕ ಶಬ್ದಕೋಶದಲ್ಲಿ ಆಳವಾಗಿ ಬೇರೂರಿಸಲ್ಪಟ್ಟಿದೆ, ಆದರೆ ಅದು ಹಾಗಿರುವದಿಲ್ಲ. ಇಬ್ರಿಯ ಪದವಾಗಿರುವ *haleluyāh* ಎಂಬುದು ಕೀರ್ತನೆಗಳ ಪುಸ್ತಕದಲ್ಲಿ ಇಪ್ಪತ್ತುನಾಲ್ಕು ಸಾರಿ ಬಳಸಲ್ಪಟ್ಟಿದೆ, ಆದರೆ ಅದು ಯಾವ ಬದಲಾವಣೆಯೂ ಇಲ್ಲದೆ "ಕರ್ತನಿಗೆ ಸ್ತೋತ್ರವಾಗಲಿ!" ಎಂದು ಅಥವಾ ಅದಕ್ಕೆ ಸಮಾನವಾದ ಪದಗುಚ್ಛದಿಂದ ಅನುವಾದಿಸಲ್ಪಟ್ಟಿದೆ (ನೋಡಿರಿ ಕೀರ್ತನೆ 106; 111–113; 115–118; 135; 146–150). ಬಹುಪಾಲು ಆಂಗ್ಲ ಬೈಬಲ್‌ಗಳೊಳಗೆ, "ಹಲ್ಲೆಲೂಯಾ" ಎಂಬುದರ ಲಿಪ್ಯಂತರಣವು ಕೇವಲ ನಾಲ್ಕು ಸಾರಿ ಮಾತ್ರವೇ - ಎಲ್ಲಾ ಸಾರಿಯೂ ಪ್ರಕಟನೆ 19:1–6ರಲ್ಲಿ – ಸಿಕ್ಕುತ್ತದೆ. ಸ್ವರ್ಗೀಯ "ಹಲ್ಲೆಲೂಯಾ!" ಪಲ್ಲವಿಯು ಇಲ್ಲಿದೆ.

ವಾಚಕನು ಪ್ರಕಟನೆ ಪುಸ್ತಕದಲ್ಲಿ ಸ್ತುತಿಯ ಅನೇಕ ವಾಕ್ಯಭಾಗಗಳನ್ನು ಎದುರುಗೊಂಡಿರುತ್ತಾನೆ, ಆದರೆ 19ನೇ ಅಧ್ಯಾಯದಲ್ಲಿ, ದೇವರ ಸ್ತೋತ್ರವು ಅದರ ಪರಾಕಾಷ್ಠೆಯನ್ನು ತಲುಪುತ್ತದೆ. ಆರಾಧನೆಯ ಹೃದಯಭಾಗವು ಸ್ತುತಿಯೇ. ಮೂಲಭೂತವಾಗಿ ನಾವು ದೇವರನ್ನು ಎರಡು ಸಂಗತಿಗಳಿಗೋಸ್ಕರ ಸ್ತುತಿಸಬೇಕು: ಆತನು ಏನು ಮಾಡಿದ್ದಾನೆ ಹಾಗೂ ಆತನು ಯಾರಾಗಿದ್ದಾನೆ ಎಂಬುದಕ್ಕಾಗಿಯೇ. ಇವರೆಡೂ ಚರ್ಚೆಯಾಂಶಗಳನ್ನೊಳಗೊಂಡ ಒಂದು ವಾಕ್ಯಭಾಗವೆಂದರೆ ಅದು ಕೀರ್ತನೆ 150:2: "ಆತನ ಮಹತ್ಕಾರ್ಯಗಳಿಗಾಗಿ [ಆತನು ಏನು ಮಾಡಿದ್ದಾನೆ] ಆತನನ್ನು ಸ್ತುತಿಸಿರಿ; ಆತನ ಮಹಾಪ್ರಭಾವಕ್ಕೆ [ಆತನು ಏನಾಗಿರುವನು] ಸರಿಯಾಗಿ ಆತನನ್ನು ಸ್ತುತಿಸಿರಿ." ಪ್ರಕಟನೆ ಪುಸ್ತಕದ "ಹಲ್ಲೆಲೂಯಾ!" ಪಲ್ಲವಿ ಸಹ ಆ ಎರಡು ಮುಖ್ಯ ಚರ್ಚೆಯಾಂಶದ ಮೇಲೆ ಗಮನವನ್ನು ಕೇಂದ್ರಿಕರಿಸುತ್ತದೆ.

## ನಾಲ್ಕು ವಿಧದ ಹಲ್ಲೆಲೂಯಾ (19:1-6)

**1ಇದಾದ ಮೇಲೆ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವೋ ಎಂಬಂತೆ ಒಂದು
ಶಬ್ದವನ್ನು ಕೇಳಿದೆನು. ಅವರು - ಹಲ್ಲೆಲೂಯಾ. ಜಯವೂ ಪ್ರಭಾವವೂ ಶಕ್ತಿಯೂ ನಮ್ಮ
ದೇವರಲ್ಲಿ ಉಂಟು; 2ಆತನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ, ತನ್ನ
ಜಾರತ್ವದಿಂದ ಭೂಲೋಕವನ್ನು ಕೆಡಿಸುತ್ತಿದ್ದ ಆ ಮಹಾ ಜಾರಸ್ತ್ರೀಗೆ ಆತನು ನ್ಯಾಯತೀರಿಸಿ
ಅವಳು ಆತನ ಸೇವಕರನ್ನು ಕೊಂದದ್ದಕ್ಕಾಗಿ ಅವಳಿಗೆ ಪ್ರತಿದಂಡನೆಯನ್ನು ಮಾಡಿದ್ದಾನೆ ಎಂದು
ಹೇಳಿ ಎರಡನೆಯ ಸಾರಿ - 3ಹಲ್ಲೆಲೂಯಾ ಎಂದು ಆರ್ಭಟಿಸಿ - ಅವಳ ದಹನದಿಂದುಂಟಾದ
ಹೊಗೆಯು ಯುಗಯುಗಾಂತರಗಳಲ್ಲಿಯೂ ಏರಿ ಹೋಗುತ್ತದೆ ಎಂದು ಹೇಳಿದರು. 4ಆಗ
ಇಪ್ಪತ್ತುನಾಲ್ಕು ಮಂದಿ ಹಿರಿಯರೂ ಆ ನಾಲ್ಕು ಜೀವಿಗಳೂ ಅಡ್ಡಬಿದ್ದು ಸಿಂಹಾಸನದ ಮೇಲೆ
ಕೂತಿರುವ ದೇವರಿಗೆ ನಮಸ್ಕಾರ ಮಾಡಿ - ಆಮೆನ್; ಹಲ್ಲೆಲೂಯಾ, ಅಂದರು. 5ಆ ಮೇಲೆ
ಸಿಂಹಾಸನದ ಕಡೆಯಿಂದ ಬಂದ ಒಂದು ಶಬ್ದವು - ದೇವರ ದಾಸರೆಲ್ಲರೇ, ದೇವರಿಗೆ
ಭಯಪಡುವ ಹಿರಿಕಿರಿಯರೇ, ನಮ್ಮ ದೇವರನ್ನು ಕೊಂಡಾಡಿರಿ ಎಂದು ಹೇಳಿತು. 6ತರುವಾಯ
ಜನರ ದೊಡ್ಡ ಗುಂಪಿನ ಶಬ್ದದಂತೆಯೂ ಜಲಪ್ರವಾಹಘೋಷದಂತೆಯೂ ಗಟ್ಟಿಯಾದ ಗುಡುಗಿನ
ಶಬ್ದದಂತೆಯೂ ಇದ್ದ ಒಂದು ಶಬ್ದವನ್ನು ಕೇಳಿದೆನು. ಅದು - ಹಲ್ಲೆಲೂಯಾ; ಸರ್ವಶಕ್ತನಾಗಿರುವ
ನಮ್ಮ ದೇವರಾದ ಕರ್ತನು ಆಳುತ್ತಾನೆ.**

Handelನ *Messiah* ಬಗ್ಗೆ ಪರಿಚಿತವಿರುವವರು ಆತನ "ಹಲ್ಲೆಲೂಯಾ" ಹಾಗೂ ಪ್ರಕಟನೆ 19:1-6ರಲ್ಲಿನ "ಹಲ್ಲೆಲೂಯಾ" ನಡುವೆ ಒಂದು ವಿರುದ್ಧ ಹೋಲಿಕೆಯಿರುವದನ್ನು ಕಾಣುವರು. Handelನ ಸಂತೋಷಕರ ಕೃತಿಯು ಯೇಸುವಿನ ಮೂಲಕವಾಗಿ ದೇವರ ಯೋಜನೆಯು ನೆರವೇರಿದ್ದರ ಕುರಿತಾಗಿರುತ್ತದೆ: ಅದು ಯೇಸುವಿನ ಮರಣ, ಪುನರುತ್ಥಾನ, ಹಾಗೂ ಪರಲೋಕಾರೋಹಣಗಳ ಕುರಿತು ಮುಖ್ಯ ಗಮನವನ್ನು ಕೊಡುತ್ತದೆ ಮತ್ತು ಮರಣದ ಮೇಲಿನ ಜಯವನ್ನು ಕೊಂಡಾಡುತ್ತದೆ. ಇನ್ನೊಂದೆಡೆಯಲ್ಲಿ, ಪ್ರಕಟನೆ 19ನೇ ಅಧ್ಯಾಯದ ಮೊದಲ ಭಾಗವು ದೇವರ ಕಠೋರವಾದ, ಮನಸ್ಸು ದಯದಾಕ್ಷಿಣ್ಯವಿಲ್ಲದ ರೌದ್ರವನ್ನು ಪ್ರಶಂಸಿಸುವಂತೆ ತೋರುತ್ತದೆ. ಒಂದು "ಹಲ್ಲೆಲೂಯಾ ಪಲ್ಲವಿ"ಯು ಜೀವ ಹಾಗೂ ಸ್ವಾತಂತ್ರ್ಯತೆಯ ಮೇಲೆ ಮುಖ್ಯ ಗಮನವನ್ನು ಹರಿಸಿದೆ, ಇನ್ನೊಂದು ಪಲ್ಲವಿಯು ಮರಣ ಹಾಗೂ ನಾಶನಗಳನ್ನು ನಾಟಕೀಕರಣಗೊಳಿಸುವಂತೆ ಕಾಣಿಸುತ್ತದೆ.

ಈ ವಿರುದ್ಧತೆಯು ಕ್ರೈಸ್ತರಿಗೆ ವಿಚಿತ್ರವೆಂಬಂತೆ ತೋರಬಹುದು; ನಮಗೆ ಪಶ್ಚಾತ್ತಾಪ ಪಡುವದಕ್ಕೆ ಇನ್ನು ಅವಕಾಶವಿಲ್ಲದ ಪಾಪಿಗಳ ಮರಣದಲ್ಲಿ ಸಂತೋಷಿಸುವದಕ್ಕಿಂತಲೂ ಒಬ್ಬ ಪಾಪಿಯು ಪಶ್ಚಾತ್ತಾಪ ಪಟ್ಟದ್ದಕ್ಕಾಗಿ ಸಂತೋಷ ಪಡುವದು (ಲೂಕ 15:7, 10) ನಮಗೆ ಹೆಚ್ಚು ಪರಿಚಿತವಿರುತ್ತದೆ. ಬೈಬಲಿನ ಸಂದೇಹವಾದಿಗಳಿಗೆ ಬಾಬೆಲನ್ನು ನಾಶ ಮಾಡಿದ್ದಕ್ಕಾಗಿ ಪ್ರಕಟನೆ ಪುಸ್ತಕವು ದೇವರನ್ನು ಸ್ತುತಿಸುತ್ತದೆಂಬ ವಿಚಾರದಲ್ಲಿ ಬಹಳಷ್ಟನ್ನು ಮಾತಾಡುತ್ತಾರೆ.

ಪ್ರಕಟನೆ 19:1-6ರಂತಹ ವಾಕ್ಯಭಾಗಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ನಾವು ಅಲ್ಲಿರುವ ಪ್ರಸ್ತುತ ಪರಿಸ್ಥಿತಿಯನ್ನು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ಕ್ರೈಸ್ತರು ಅಸ್ತಿತ್ವವನ್ನು ಉಳಿಸಿಕೊಳ್ಳಲು ಹೋರಾಟದಲ್ಲಿದ್ದರು; ಅವರ ಪ್ರಾಣಗಳು ಗಂಡಾಂತರದಲ್ಲಿದ್ದವು.

> ಅವರು ಕ್ರೀಡಾಂಗಣದಲ್ಲಿ ಸಿಂಹಗಳಿಗೆ ಆಹಾರವಾಗಿ ಎಸೆಯಲ್ಪಟ್ಟ ತಮ್ಮ ಕುಟುಂಬದ ಸದಸ್ಯರನ್ನು ಕಳೆದುಕೊಂಡಿದ್ದರು, ಅವರ ಕುಟುಂಬದವರನ್ನು ರಾತ್ರಿಯಲ್ಲಿ ರೋಮಿನ ಆಕಾಶಗಳನ್ನು ಬೆಳಗಿಸುವದಕ್ಕೆ ಕಂಬಕ್ಕೆ ಕಟ್ಟಿ ಸುಡಲಾಗಿತ್ತು, ಅವರ ಹಿಂಸಕರು ಕ್ರೈಸ್ತರನ್ನು ಕಾಡು ಪ್ರಾಣಿಗಳ ಚರ್ಮದಿಂದ ಹೊದಿಸಿದ್ದರಿಂದ ಬೇಟೆ ನಾಯಿಗಳಿಂದ ಬೆನ್ನಟ್ಟಲ್ಪಡುತ್ತಿದ್ದರು.[2]

ಅವರ ಆತ್ಮಗಳು ಭರವಸವನ್ನು ಕೊಡುವಂತೆ ಕೂಗಿಕೊಳ್ಳುತ್ತಿದ್ದವು - ಮತ್ತು ಭರವಸವನ್ನೇ ಪ್ರಕಟನೆ ಪುಸ್ತಕವು ಅವರಿಗೆ ಕೊಡುವದಾಗಿದೆ.

19ನೇ ಅಧ್ಯಾಯದಲ್ಲಿನ ಸಂಭ್ರಮವು ಸ್ವಾಭಾವಿಕವಾದದ್ದೇ. 13ನೇ ಅಧ್ಯಾಯದ ಭಯಂಕರ ಮೃಗವು, ಅತ್ಯಾಡಂಬರದ ಜಾರಸ್ತ್ರೀಯಿಂದ ಪ್ರಚೋದಿಸಲ್ಪಟ್ಟದ್ದಾಗಿ, ಕ್ರೈಸ್ತರ ಬೆನ್ನತ್ತಿತ್ತು. ಅವರು ತಮ್ಮ ನಾಶನಕ್ಕಾಗಿ ಪ್ರತಿಷ್ಠಿಸಿಕೊಂಡಿದ್ದವರಿಗೆ ಅವಸಾನವು ಸನ್ನಿಹಿತವಾಗಿದೆ ಎಂದು ತಿಳಿದಾಗ ಸಂಭ್ರಮಿಸದಿದ್ದಲ್ಲಿ ಅವರು ಮಾನವರಿಗಿಂತ ಕಡಿಮೆಯೆಂಬಂತೆ ಅನ್ನಿಸುವರು.

ಹೇಗೂ, ಪ್ರಕಟನೆ 19ನೇ ಅಧ್ಯಾಯವು ಮತ್ತೊಬ್ಬರ ದುರ್ದೈವವನ್ನು ಕಂಡು ಬಾಲಿಶತನದಿಂದ ಹಿಗ್ಗುವದನ್ನು ಪ್ರೋತ್ಸಾಹಿಸುವದಿಲ್ಲ ಎಂಬುದನ್ನು ಒತ್ತಿ ಹೇಳುವರು ಪ್ರಾಮುಖ್ಯವಾಗಿರುತ್ತದೆ. ಈ ಅಧ್ಯಾಯದ "ಹಲ್ಲೆಲೂಯಾ" ಪಲ್ಲವಿಯು "ಪ್ರತೀಕಾರವನ್ನಲ್ಲ, ಆದರೆ ... ತಕ್ಕ ಪ್ರತಿಫಲ ಸಲ್ಲಿಸಲ್ಪಡುವದನ್ನು ಸೂಚಿಸುತ್ತದೆ."[3] ಪ್ರಧಾನವಾದ ಚರ್ಚೆಯಾಂಶವು ಸೇಡು ತೀರಿಸುವಿಕೆಯಲ್ಲ, ಆದರೆ ನ್ಯಾಯವನ್ನು ರುಜುಪಡಿಸುವದು. "ನ್ಯಾಯ ರುಜುಪಡಿಸುವಿಕೆ" ಎಂಬುದು ಒಂದು ಲ್ಯಾಟಿನ್ ಪದದಿಂದ ಬಂದದ್ದಾಗಿದ್ದು "ಸಮರ್ಥಿಸು" ಎಂದರ್ಥವನ್ನು ಕೊಡುತ್ತದೆ. ಇದನ್ನು "ಸರಿಯೆಂದು ತೋರ್ಪಡಿಸುವದು"

ಎಂಬರ್ಥದಲ್ಲಿ ಬಳಸಲಾಗುತ್ತದೆ. ಅಂತ್ಯದಲ್ಲಿ, ಕ್ರೈಸ್ತರು ಹಾಗೂ ಕ್ರಿಸ್ತನ ಧ್ಯೇಯವು ಸರಿಯಾದದ್ದೆಂದು ರುಜುಪಡಿಸಲ್ಪಡುವದು.

ಹೊಸ ಒಡಂಬಡಿಕೆಯು ಮುಯ್ಯಿಗೆ ಮುಯ್ಯಿ ತೀರಿಸುವದು ಕ್ರೈಸ್ತರ ಕೆಲಸವಲ್ಲ ಎಂಬುದನ್ನು ಸ್ಪಷ್ಟಗೊಳಿಸುತ್ತದೆ. ನಾವು ನಮ್ಮ ವೈರಿಗಳನ್ನು ಪ್ರೀತಿಸುವವರು ಮತ್ತು ನಮ್ಮನ್ನು ಹಿಂಸಿಸುವವರಿಗಾಗಿ ಪ್ರಾರ್ಥನೆ ಮಾಡುವವರು ಆಗಿರಬೇಕು (ಮತ್ತಾಯ 5:44). ಪೌಲನು ಹೀಗೆ ಆಜ್ಞಾಪಿಸಿದನು, “ನಿಮ್ಮನ್ನು ಹಿಂಸಿಸುವವರಿಗೆ ಆಶೀರ್ವಾದಮಾಡಿರಿ”; “ಯಾರಿಗೂ ಅಪಕಾರಕ್ಕೆ ಅಪಕಾರವನ್ನು ಮಾಡಬೇಡಿರಿ” (ರೋಮಾ 12:14, 17). ಹೇಗೂ, ವೈಯಕ್ತಿಕವಾಗಿ ಮುಯ್ಯಿ ತೀರಿಸುವದನ್ನು ಖಂಡಿಸುವ ರೋಮಾ 12ನೇ ಅಧ್ಯಾಯವು, ಅದೇ ವೇಳೆಯಲ್ಲಿ ದೈವಿಕ ಮುಯ್ಯಿ ತೀರಿಸುವಿಕೆಯನ್ನು ಘೋಷಿಸುತ್ತದೆಂಬುದನ್ನು ಮಹತ್ವಪೂರ್ಣವಾಗಿರುತ್ತದೆ: “ಪ್ರಿಯರೇ, ನೀವೇ ಮುಯ್ಯಿಗೆ ಮುಯ್ಯಿ ತೀರಿಸದೆ ಶಿಕ್ಷಿಸುವದನ್ನು ದೇವರಿಗೆ ಬಿಡಿರಿ. ಯಾಕಂದರೆ ಮುಯ್ಯಿಗೆ ಮುಯ್ಯಿ ತೀರಿಸುವದು ನನ್ನ ಕೆಲಸ, ನಾನೇ ಪ್ರತಿಫಲವನ್ನು ಕೊಡುವೆನು ಎಂದು ಕರ್ತನು ಹೇಳುತ್ತಾನೆಂಬದಾಗಿ ಬರೆದದೆ” (ರೋಮಾ 12:19).

“ದೈವಿಕ ಪ್ರತೀಕಾರದ ಚರ್ಚೆಯಾಂಶವು ... ಬೈಬಲಿನುದ್ದಕ್ಕೂ ಜೋಡನೆಯನ್ನು ಬಿಡದೆ ಸಾಗುತ್ತದೆ.”[4] (ನೋಡಿರಿ ಯೆರೆಮೀಯ 50:15, 29; 51:24, 26, 48.) ಪುನಃ ಪುನಃ, ಮುಯ್ಯಿಗೆ ಮುಯ್ಯಿ ತೀರಿಸುವದು ದೇವರಿಗಿರುವ ವಿಶಿಷ್ಟ ವಿಶೇಷಾಧಿಕಾರ ಎಂಬುದು ಒತ್ತಿ ಹೇಳಲ್ಪಟ್ಟಿದೆ (ನೋಡಿರಿ ಧರ್ಮೋಪದೇಶಕಾಂಡ 32:35; ರೋಮಾ 12:19; 2 ತಿಮೊಥೆ 4:14; ಇಬ್ರಿಯ 10:30; 1 ಪೇತ್ರ 3:9). ಮೋಶೆಯ ದಿನಗಳಲ್ಲಿ, ದೇವರ ಜನರಿಗೆ ಒಂದು ವಾಗ್ದಾನವು ಮಾಡಲ್ಪಟ್ಟಿತ್ತು: “... ಹೊಗಳಿರಿ. ತನ್ನ ಸೇವಕರ ರಕ್ತವನ್ನು ಚೆಲ್ಲಿದ ಶತ್ರುಗಳಿಗೆ ಯೆಹೋವನು ಪ್ರತಿದಂಡನೆ ಮಾಡುತ್ತಾನೆ; ಅವರಿಗೆ ಮುಯ್ಯಿತೀರಿಸುತ್ತಾನೆ; ತನ್ನ ಜನರಿಗೋಸ್ಕರವೂ ... ದೋಷಪರಿಹಾರಮಾಡುತ್ತಾನೆ” (ಧರ್ಮೋಪದೇಶಕಾಂಡ 32:43). ದೇವರು ಈಗಲೂ ತನ್ನ ವಾಗ್ದಾನವನ್ನು ಕಾಪಾಡಿಕೊಳ್ಳುತ್ತಿದ್ದಾನೆಂಬುದನ್ನು ಕಾಣುವದು ಆದಿ ಕ್ರೈಸ್ತರಿಗೆ ರೋಮಾಂಚನವುಂಟು ಮಾಡಿರಬಹುದಾಗಿದೆ. ಇದು ಅವರಿಗೆ ಸಂತೋಷಿಸುವದಕ್ಕೆ ಸರಳವಾದ ಕಾರಣವನ್ನು ಒದಗಿಸಿತ್ತು.

ನಾವು ಈ ವಿಚಾರಧಾರೆಯನ್ನು ಒಂದು ಹೆಜ್ಜೆ ಮುಂದಕ್ಕೆ ಕೊಂಡೊಯ್ಯೋಣ: ಪ್ರಕಟನೆ 19:1-6ರಲ್ಲಿನ ಪ್ರಧಾನ ಚರ್ಚೆಯಾಂಶವು ಸೇಡು ತೀರಿಸಿಕೊಳ್ಳುವದಲ್ಲ, ಆದರೆ ನ್ಯಾಯವನ್ನು ರುಜುಪಡಿಸುವದೇ ಆಗಿರುತ್ತದೆಂಬುದನ್ನು ದೃಢವಾಗಿ ಹೇಳಲಾಯಿತು. ನ್ಯಾಯವನ್ನು ರುಜುಪಡಿಸುವಿಕೆ ಎಂದು ಹೇಳಿದ್ದರಲ್ಲಿ ಕ್ರೈಸ್ತರ ನ್ಯಾಯವನ್ನು ರುಜುಪಡಿಸುವದು ಸೇರಿತ್ತು: ರೋಮ್ ನಗರಿಯು ಅವರನ್ನು ಅಪರಾಧಿಗಳಂತೆ ಕೊಂದಿತ್ತು, ಆದರೆ ದೇವರು ಅವರನ್ನು ದೇವಜನರಾಗಿ ಎಬ್ಬಿಸಿದನು. ಹೇಗೂ, ಹೆಚ್ಚು ಪ್ರಾಮುಖ್ಯವಾದದ್ದೆಂದರೆ ದೇವರು ನ್ಯಾಯವನ್ನು ರುಜುಪಡಿಸುವದು, ಮತ್ತು ಆತನ ಯೋಜನೆಗಳು ಹಾಗೂ ಉದ್ದೇಶಗಳೇ.

ಪ್ರಕಟನೆ 12ರಲ್ಲಿ ನಾವು ನಿಜವಾದ ಯುದ್ಧವು ದೇವರು ಹಾಗೂ ಸೈತಾನನ ನಡುವೆ ಎಂಬುದನ್ನು ನೋಡಿದೆವು. ಸೈತಾನನನ್ನು ನಿಗ್ರಹಿಸದೆ ಬಿಟ್ಟರೆ ಏನಾಗುವದು? ದೇವರು ಪಾಪಕ್ಕೆ ದಂಡನೆಯನ್ನು ಮಾಡದಿದ್ದರೆ ಹೇಗಿರುತ್ತದೆ? ಆಗ ಕೆಟ್ಟದ್ದು ಜಯ ಹೊಂದಿದೆ ಎಂಬಂತೆ ಕಾಣಿಸುವದಿಲ್ಲವೋ? ಪ್ರಕಟನೆ 19:1-6 ವಚನಗಳಿಗೆ ಹಿನ್ನಲೆಯು “ಮಾನವ ವ್ಯವಹಾರದೊಳಗೆ ಜಯಶಾಲಿಯಾದದ್ದು ದೇವರ ಆಳ್ವಿಕೆಯೋ ಅಥವಾ ಸೈತಾನನ ಮೋಸಕರವಾದ ಶಕ್ತಿಯೋ ಎಂಬ ಪ್ರಶ್ನೆಯೇ.”[5]

ಒಬ್ಬರು ಆಕ್ಷೇಪಣೆಯತ್ತಿ ಹೀಗನ್ನಬಹುದು, "ಆದರೆ ದೇವರು ಪಾಪಿಗಳ ಕಡೆಗೆ ಕರುಣೆಯುಳ್ಳವನಾಗಿರಬೇಕಲ್ಲಾ, ಆತನ ಚಿತ್ತಕ್ಕೆ ನಿರಂತರವಾಗಿಯೂ ಎಡೆಬಿಡದೆಯೂ ಅವಿಧೇಯರಾಗುವವರ ಕಡೆಗೂ ಕರುಣೆಯುಳ್ಳವನಾಗಿರಬೇಕು." ದೇವರು ಕಣ್ಣಿಗೆ ಕುಕ್ಕುವಂತೆ ಕಾಣಿಸುವ ಅವಿಧೇಯತೆಯನ್ನು ದಂಡಿಸದೆ ಇರುವಂತೆ ಅನುಮತಿಸುವದಾದರೆ, ಅಲ್ಲಿ ಸಂದೇಶವು ದೇವರು ಕರುಣೆಯುಳ್ಳವನೆಂದು ಆಗುವದಿಲ್ಲ, ಆದರೆ ದೇವರು *ಅಸಡ್ಡೆಯುಳ್ಳವನು* ಎಂಬುದೆ - ಅಂದರೆ ಆತನು ಮನುಷ್ಯರು ಪಾಪ ಮಾಡುವ ಕುರಿತು ಚಿಂತೆಯಿಲ್ಲದವನು ಎಂಬದೆ. ನಮ್ಮ ಮುಂದಿರುವ ಪ್ರಕರಣಕ್ಕೆ ಸಂಬಂದಪಟ್ಟಂತೆ, ದೇವರು ವಿಗ್ರಹಾರಾಧನೆಯ ಕಡೆಗೆ ಅಸಡ್ಡೆಯ ಭಾವದವನಾಗಿದ್ದನು, ನಿರಂಕುಶತನಕ್ಕೆ ಅಸಡ್ಡೆಯಿಂದಿದ್ದನು, ಮತ್ತು ತನ್ನ ಜನರು ಅನುಭವಿಸುತ್ತಿದ್ದ ಶ್ರಮೆಗಳ ಬಗ್ಗೆ ಸಹ ಉದಾಸೀನ ಭಾವದಿಂದಿದ್ದನು. Albert Baldingerನು ಹೀಗೆ ಹೇಳಿದನು,

> ... ವ್ಯಕ್ತಿಗಳ ಅಥವಾ ಇಡೀ ಸಮುದಾಯದ ದುರವಸ್ಥೆ ಅಥವಾ ಸಂತೋಷಗಳಿಗಿಂತಲೂ ಹೆಚ್ಚು ಪ್ರಾಮುಖ್ಯವಾಗಿರುವ ವಿಷಯಗಳಿರುತ್ತವೆ.
>
> ... ನಿತ್ಯವಾದ ನ್ಯಾಯದ ವಿರುದ್ಧವಾಗಿ ತಮ್ಮ ಅವಿಧೇಯತೆಯ ಅಪರಾಧ ದಾರಿಯಲ್ಲಿಯೇ ಯಾವ ವಿರೋಧವನ್ನು ಎದುರಿಸಿದೆ ಪ್ರಯಾಣಿಸುವಂತೆ ಶಕ್ತರಾಗುವದಾದರೆ ಮತ್ತು ಲೆಕ್ಕ ಒಪ್ಪಿಸುವಂತೆ ಎಂದಿಗೂ ಕರೆಯಲ್ಪಡದಿದ್ದರೆ ಅದು ಒಂದು ಭಯಾನಕ ಸಂಗತಿಯಾಗುವದು.[6]

ಪ್ರಕಟನೆ 19:1-6ರ ವಿಷಯದಲ್ಲಿ, Ray Summersನು ಈ ಮುಕ್ತಾಯಕ್ಕೆ ಬರುತ್ತಾನೆ, "ಅದು ರೋಮಿನ ಮೇಲೆ ಕೆಡುಕು ಬಂದದೆ ಎಂಬುದಕ್ಕಿಂತಲೂ ನೀತಿ ಹಾಗೂ ಸತ್ಯಕ್ಕೆ ಸಿಕ್ಕ ಜಯಕ್ಕೋಸ್ಕರ ಸಂತೋಷಿಸುವ ಒಂದು ಗೀತೆಯಾಗಿರುತ್ತದೆ."[7] ಈ ವಾಕ್ಯಭಾಗವನ್ನು ಅಧ್ಯಯನ ಮಾಡುತ್ತಿರುವ ವೇಳೆ, ಇದೊಂದು ದ್ವೇಷದ ಸಂಕೀರ್ತನೆ ಅಲ್ಲ, ಆದರೆ ಒಂದು ಸ್ತುತಿಯ ಕವಿತೆಯಾಗಿದೆ ಎಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳುವದು ಪ್ರಾಮುಖ್ಯವಾಗಿದೆ.

**ವಚನ 1.** 19ನೇ ಅಧ್ಯಾಯದ ಆರಂಭಿಕ ವಚನಗಳು 18ನೇ ಅಧ್ಯಾಯದಲ್ಲಿ ಕೊಡಲಾಗಿದ್ದ ಆದೇಶಕ್ಕೆ ಪ್ರತ್ಯುತ್ತರವಾಗಿರುತ್ತವೆ: "ಪರಲೋಕವೇ, ಆನಂದಪಡು; ದೇವಜನರೇ, ಅಪೊಸ್ತಲರೇ, ಪ್ರವಾದಿಗಳೇ, ಇವಳು ನಿಮಗೆ ಅನ್ಯಾಯಮಾಡಿದ್ದಕ್ಕಾಗಿ ದೇವರು ಇವಳಿಗೆ ಪ್ರತಿದಂಡನೆಯನ್ನು ಮಾಡಿದ್ದರಿಂದ ಆನಂದಪಡಿರಿ" (18:20). 18ನೇ ಅಧ್ಯಾಯದ ದುಃಖಿಸುವಿಕೆ ಹಾಗೂ ಮೌನದ ಬಳಿಕ 19ನೇ ಅಧ್ಯಾಯದ ಹಾಡು ಉಕ್ಕಿ ಬರುತ್ತದೆ.

ಅಧ್ಯಾಯವು ಹೀಗೆ ಆರಂಭಗೊಳ್ಳುತ್ತದೆ, **ಇದಾದ ಮೇಲೆ ಪರಲೋಕದಲ್ಲಿ ದೊಡ್ಡ ಗುಂಪಿನ ಮಹಾ ಶಬ್ದವೋ ಎಂಬಂತೆ ಒಂದು ಶಬ್ದವನ್ನು ಕೇಳಿದೆನು. ಇದಾದ ಮೇಲೆ** ಎಂಬ ಪದಗುಚ್ಛವು ರೋಮಿನ ಬೀಳುವಿಕೆಯನ್ನು ಬಣ್ಣಿಸಿದ ದೃಶ್ಯಗಳನ್ನು ಸೂಚಿಸುತ್ತವೆ. ಅಧ್ಯಾಯದ ಮೊದಲ ಆರು ವಚನಗಳು 17:1ರಲ್ಲಿ ಆರಂಭಗೊಂಡ ಬಾಬೆಲಿನ ಬೀಳುವಿಕೆಯ ಕುರಿತಾದ ಸುದೀರ್ಘವಾದ ವಾಕ್ಯಭಾಗವನ್ನು ಮುಕ್ತಾಯಕ್ಕೆ ತರುತ್ತವೆ. 5:11ರಲ್ಲಿ ದೇವದೂತರ ಮಹಾ ಸಮೂಹವಿತ್ತು ಮತ್ತು 7:9ರಲ್ಲಿ ರಕ್ಷಣೆ ಹೊಂದಿದವರ ಒಂದು ಮಹಾ ಸಮೂಹವು ಇತ್ತು. ಬಹುಶಃ ಈ ಎರಡು ಗುಂಪುಗಳು 19:1ರಲ್ಲಿ ತಮ್ಮ ಸ್ವರಗಳನ್ನು ಒಂದಾಗಿ ಕೂಡಿಸಿರಬಹುದಾಗಿದೆ. ಮರಣದ ಮೇಲೆ ಜಯ ಹೊಂದಿದ್ದ ಕ್ರೈಸ್ತರು ಇಪ್ಪತ್ತುನಾಲ್ಕು ಮಂದಿ ಹಿರಿಯರಿಂದ ಪ್ರತಿನಿಧಿಸಲ್ಪಡಬಹುದಾದ್ದರಿಂದ (ವ. 4ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ದೊಡ್ಡ ಗುಂಪು ಕೇವಲ ದೇವದೂತರನ್ನೊಳಗೊಂಡು ಇರುತ್ತದೆಂದು ಅನೇಕರು ನಂಬುತ್ತಾರೆ.

ಪರಲೋಕದ ಗಾನವೃಂದದವರು ಹೀಗೆ ಹಾಡಿದರು, **ಹಲ್ಲೆಲೂಯಾ; ಜಯವೂ ಪ್ರಭಾವವೂ ಶಕ್ತಿಯೂ ನಮ್ಮ ದೇವರಲ್ಲಿ ಉಂಟು. ರಕ್ಷಣೆ ಪ್ರಭಾವ,** ಮತ್ತು **ಶಕ್ತಿಯು** ಇವುಗಳು ಪುಸ್ತಕದಲ್ಲಿ ಈ ಮುಂಚೆ ದೇವರ ಗುಣಾತೀಶಗಳಾಗಿರುತ್ತವೆ (ನೋಡಿರಿ 4:11; 5:12; 7:10, 12; 12:10). ಗ್ರೀಕ್ ವಾಕ್ಯದಲ್ಲಿ ಪ್ರತಿಯೊಂದಕ್ಕೂ ಒತ್ತು ಕೊಡುವದಕ್ಕೋಸ್ಕರ ಒಂದೊಂದು ಪದದ ಮುಂದೆ ನಿರ್ದಿಷ್ಟ ಗುಣವಾಚಿ (ἡ, *hē*, "the") ಕಾಣಿಸಿಕೊಳ್ಳುತ್ತದೆ. ಪ್ರಭಾವ ಮತ್ತು ಶಕ್ತಿಗಳು ವಿಶಿಷ್ಟವಾಗಿ ತನಗೆ ಸೇರಿದವುಗಳೆಂದು ರೋಮ್ ನಗರಿಯು ನಂಬಿದ್ದಳು; ಕೈಸರನು ಲೋಕದ ರಕ್ಷಕನೆಂದು ವಾದಿಸುತ್ತಿದ್ದಳು. ಆದಾಗ್ಯೂ ಆಕೆಯ ಕಲ್ಪನೆಯು ತಪ್ಪಾಗಿತ್ತು. ರಕ್ಷಣೆ, ಪ್ರಭಾವ, ಮತ್ತು ಶಕ್ತಿಗಳ ಮೇಲೆ ಯೆಹೋವನಿಗೆ ಮಾತ್ರವೇ ಪ್ರತ್ಯೇಕವಾದ ಹಕ್ಕುಗಳಿದ್ದವು. William Barclayನು ಹೀಗೆ ಬರೆದನು,

> ದೇವರ ಈ ಶ್ರೇಷ್ಠ ಗುಣಾತೀಶಯಗಳೊಳಗೆ ಒಂದೊಂದು ಮಾನವನ ಹೃದಯದೊಳಗೆ ತನ್ನದೇ ಆಗಿರುವ ಪ್ರತ್ಯುತ್ತರವನ್ನು ಬಡಿದೆಬ್ಬಿಸಬೇಕು. ದೇವರ *ರಕ್ಷಣೆ*ಯು ಮಾನವನ *ಕೃತಜ್ಞತಾಭಾವ*ವನ್ನು; ದೇವರ *ಮಹಿಮೆ*ಯು ಮಾನವನ ಭಯಭಕ್ತಿಯನ್ನು; ದೇವರ *ಶಕ್ತಿ*ಯು ... ಮಾನವನ ವಿಶ್ವಾಸವನ್ನು ಎಚ್ಚರಗೊಳಿಸತಕ್ಕದ್ದು ... ಕೃತಜ್ಞತಾಭಾವ, ಭಯಭಕ್ತಿ, ವಿಶ್ವಾಸ - ಇವುಗಳು ನಿಜವಾದ ಸ್ತುತಿಯ ಘಟಕವಾಗಿರುವಂಥ ಅಂಶಗಳಾಗಿವೆ.[8]

"ರಕ್ಷಣೆ" ಎಂಬ ಪದವು ಬಹುಶಃ ಇಲ್ಲಿ ವ್ಯಾಪಕವಾದ ಅರ್ಥದಲ್ಲಿ ಬಳಸಲ್ಪಟ್ಟಿರಬಹುದಾಗಿದೆ. Frank Packನು ಬರೆದದ್ದೇನೆಂದರೆ, "ಪ್ರಸ್ತಾಪಿಸಲ್ಪಟ್ಟಿರುವ ರಕ್ಷಣೆಯು ಗತಕಾಲದ ಪಾಪಗಳಿಂದ ವಿಮೋಚಿಸಲ್ಪಟ್ಟಿರುವಿಕೆಯನ್ನು ಮಾತ್ರವೇ ಸೂಚಿಸುವದಿಲ್ಲ ಆದರೆ ಕ್ರೈಸ್ತರಿಗೆ ಅವರ ಸಕಲ ಸಂಕಷ್ಟಗಳು ಹಾಗೂ ಹಿಂಸೆಗಳಿಂದ ರಕ್ಷಣೆಯಾಗುವಿಕೆ ಹಾಗೂ ಅವರ ಕೊನೆಯ ಜಯಕ್ಕೆ ಬರುವದನ್ನು ಸೂಚಿಸುತ್ತದೆ."[9] J. W. Robertsನು ಅರ್ಥವನ್ನು ಇನ್ನಷ್ಟು ವಿಸ್ತಾರವಾಗಿ ವಿವರಿಸುತ್ತಾನೆ: "ರಕ್ಷಣೆ ಎಂದರೆ ದೇವಜನರು ನಿತ್ಯವಾದ ರಾಜ್ಯದೊಳಗೆ ಬಿಡುಗಡೆಗೊಳಿಸಲ್ಪಡುವಿಕೆ ಮಾತ್ರವೇ ಆಗಿರುವದಿಲ್ಲ (2 ತಿಮೊಥೆ 4:18) ಆದರೆ ದೇವರ ಉದ್ದೇಶವು ಸಾಧಿಸಲ್ಪಟ್ಟಿರುವದನ್ನು ಸಹ ಸೂಚಿಸುತ್ತದೆ."[10]

**ವಚನ 2.** ಗಾಯಕರು ಏಕೆ ದೇವರ ಕುರಿತಾಗಿ ಅಂತಹ ಘನವಾದ ಕೊಂಡಾಡುವ ಪದಗಳಲ್ಲಿ ಮಾತಾಡಿದರು? ಯಾಕೆಂದರೆ **ಆತನ ನ್ಯಾಯತೀರ್ಪುಗಳು ಸತ್ಯವೂ ನ್ಯಾಯವೂ ಆಗಿವೆ** (ನೋಡಿರಿ 15:3; 16:7). ನಮ್ಮ ನ್ಯಾಯತೀರ್ಪುಗಳು ಅನೇಕ ಸಾರಿ ಲೋಪಗಳಿಂದ ಕೂಡಿರುತ್ತವೆ, ಆದರೆ ದೇವರ ನ್ಯಾಯತೀರ್ಪುಗಳು ಯಾವಾಗಲೂ ಸತ್ಯವಾಗಿವೆ ಹಾಗೂ ನ್ಯಾಯವಾಗಿರುತ್ತವೆ.

> ನ್ಯಾಯತೀರಿಸುವಿಕೆಯಲ್ಲಿ ಮೂರು ಕಾರಣಗಳಿಗಾಗಿ ದೇವರೊಬ್ಬನೇ ಪರಿಪೂರ್ಣನಾಗಿದ್ದಾನೆ. ಮೊದಲನೆಯದಾಗಿ, ಆತನೊಬ್ಬನೇ ಯಾವದೇ ಮನುಷ್ಯನ ಹೃದಯಂತರಾಳದ ಯೋಚನೆಗಳನ್ನು ಹಾಗೂ ಬಯಕೆಗಳನ್ನು ಕಾಣಬಲ್ಲನು. ಎರಡನೆಯದಾಗಿ, ಪೂರ್ವಕಲ್ಪಿತ ಅಭಿಪ್ರಾಯವನ್ನಿಟ್ಟುಕೊಳ್ಳದೆ ನ್ಯಾಯತೀರಿಸುವಂಥ ನಿರ್ಮಲತೆಯು ಆತನಲ್ಲಿ ಮಾತ್ರವೇ ಇರುತ್ತದೆ. ಮೂರನೆಯದಾಗಿ, ಸರಿಯಾದ ನ್ಯಾಯತೀರ್ಪನ್ನು ಹುಡುಕಿಕೊಂಡು ಅದನ್ನು ಅನ್ವಯಿಸುವಂಥ ಶಕ್ತಿಯು ಆತನೊಬ್ಬನಿಗೆ ಮಾತ್ರವೇ ಇರುತ್ತದೆ.[11]

ಬಳಿಕ ಗಾನವು ಸಾಮಾನ್ಯವಾದದ್ದರಿಂದ ನಿರ್ದಿಷ್ಟವಾದದ್ದರ ಕಡೆಗೆ - ಸತ್ಯವೂ ನ್ಯಾಯವೂ ಆಗಿರುವ ನಿರ್ದಿಷ್ಟವಾದ ನ್ಯಾಯತೀರ್ಪಿನ ಕಡೆಗೆ - ತಿರುಗಿಕೊಳ್ಳುತ್ತದೆ: **ತನ್ನ ಜಾರತ್ವದಿಂದ ಭೂಲೋಕವನ್ನು ಕೆಡಿಸುತ್ತಿದ್ದ ಆ ಮಹಾ ಜಾರಸ್ತ್ರೀಗೆ ಆತನು ನ್ಯಾಯತೀರಿಸಿ**

**ಅವಳು ಆತನ ಸೇವಕರನ್ನು ಕೊಂದದ್ದಕ್ಕಾಗಿ ಅವಳಿಗೆ ಪ್ರತಿದಂಡನೆಯನ್ನು ಮಾಡಿದ್ದಾನೆ. ಮಹಾ ಜಾರಸ್ತ್ರೀ** ಯು ರೋಮ್ ನಗರಿಯಾಗಿದ್ದಳು (17:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ರೋಮ್ ನಗರಿಯು "ಪ್ರಾಚೀನ ಸಮಾಜದ ಪ್ರತಿಯೊಂದು ಕ್ಷೇತ್ರಕ್ಕೂ ಕೆಟ್ಟತನವು ಸುರಿಸಲ್ಪಟ್ಟ ಕೇಂದ್ರವಾಗಿತ್ತು"; ಆಕೆಯು "ಯಾವ ಕಡೆಗೆ ಒಬ್ಬ ಮನುಷ್ಯನ ಮನಸ್ಸಿನಲ್ಲಿ ಹುಟ್ಟುವ ಎಲ್ಲಾ ಪೈಶಾಚಿಕ ಉಪಾಯಗಳು [ಹರಿಯುತ್ತಿದ್ದವೋ] ಆ ಕೇಂದ್ರ"[12] ಆಗಿದ್ದಳು. ಆಕೆಯ ಪಾಪಗಳು "ಒಂದರ ಮೇಲೊಂದು ಸೇರಿ ಆಕಾಶದ ಪರ್ಯಂತರಕ್ಕೂ ಬೆಳೆದಿದ್ದವು" (18:5). ಹೀಗಿರುವದರಿಂದ ಆಕೆಯನ್ನು ಕೊನೆಗೂ ದೇವರು "ಜ್ಞಾಪಿಸಿಕೊಂಡನು" (16:19; 18:5).

**ವಚನ 3. ಎರಡನೆಯ ಸಾರಿ - ಹಲ್ಲೆಲೂಯಾ ಎಂದು ಆರ್ಭಟಿಸಿ - ಅವಳ ದಹನದಿಂದುಂಟಾದ ಹೊಗೆಯು ಯುಗಯುಗಾಂತರಗಳಲ್ಲಿಯೂ ಏರಿ ಹೋಗುತ್ತದೆ ಎಂದು ಹೇಳಿದರು. ಹೊಗೆಯು ಯುಗಯುಗಾಂತರಗಳಲ್ಲಿಯೂ** ಏರಿ ಹೋಗುತ್ತಿರುವದು ರೋಮಿನ ಬೀಳುವಿಕೆಯು ಶಾಶ್ವತವಾಗಿರಲಿತ್ತು ಎಂಬುದನ್ನು ಮತ್ತೊಮ್ಮೆ ದೃಢಪಡಿಸುತ್ತದೆ (ನೋಡಿರಿ 18:21-23). (ಈ ಪರಿಭಾಷೆಯನ್ನು ಯೆಶಾಯ 34:9, 10ರೊಂದಿಗೆ ಹೋಲಿಸಿರಿ; ನೋಡಿರಿ ಯೂದನು 7.)

**ವಚನ 4.** ಸ್ತುತಿಸುವಿಕೆಯು ಮುಂದುವರೆಯುತ್ತದೆ: **ಆಗ ಇಪ್ಪತ್ತುನಾಲ್ಕು ಮಂದಿ ಹಿರಿಯರೂ ಆ ನಾಲ್ಕು ಜೀವಿಗಳೂ ಅಡ್ಡಬಿದ್ದು ಸಿಂಹಾಸನದ ಮೇಲೆ ಕೂತಿರುವ ದೇವರಿಗೆ ನಮಸ್ಕಾರ ಮಾಡಿ - ಆಮೆನ್; ಹಲ್ಲೆಲೂಯಾ, ಅಂದರು. ಇಪ್ಪತ್ತುನಾಲ್ಕು ಮಂದಿ ಹಿರಿಯರು** ಮತ್ತು **ನಾಲ್ಕು ಜೀವಿಗಳು** ಮೊದಲ ಬಾರಿಗೆ 4ನೇ ಅಧ್ಯಾಯದ ಸಿಂಹಾಸನದ ದೃಶ್ಯದಲ್ಲಿ ಪರಿಚಯಿಸಲ್ಪಟ್ಟರು (ನೋಡಿರಿ 4:4, 6). ಇಪ್ಪತ್ತುನಾಲ್ಕು ಹಿರಿಯರು ಜಯಶಾಲಿಗಳಾಗಿರುವ ಕ್ರೈಸ್ತರನ್ನು ಪ್ರತಿನಿಧಿಸುತ್ತಾರೆ. ನಾಲ್ಕು ಜೀವಿಗಳು ದೇವದೂತರೊಳಗಿನ ವಿಶೇಷವಾದ ತರಹದವರಾಗಿದ್ದು, ಎಲ್ಲಾ ಸೃಷ್ಟಿಗೆ ಸಂಕೇತವಾಗಿರುವ ಜೀವಿಗಳು ಅಥವಾ ಬರೀ ದೇವರ ಗುಣಸ್ವಭಾವವನ್ನು ಪರಲೋಕದ ನೆನಪಿಸುವವರಷ್ಟೇ ಆಗಿರಬಹುದಾಗಿದೆ. ಎರಡು ಗುಂಪುಗಳ ಅತ್ಯಂಥ ಪ್ರಾಮುಖ್ಯವಾದ ಗುಣಸ್ವಭಾವವೆಂದರೆ ಅವರು ಒಟ್ಟಾರೆಯಾಗಿ ದೇವರನ್ನು ಘನಪಡಿಸುವದೇ (5:8, 14; 17:11). ಪ್ರಕಟನೆ ಪುಸ್ತಕದಲ್ಲಿ ಅವರ ಕೊನೆಯ ಕಾಣಿಸುವಿಕೆಯಾಗಿರುವ ಇದರಲ್ಲಿ, ಮತ್ತೊಂದಾವರ್ತಿ ಅವರು ಕರ್ತನ ಮುಂದೆ ಅಡ್ಡ ಬೀಳುತ್ತಾರೆ. ಪರಲೋಕದ ಗಾನವೃಂದವು ಹೇಳಿದ ಸಂಗತಿಗೆ ಅವರು "ಆಮೆನ್" ಜೊತೆಗೂಡಿಸಿದ್ದರು, **ಹಲ್ಲೆಲೂಯಾ** ಎಂದು ಕೂಗಿದ್ದರು. **ಆಮೆನ್** ಎಂಬುದು ಮನಃಪೂರ್ವಕವಾದ ಅನುಮೋದನೆಯನ್ನು ಸೂಚಿಸುತ್ತದೆ (3:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು ಮಾಡಿದ್ದ ಕಾರ್ಯಕ್ಕಾಗಿ ಅವರು ಆತನನ್ನು ಸ್ತುತಿಸಿದರು.

**ವಚನ 5.** 1ರಿಂದ 4 ವಚನಗಳಲ್ಲಿ, ದೇವರು *ಮಾಡಿದ* ಸಂಗತಿಗಾಗಿ ಮಾಡಲಾದ ಸ್ತುತಿಯಲ್ಲಿ ಅಡಕವಾಗಿದ್ದು ಆತನ *ಗುಣಸ್ವಭಾವ*ಕ್ಕಾಗಿ ಮಾಡಿದ ಸ್ತೋತ್ರವೇ: 1ನೇ ವಚನವು ಆತನು ನಮ್ಮ ಮಹಿಮಕರವಾದ ಹಾಗೂ ಶಕ್ತಿಶಾಲಿ ರಕ್ಷಕನು ಎಂಬುದನ್ನು ಸೂಚ್ಯಾರ್ಥವಾಗಿ ತಿಳಿಸಿತ್ತು. 2ನೇ ವಚನವು ಆತನು ನ್ಯಾಯವಾದವನು, ಸತ್ಯವಂತವೂ, ಮತ್ತು ನೀತಿಯುಳ್ಳವನು ಎಂಬುದನ್ನು ಸೂಚಿಸಿತು. ಹೇಗೂ, 5ನೇ ವಚನದಿಂದ ಮೊದಲ್ಗೊಂಡು ಹಾಡು ದೇವರು ಯಾರಾಗಿದ್ದಾನೆಂಬುದಕ್ಕಾಗಿ ಮಾಡಿದ ಸ್ತೋತ್ರಗಳ ಮೇಲೆ *ಗಮನವನ್ನು ಹರಿಸುತ್ತದೆ.*

**ಆಮೇಲೆ ಸಿಂಹಾಸನದ ಕಡೆಯಿಂದ ಬಂದ ಒಂದು ಶಬ್ದವು - ದೇವರ ದಾಸರೆಲ್ಲರೇ, ದೇವರಿಗೆ ಭಯಪಡುವ ಹಿರಿಕಿರಿಯರೇ, ನಮ್ಮ ದೇವರನ್ನು ಕೊಂಡಾಡಿರಿ ಎಂದು ಹೇಳಿತು.** ಇದು

ಬಹುಶಃ "ಸಿಂಹಾಸನದ ಮಧ್ಯದಲ್ಲಿ ಅದರ ನಾಲ್ಕು ಕಡೆಗಳಲ್ಲಿ" (4:6) ಇದ್ದ ಜೀವಿಗಳಲ್ಲೊಂದು ನುಡಿದಿರುವ **ಶಬ್ದ** ಆಗಿರಬಹುದಾಗಿದೆ. ಶಬ್ದವು **ದೇವರನ್ನು ಕೊಂಡಾಡಿ**ತು ಎಂದು ಹೇಳಲ್ಪಟ್ಟಿದೆಯಾದ್ದರಿಂದ, ಅದು ಬಹುಶಃ ಸ್ವತಃ ದೇವರ ಶಬ್ದವಾಗಿರಲಿಲ್ಲ; ಅದು ಯೇಸುವಿನ ಶಬ್ದವೂ ಆಗಿರಲಿಕ್ಕಿಲ್ಲ, ಆತನು ಸಾಮಾನ್ಯವಾಗಿ "*ನಮ್ಮ* ದೇವರು" ಹೇಳಿರುವದಿಲ್ಲ (ನೋಡಿರಿ ಯೋಹಾನ 20:17). (ಈ ಪರಿಭಾಷೆಯನ್ನು ಕೀರ್ತನೆ 135:1, 20ರೊಂದಿಗೆ ಹೋಲಿಸಿ ನೋಡಿರಿ.) **ದಾಸರು** ಎಂಬುದು "ಕ್ರೈಸ್ತರು" ಎಂದು ಹೇಳುವ ಇನ್ನೊಂದು ವಿಧವಾಗಿರುತ್ತದೆ (1:1ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ); ಇದು ಕರ್ತನ ಕಡೆಗಿರುವ ನಮ್ಮ ಋಣವನ್ನು ಕುರಿತು ಒತ್ತಿ ಹೇಳುತ್ತದೆ. **ಭಯಪಡುವ** ಎಂಬುದು ಈ ವ್ಯಕ್ತಿಗಳೂ ಭಯಭಕ್ತಿ ಹಾಗೂ ಗೌರವದ ಮೂಲಕವಾಗಿ, ತಮ್ಮ ಜೀವಿತಗಳನ್ನು ಕರ್ತನಿಗೆ ಒಪ್ಪಿಸಿಕೊಂಡಿದ್ದರು ಎಂಬುದನ್ನು ಒತ್ತಿ ಹೇಳುತ್ತದೆ (ಪ್ರಸಂಗಿ 12:13). **ಹಿರಿಕಿರಿಯರೇ** ಎಂಬ ಪದವು *ಪ್ರತಿಯೊಬ್ಬ* ಕ್ರೈಸ್ತನು ಆತನನ್ನು ಸ್ತುತಿಸಬೇಕೆಂಬುದನ್ನು ಒತ್ತು ಕೊಟ್ಟು ಹೇಳುತ್ತದೆ; "ಎಲ್ಲಾ ... ಕುಲ, ವರ್ಗ, ಮತ್ತು ಸಂಸ್ಕೃತಿಗಳ ಭಿನ್ನತೆಗಳು ಈಗ ಇತಿಹಾಸವಾಗಿರುತ್ತದೆ."[13]

**ವಚನ 6.** ಶಬ್ದಕ್ಕೆ ಪ್ರತ್ಯುತ್ತರವಾಗಿ, ಯೋಹಾನನು ತಕ್ಷಣವೇ **ಜನರ ದೊಡ್ಡ ಗುಂಪಿನ ಶಬ್ದದಂತೆಯೂ ಜಲಪ್ರವಾಹಘೋಷದಂತೆಯೂ ಗಟ್ಟಿಯಾದ ಗುಡುಗಿನ ಶಬ್ದದಂತೆಯೂ ಇದ್ದ ಒಂದು ಶಬ್ದವನ್ನು ಕೇಳಿದನು.** ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆಯೂ ಇದೇ ರೀತಿಯ ಮಾತುಗಳನ್ನು ಬಳಸಲ್ಪಟ್ಟಿರುತ್ತವೆ (1:15; 14:2), ಅವುಗಳು ನಂತರ ಬರುವ ಹಾಡಿನ ಶಕ್ತಿಯನ್ನು ಹಾಗೂ ವೈಭವಪೂರ್ಣತೆಯನ್ನು ಒತ್ತಿ ಹೇಳುತ್ತವೆ.

ಜನರ ದೊಡ್ಡ ಗುಂಪು ಹೀಗೆ ಹಾಡಿತು, **ಹಲ್ಲೆಲೂಯಾ; ಸರ್ವಶಕ್ತನಾಗಿರುವ ನಮ್ಮ ದೇವರಾದ ಕರ್ತನು ಆಳುತ್ತಾನೆ.** ಹಾಡಿನ ಈ ಭಾಗವು ಸಂಕ್ಷಿಪ್ತವಾಗಿದೆ ಆದರೆ ಶಕ್ತಿಯಿಂದ-ಭರಿತವಾದದ್ದು: **ಕರ್ತನು** ಎಂಬ ಪದವು "ಒಡೆಯ" ಅಥವಾ "ದೊರೆ" ಎಂದರ್ಥವಾಗಿದೆ. **ಸರ್ವಶಕ್ತನು** ಎಂಬುದು ಪ್ರಕಟನೆ ಪುಸ್ತಕದಲ್ಲಿ ದೇವರ ವರ್ಣನೆಗೆ ಬಳಸುವ ವಿಶಿಷ್ಟವಾದ ಪದವಾಗಿರುತ್ತದೆ. ಈ ಪದವು ಪ್ರಕಟನೆ ಪುಸ್ತಕದಲ್ಲಿ ಒಂಭತ್ತು ಸಾರಿ ಕಾಣಿಸಿಕೊಳ್ಳುತ್ತದೆ ಮತ್ತು ಹೊಸ ಒಡಂಬಡಿಕೆಯೊಳಗೆ ಇನ್ನು ಒಂದೇ ಒಂದು ಸಾರಿ ಕಾಣಿಸುತ್ತದೆ. ಅಕ್ಷರಶಃ, ಈ ಪದದ ಅರ್ಥವು "ಸಮಸ್ತವನ್ನು ತನ್ನ ನಿಯಂತ್ರಣದಲ್ಲಿ ಇಟ್ಟುಕೊಂಡಿರುವಾತನು"[14] ಎಂದಾಗಿರುತ್ತದೆ. ಇದು Handelನ ಪಲ್ಲವಿಯಲ್ಲಿ ಬಳಸಲ್ಪಟ್ಟಿರುವ "ಸರ್ವಶಕ್ತ" ಎಂಬದುರ ಲ್ಯಾಟಿನ್ ಭಾಷೆಯ ರೂಪದಂತೆಯೇ ಅರ್ಥವನ್ನು ಹೊಂದಿದೆ. **ಆಳುತ್ತಾನೆ** ಎಂಬ ಪದವು ಸಹ ಮಹತ್ವಪುರ್ಣವಾಗಿರುತ್ತದೆ. ಒಂದು ಭೂಲೋಕದ ದೃಷ್ಟಿಕೋನದಿಂದ ನೋಡುವಾಗ, ಚಕ್ರವರ್ತಿಯೇ ಎಲ್ಲದರ ಮೇಲೆ ಹತೋಟಿ ಹೊಂದಿರುವಂತೆ ತೋರುತ್ತಿತ್ತು, ಆದರೆ ಅದು ಕೇವಲ ಒಂದು ಭ್ರಮೆಯಷ್ಟೇ ಆಗಿತ್ತು. ಆಳುತ್ತಿರುವಾತನು ಸ್ವತಃ ದೇವರೇ ಆಗಿದ್ದನು.

ಮೂಲ ವಾಕ್ಯದಲ್ಲಿ, "ಆಳುತ್ತಾನೆ" ಎಂದು ಅನುವಾದಿಸಿರುವ ಪದವು (ἐβασίλευσεν, *ebasileusen*, ಇದು βασιλεύω, *basileuō* ಎಂಬದರಿಂದ ಬಂದದ್ದು), ಭೂತಕಾಲರೂಪದಲ್ಲಿರುತ್ತದೆ; ಒಂದು ಅಕ್ಷರಶಃ ಅನುವಾದವು "ಸರ್ವಶಕ್ತನಾಗಿರುವ, ನಮ್ಮ ದೇವರಾದ ಕರ್ತನು ಆಳಿದನು" ಎಂಬುದಾಗಿರುತ್ತದೆ. ಜನರ ದೊಡ್ಡ ಗುಂಪು ತಮ್ಮ ದಿನದಲ್ಲಿನ ಜಯವನ್ನು ಕೊಂಡಾಡುತ್ತಿದ್ದರಾದ್ದರಿಂದ, ಬಹುಪಾಲು ತರ್ಜುಮೆಗಳು ಈ ಪದವನ್ನು ವರ್ತಮಾನ ಕಾಲರೂಪದಲ್ಲಿ ಬಳಸುತ್ತವೆ ("ಆಳುತ್ತಾನೆ"); ಆದರೆ ದೇವರು ರೋಮಿನ ಮೇಲೆ ಗಳಿಸಿದ ಈ ಜಯಕ್ಕೆ ಮುಂಚೆ ಆಳ್ವಿಕೆಯನ್ನು ಮಾಡಲಿಲ್ಲ ಎಂಬುದಾಗಿ ಈ ತರ್ಜುಮೆಗಳಿಂದ ನಿರ್ಧಾರಕ್ಕೆ ಬಂದು ಬಿಡಬೇಡಿರಿ (11:17ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ದೇವರು

ಸದಾಕಾಲವೂ ಆಳ್ವಿಕೆ ಮಾಡಿರುತ್ತಾನೆ. ಮೋಶೆಯು "ಯೆಹೋವನೇ ಯುಗಯುಗಾಂತರಗಳಲ್ಲಿಯೂ ಆಳುವನು" ಎಂದು ಹಾಡಿದನು (ವಿಮೋಚನಕಾಂಡ 15:18). ದಾವೀದನು "ಯೆಹೋವನು ಜಲಪ್ರಳಯದಲ್ಲಿ ಆಸೀನನಾಗಿದ್ದನು; ಆತನು ಸದಾಕಾಲವೂ ಅರಸನಾಗಿ ಕೂತಿರುವನು" ಎಂದು ಹೇಳಿದನು (ಕೀರ್ತನೆ 29:10). ದಾನಿಯೇಲನು ಅರಸನಿಗೆ ಹೇಳಿದ್ದೇನೆಂದರೆ "ಪರಾತ್ಪರನು ಮನುಷ್ಯರ ರಾಜ್ಯದಲ್ಲಿ ರಾಜನಾಗಿದ್ದಾನೆ" (ದಾನಿಯೇಲ 4:25). 6ನೇ ವಚನದ ಸಂದೇಶವು ಏನೆಂದರೆ ದೇವರು ಆಳ್ವಿಕೆ *ಮಾಡಿದ್ದನು*, ಆಳ್ವಿಕೆ *ಮಾಡುತ್ತಿದ್ದನು*, ಮತ್ತು *ಸದಾಕಾಲವೂ* ಆಳ್ವಿಕೆ ಮಾಡುವನು.

ಈ ಸತ್ಯವು ಮೊದಲನೆಯ ಶತಮಾನದ ಕ್ರೈಸ್ತರಿಗೆ ನಿರೀಕ್ಷೆಯನ್ನು ಒದಗಿಸಿತ್ತು. ಸಂಕಷ್ಟಗಳು ಮಧ್ಯದಲ್ಲಿ, ಅವರು ನಾಳೆಯ ದಿನವು ಉತ್ತಮವಾಗಿರುವದೆಂದು ನಂಬುವದಕ್ಕೆ ಶಕ್ತರಾಗಿದ್ದರು:

> ಕಪ್ಪು ಆಕಾಶದಲ್ಲಿ ಈಗಾಗಲೆ ಮುಂಜಾನೆಯ ಹೂವಿನ ಬೆರಳುಗಳಿಂದ ಪಟ್ಟೆಗಳನ್ನು ಎಳೆಯಲಾಗುತ್ತಿತ್ತು. ಅರಣ್ಯದಲ್ಲಿ [ಅವರು] ಸಮೃದ್ಧವಾದ ಮಳೆಯ ಶಬ್ದವನ್ನು ಕೇಳಬಹುದಿತ್ತು. ಕಳೆಗುಂದಿದ ಚಳಿಗಾಲವು ಈಗಾಗಲೆ ವಸಂತಕಾಲದ ಸಂಭ್ರಮದ ಶಬ್ದಗಳಿಂದ ಪ್ರಣಯಗೀತೆಯನ್ನು ಹಾಡುತ್ತಿತ್ತು. [ಅವರು] ಪ್ರತೀಕ್ಷೆಯ ತುದಿಗಾಲಲ್ಲಿ ನಿಂತಿದ್ದರು ...[15]

ಅವರು ತಮ್ಮ ನಿರೀಕ್ಷೆಯನ್ನು ಯಾವುದರ ಮೇಲೆ ಆಧಾರ ಮಾಡಿಕೊಂಡಿದ್ದರು? "ಯಾವದೇ ದೇಶದ ಜಯ"ದ ಮೇಲಾಗಲಿ ಅಥವಾ "ಯಾವದೇ ರಾಜಕೀಯ ಅಥವಾ ಆರ್ಥಿಕ ಯೋಜನೆಯ" ಮೇಲೆಯಾಗಲಿ ಅಲ್ಲ. ಬದಲಾಗಿ, ತಮ್ಮ ನಿರೀಕ್ಷೆಯನ್ನು "ದೇವರ ಸಂಪೂರ್ಣ ಅರಸುತನದ ಮೇಲೆಯೇ"[16] ಆಗಿತ್ತು.

## ಯಜ್ಞದ ಕುರಿಯಾದಾತನ ವಿವಾಹದ ಔತಣ (19:7-10)

**[7]ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ; ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ ಎಂದು ಹೇಳಿತು. [8]ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು. ಆ ನಾರುಮಡಿ ಅಂದರೆ ದೇವಜನರ ಸತ್ಕಾರ್ಯಗಳೇ. [9]ಇದಲ್ಲದೆ ಅವನು ನನ್ನ ಸಂಗಡ ಮಾತಾಡುತ್ತಾ - ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರಸಿಕೊಂಡವರು ಧನ್ಯರು ಎಂಬದಾಗಿ ಬರೆ ಎಂದು ನನಗೆ ಹೇಳಿ - ಈ ಮಾತುಗಳು ದೇವರ ಸತ್ಯವಚನಗಳಾಗಿವೆ, ಅಂದನು. [10]ಆಗ ನಾನು ಅವನಿಗೆ ನಮಸ್ಕಾರಮಾಡಬೇಕೆಂದು ಅವನ ಪಾದಗಳ ಮುಂದೆ ಬೀಳಲು ಅವನು - ಮಾಡಬೇಡ ನೋಡು, ನಾನು ನಿನಗೂ ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವ ನಿನ್ನ ಸಹೋದರರಿಗೂ ಜೊತೆಯ ದಾಸನಾಗಿದ್ದೇನೆ; ದೇವರಿಗೇ ನಮಸ್ಕಾರಮಾಡು ಅಂದನು. ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಆತ್ಮವೇ.**

ಪ್ರಕಟನೆ 19:7-10 ವಚನಗಳು "ಹಳೆಯ ಒಡಂಬಡಿಕೆಯ ಯೋಚನೆಯ ಕನಿಷ್ಠ ಮೂರು ಎಳೆಗಳನ್ನು ಒಂದಾಗಿ ಹೆಣೆಯುತ್ತವೆ, ಅವುಗಳೆಲ್ಲವೂ ಈ ಮುಂಚೆ ಕ್ರೈಸ್ತ ಸಾಹಿತ್ಯದಲ್ಲಿ ಬಳಸಲ್ಪಟ್ಟಿರುತ್ತವೆ, ಆದರೆ ಒಂದೇ ಸನ್ನಿವೇಶದಲ್ಲಿ ಒಟ್ಟಿಗೆ ಬಳಸಲ್ಪಟ್ಟಿರಲಿಲ್ಲ."[17]

ಮೊದಲನೆಯದು ದೇವರು ಹಾಗೂ ಮನುಷ್ಯರ ನಡುವಿನ ಸಂಬಂಧವನ್ನು ದೃಷ್ಟಾಂತಪಡಿಸುವದಕ್ಕೆ ಮದುವೆಯ ಸಂಕೇತವು ಬಳಸಲ್ಪಟ್ಟಿರುವದು. ಹಳೆಯ ಒಡಂಬಡಿಕೆಯಲ್ಲಿ, ಇಸ್ರಾಯೇಲ್ಯವು ದೇವರೊಂದಿಗೆ ಮದುವೆಯಾಗಿರುವದಾಗಿ ಚಿತ್ರಿಸಲ್ಪಟ್ಟಿದೆ (ಯೆಶಾಯ 50:1; ಯೆರೆಮೀಯ 2:32; ಹೋಶೇಯ 2:19, 20; ನೋಡಿರಿ ಯೆಶಾಯ 54:1, 5-7; 62:5; ಯೆರೆಮೀಯ 3:14; 31:32; ಯೆಹೆಜ್ಕೇಲ 16:8). ಈ ಚಿತ್ರಣವು ಹೊಸ ಒಡಂಬಡಿಕೆಯಲ್ಲಿ ಪುನರಾವರ್ತಿಸಲ್ಪಟ್ಟಿರುತ್ತದೆ. ಹಳೇಯ ಒಡಂಬಡಿಕೆಯಲ್ಲಿ, ಮದುವೆಯ ಸಾದೃಶ್ಯವು ಬಹುವಾಗಿ ನಕಾರಾತ್ಮಕ ಸನ್ನಿವೇಶದಲ್ಲಿ ಬಳಸಲ್ಪಟ್ಟಿದೆ: ಇಸ್ರಾಯೇಲ್ಯವು ತನ್ನ ಆತ್ಮೀಕ ಗಂಡನಾದ ಯೆಹೋವನಿಗೆ ಅಪನಂಬಿಗಸ್ತಳಾಗಿದ್ದಳು. ಹೊಸ ಒಡಂಬಡಿಕೆಯಲ್ಲಿ, ಸಾಂಕೇತಿಕತೆಯು ಹೆಚ್ಚು ಸಕಾರಾತ್ಮಕ ವಿಧದಲ್ಲಿ ಬಳಸಲ್ಪಟ್ಟಿದೆ. ಮದುವೆಯ ಸಾಂಕೇತಿಕತೆಯು ಸುವಾರ್ತೆಯ ಕಥನಗಳಲ್ಲಿ ಹಾದು ಹೋಗುವದಾಗಿದೆ. ನಾವು ಮದಲಿಂಗ ಮತ್ತು ಆತನ ಮಿತ್ರರ ಕುರಿತು ಓದುತ್ತೇವೆ (ಮತ್ತಾಯ 9:15; 25:1; ಮಾರ್ಕ 2:19; ಯೋಹಾನ 3:29), ಮಾತ್ರವಲ್ಲದೆ ವಿವಾಹ ಔತಣ ಮತ್ತು ವಿವಾಹದ ಉಡುಪುಗಳ ಬಗ್ಗೆ ಸಹ ಓದುತ್ತೇವೆ (ಮತ್ತಾಯ 22:2, 11, 12; ನೋಡಿರಿ ಲೂಕ 12:35, 36).

ಪೌಲನು ಸಭೆಯನ್ನು ಕ್ರಿಸ್ತನ ಮದಲಗಿತ್ತಿ ಎಂಬುದಾಗಿ ಮಾತಾಡಿದನು. ಆತನು ಕೊರಿಂಥದಲ್ಲಿರುವ ಸಭೆಗೆ ಹೀಗೆ ಹೇಳಿದನು, “ನಿಮ್ಮನ್ನು ಕ್ರಿಸ್ತನೆಂಬ ಒಬ್ಬನೇ ಪುರುಷನಿಗೆ ಶುದ್ಧ ಕನ್ಯೆಯಂತೆ ಒಪ್ಪಿಸಬೇಕೆಂದು ನಿಮ್ಮನ್ನು ಆತನಿಗೆ ನಿಶ್ಚಯಮಾಡಿದೆನಲ್ಲಾ” (2 ಕೊರಿಂಥ 11:2). ಆತನು ರೋಮಾಪುರದಲ್ಲಿರುವ ಕ್ರೈಸ್ತರಿಗೆ ಹೇಳಿದ್ದೇನೆಂದರೆ ಅವರು “ಧರ್ಮಶಾಸ್ತ್ರದ ಪಾಲಿಗೆ” ಸತ್ತವರಾಗಿರುವರು, ಹೀಗೆ ಅವರು “ಮತ್ತೊಬ್ಬನನ್ನು ಅಂದರೆ ಸತ್ತು ಜೀವಿತನಾಗಿ ಎದ್ದಾತನನ್ನು ಸೇರಿಕೊಂಡಿರಿ” ಎಂಬದೆ (ರೋಮಾ 7:4). ಬಹುಶಃ ಈ ಚರ್ಚೆಯಾಂಶದ ಮೇಲೆ ಪೌಲನು ಬರೆದ ಅತ್ಯಂಥ ಕಣ್ಸೆಳೆಯುವ ವಾಕ್ಯಭಾಗವು ಆತನು ಎಫೆಸದವರಿಗೆ ಬರೆದ ಪತ್ರಿಕೆಯಲ್ಲಿ ಸಿಕ್ಕುತ್ತದೆ:

> ಪುರುಷರೇ, ಕ್ರಿಸ್ತನು ಸಭೆಯನ್ನು ಪ್ರೀತಿಸಿದ ಪ್ರಕಾರವೇ ನಿಮ್ಮನಿಮ್ಮ ಹೆಂಡತಿಯರನ್ನು ಪ್ರೀತಿಸಿರಿ. ಆತನು ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು ... ಇದರ ನಿಮಿತ್ತದಿಂದ ಪುರುಷನು ತಂದೆತಾಯಿಗಳನ್ನು ಬಿಟ್ಟು ತನ್ನ ಹೆಂಡತಿಯನ್ನು ಸೇರಿಕೊಳ್ಳುವನು; ಅವರಿಬ್ಬರೂ ಒಂದೇ ಶರೀರವಾಗಿರುವರು ಎಂದು ಬರೆದದೆ. ನಾನು ಕ್ರಿಸ್ತನಿಗೂ ಸಭೆಗೂ ಇರುವ ಸಂಬಂಧವನ್ನು ಕುರಿತು ಮಾತಾಡುತ್ತಾ ಇದ್ದೇನೆ; ಇದುವರೆಗೆ ಗುಪ್ತವಾಗಿದ್ದ ಈ ಸತ್ಯಾರ್ಥವು ಬಹು ಗಂಭೀರವಾದದ್ದು (ಎಫೆಸ 5:25-32).

ಮದುವೆಯ ಸಂಬಂಧಷ್ಟು ನಿಕಟವಾಗಿರುವಂಥ ಹಾಗೂ ಆಪ್ತವಾಗಿರುವಂಥ ಮಾನವ ಬಂಧವು ಬೇರೆ ಇನ್ನಾವದೂ ಇರುವದಿಲ್ಲ. ಮದುವೆಯು ಏನೆಲ್ಲಾ ಆಗಿರತಕ್ಕದ್ದು ಮತ್ತು ಆಗಿರಬಲ್ಲದು ಎಂಬುದನ್ನು ಯೋಚಿಸಿರಿ. ಇದೆಲ್ಲಾ ಮತ್ತು ಇನ್ನೂ ಹೆಚ್ಚಿನದು ಕ್ರಿಸ್ತನು ಹಾಗೂ ಆತನ ಸಭೆಯ ನಡುವಿನ ಸಂಬಂಧದಲ್ಲಿ ಅಡಕವಾಗಿರುತ್ತದೆ. ನಂತರದಲ್ಲಿ, ಪ್ರಕಟನೆ ಪುಸ್ತಕವು ತನ್ನ ಅಂತಿಮಘಟ್ಟವನ್ನು ತಲುಪುವ ವೇಳೆ, “ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ” “ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ

ಶೃಂಗರಿಸಲ್ಪಟ್ಟು" ಬರುತ್ತದೆ (21:2). "ಹೊಸ ಯೆರೂಸಲೇಮು" "ಯಜ್ಞದ ಕುರಿಯಾದಾತನಿಗೆ ಹೆಂಡತಿಯಾಗತಕ್ಕ ಮದಲಗಿತ್ತಿ" ಎಂದು ಬಣ್ಣಿಸಲ್ಪಡುವದು (21:9).

ಎರಡನೆಯ ಎಳೆಯು ಒಂದು ಊಟ, ಅಥವಾ ಔತಣ, ಅದು ಅನ್ಯೋನ್ಯತೆ ಹಾಗೂ ಸಂಭ್ರಮದ ರೂಪಕವಾಗಿ ಬಳಸಲ್ಪಟ್ಟಿದೆ. ಹಳೆಯ ಒಡಂಬಡಿಕೆಯಲ್ಲಿ, ಈ ಸಾದೃಶ್ಯವು ಕ್ರೈಸ್ತತ್ವದ ಆಶೀರ್ವಾದಗಳ ಜಾಗತಿಕತೆಯನ್ನು ಕುರಿತು ಪ್ರವಾದಿಸುವದಕ್ಕಾಗಿ ಬಳಸಲ್ಪಟ್ಟಿತು: "ಇದಲ್ಲದೆ ಸೇನಾಧೀಶ್ವರನಾದ ಯೆಹೋವನು ಈ ಪರ್ವತದಲ್ಲಿ ಸಕಲಜನಾಂಗಗಳಿಗೂ ಸಾರವತ್ತಾದ ಮೃಷ್ಟಾನ್ನದಿಂದಲೂ ಮಡ್ಡಿಗಟ್ಟಿದ ಮೇಲೆ ಶೋಧಿಸಿದ ದ್ರಾಕ್ಷಾರಸದಿಂದಲೂ ಕೂಡಿದ ಔತಣವನ್ನು ಅಣಿಮಾಡುವನು ... ಮರಣವನ್ನು ಶಾಶ್ವತವಾಗಿ ನಿರ್ನಾಮ ಮಾಡುವನು; ಕರ್ತನಾದ ಯೆಹೋವನು ಎಲ್ಲರ ಮುಖದಲ್ಲಿನ ಕಣ್ಣೀರನ್ನು ಒರಸಿಬಿಡುವನು" (ಯೆಶಾಯ 25:6-8). ಯೇಸುವು ಇದೇ ರೀತಿಯ ಪರಿಭಾಷೆಯನ್ನು ಬಳಸುವವನಾಗಿ ಹೇಳಿದ್ದೇನೆಂದರೆ "ಇದಲ್ಲದೆ ಪೂರ್ವ ಪಶ್ಚಿಮ ಉತ್ತರ ದಕ್ಷಿಣ ದಿಕ್ಕುಗಳಿಂದಲೂ ಜನರು ಬಂದು ದೇವರ ರಾಜ್ಯದಲ್ಲಿ ಊಟಕ್ಕೆ ಕೂಡ್ರುವರು" (ಲೂಕ 13:29). ಅನ್ಯೋನ್ಯತೆಯನ್ನು ಸೂಚಿಸುವ ಊಟದ ಸಂಕೇತವು ಪ್ರಕಟನೆ 3:20ರಲ್ಲಿ ಬಳಸಲ್ಪಟ್ಟಿತು. ಕೆಲವು ಕೃತ್ಯಗಳು ಒಂದು ಭೋಜನಕ್ಕಿಂತಲೂ ಹೆಚ್ಚು ಸರ್ವಸಾಮಾನ್ಯವಾಗಿರುತ್ತವೆ. ಹಾಗಿದ್ದರೂ, ವಿಶೇಷ ಸಂದರ್ಭಗಳು ಬರುವಾಗ, ಯಾವ ಮಾರ್ಪಾಡೂ ಇಲ್ಲದೆ ಕೊಂಡಾಡದ ಒಂದು ಸಾರಭೂತವಾದ ಭಾಗವೆಂದರೆ ಅದು ಬೇರೆಯವರ ಸಂಗಡ ಕೂತುಕೊಂಡು ಭೋಜನವನ್ನು ಮಾಡುವದೇ ಆಗಿದೆ.

ಮೂರನೆಯ ಎಳೆಯು ಒಂದು ನಡವಳಿಕೆಯಲ್ಲಾದ ಬದಲಾವಣೆಯನ್ನು ಪ್ರತಿನಿಧಿಸುವದಕ್ಕೆ ಉಡುಪನ್ನು ಧರಿಸಿಕೊಳ್ಳುವ ಸಾದೃಶ್ಯವೇ (ಆದಿಕಾಂಡ 35:2; ಯೆಶಾಯ 52:1; 61:10; ಜೆಕರ್ಯ 3:4). ಪೌಲನು ಆಗಾಗ ಕ್ರೈಸ್ತರಿಗೆ ಪಾಪದ ದಾರಿಗಳನ್ನು ತೆಗೆದು "ಬಿಟ್ಟು" ನೀತಿಯನ್ನು "ಧರಿಸಿಕೊಳ್ಳಿರಿ" ಎಂದು ಹೇಳುತ್ತಿದ್ದನು (ರೋಮಾ 13:12, 14; ಎಫೆಸ 4:22, 24; ಕೊಲೊಸ್ಸೆ 3:8-10).

ಈ ಮೂರು ರೂಪಕಗಳು - ವಿವಾಹಗಳು, ಔತಣಕೂಟಗಳು, ಮತ್ತು ಉಡುಪುಗಳು - ಪ್ರಕಟನೆ 19ನೇ ಅಧ್ಯಾಯದಲ್ಲಿ ಒಂದಾಗಿ ಮಿಶ್ರಣಗೊಳ್ಳುತ್ತವೆಂಬುದನ್ನು ಅರ್ಥಮಾಡಿಕೊಳ್ಳಬೇಕಾದರೆ, ಯೆಹೂದಿ ವಿವಾಹ ಪದ್ಧತಿಗಳ ಕುರಿತು ಒಂದಿಷ್ಟನ್ನು ತಿಳಿದುಕೊಳ್ಳುವದು ಅವಶ್ಯಕವಾಗಿರುತ್ತದೆ. ಕೆಲವು ವಿಧಗಳಲ್ಲಿ, ಅವರ ಪದ್ಧತಿಗಳು ನಮ್ಮ ಪದ್ಧತಿಗಳಂತೆಯೇ ಇರುತ್ತವೆ; ಇನ್ನು ಕೆಲವು ವಿಧಗಳಲ್ಲಿ, ಅವುಗಳು ವ್ಯತ್ಯಾಸವಾಗಿರುತ್ತವೆ.

ಯೆಹೂದಿ ವಿವಾಹ ಪ್ರಕ್ರಿಯೆಯು ನಿಶ್ಚಿತಾರ್ಥದೊಂದಿಗೆ ಆರಂಭಗೊಳ್ಳುತ್ತಿತ್ತು. ನಿಶ್ಚಿತಾರ್ಥಕ್ಕೆ ಪೂರ್ವಭಾವಿಯಾಗಿ, ಅನೇಕ ಸಾರಿ ಅವರು ಇನ್ನೂ ಬಹಳ ಚಿಕ್ಕವರಾಗಿರುವಾಗಲೇ, ಭಾವಿ ಮದಲಗಿತ್ತಿ ಹಾಗೂ ಮದಲಿಂಗನ ಹೆತ್ತವರ ನಡುವೆ ಒಪ್ಪಂದಗಳು ಮಾಡಿಕೊಳ್ಳಲ್ಪಡುತ್ತಿದ್ದವು. ನಿಶ್ಚಿತಾರ್ಥವು ಒಂದು ರೀತಿಯಲ್ಲಿ ವಿವಾಹ ಒಡಂಬಡಿಕೆಯಂತೆ ಇರುತ್ತಿತ್ತು, ಆದರೆ ಇನ್ನೂ ಎಷ್ಟೋ ಹೆಚ್ಚು ನಿರ್ಬಂಧಕ್ಕೊಳಪಡಿಸುವದಾಗಿತ್ತು. ಒಬ್ಬ ಸ್ತ್ರೀಯು ಪುರುಷನೊಬ್ಬನಿಗೆ ನಿಶ್ಚಿತಾರ್ಥ ಮಾಡಲ್ಪಟ್ಟಳೆಂದರೆ, ವಿವಾಹ ಸಮಾರಂಭವು ಇನ್ನೂ ನಡೆಯದೆ ಮತ್ತು ದಾಂಪತ್ಯವು ನಿಷೇಕಪ್ರಸ್ತದಿಂದ ಸಾಂಗಗೊಳಿಸಲ್ಪಡದಿದ್ದರೂ, ಆಕೆಯು ಆತನ ಹೆಂಡತಿಯೆಂದು ಪರಿಗಣಿಸಲ್ಪಡುತ್ತಿದ್ದಳು (ನೋಡಿರಿ ಆದಿಕಾಂಡ 29:21). ಆಕೆಯು ತನ್ನ ಗಂಡನಿಗೆ ನಂಬಿಗಸ್ತಳಾಗಿರಬೇಕೆಂದು ಅಪೇಕ್ಷಿಸಲಾಗುತ್ತಿತ್ತು (ಧರ್ಮೋಪದೇಶಕಾಂಡ 22:23, 24). ಈ

ಸಂಬಂಧವು ಕೇವಲ ಮರಣ ಅಥವಾ ವಿಚ್ಛೇದನದಿಂದ ಮಾತ್ರವೇ ರದ್ದುಗೊಳಿಸಲ್ಪಡುವದಕ್ಕೆ ಸಾಧ್ಯವಿತ್ತು.

ಬಹುಶಃ ಈ ಪದ್ಧತಿಯ ಕುರಿತಾದ ಅತ್ಯಂಥ ಪರಿಚಿತವಾಗಿರುವ ದೃಷ್ಟಾಂತವು ಮರಿಯಳಿಗೆ ಯೋಸೇಫನೊಂದಿಗೆ ಆಗಿದ್ದ ನಿಶ್ಚಿತಾರ್ಥವೇ. "ಮರಿಯಳನ್ನು ಯೋಸೇಫನಿಗೆ *ನಿಶ್ಚಯಮಾಡಿರಲಾಗಿ ಅವರು ಕೂಡುವದಕ್ಕಿಂತ ಮುಂಚೆ* ಆಕೆಯು ಪವಿತ್ರಾತ್ಮನಿಂದ ಬಸುರಾಗಿದ್ದದ್ದು ತಿಳಿದುಬಂತು" (ಮತ್ತಾಯ 1:18; ಒತ್ತಿ ಹೇಳಿದ್ದು ನನ್ನದು). ಯೋಸೇಫನು ಆಕೆಗೆ ವಿಚ್ಛೇದನ ಕೊಡಬೇಕೆಂಬುದಾಗಿ ಆಲೋಚಿಸುತ್ತಿದ್ದನು (ಮತ್ತಾಯ 1:19); ಆದರೆ ಒಬ್ಬ ದೇವದೂತನು ಆತನಿಗೆ ಕಾಣಿಸಿಕೊಂಡು ಹೀಗೆ ಹೇಳಿದನು, "ಎಲೈ ಯೋಸೇಫನೇ, ದಾವೀದನ ವಂಶದವನೇ, ನಿನ್ನ ಹೆಂಡತಿಯಾದ ಮರಿಯಳನ್ನು ಸೇರಿಸಿಕೊಳ್ಳುವದಕ್ಕೆ ಅಂಜಬೇಡ. ಆಕೆಯ ಗರ್ಭವು ಪವಿತ್ರಾತ್ಮದಿಂದಲೇ ಆದದ್ದು" (ಮತ್ತಾಯ 1:20). ಯೋಸೇಫನು "ಕರ್ತನ ದೂತನು ಅಪ್ಪಣೆಕೊಟ್ಟ ಹಾಗೆ ತನ್ನ ಹೆಂಡತಿಯನ್ನು ಸೇರಿಸಿಕೊಂಡನು" (ಮತ್ತಾಯ 1:24). ಮೂಲ ವಾಕ್ಯದೊಳಗೆ ಮತ್ತಾಯ 1:20, 24ರಲ್ಲಿ "ಹಾಗೆ" ಎಂದು ಇರುವದಿಲ್ಲ. ಅಕ್ಷರಶಃ, 20ನೇ ವಚನದಲ್ಲಿ ಯೋಸೇಫನಿಗೆ "ಮರಿಯಳನ್ನು ನಿನ್ನ *ಹೆಂಡತಿಯಾಗಿ* ಮಾಡಿಕೋ" ಎಂದಿರುತ್ತದೆ, ಮತ್ತು 24ನೇ ವಚನದಲ್ಲಿ "ತನ್ನ *ಹೆಂಡತಿ*ಯನ್ನು ಸೇರಿಸಿಕೊಂಡನು" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು; KJV). ಅವರಿಗೆ ನಿಶ್ಚಿತಾರ್ಥವಾದ ಕೂಡಲೆ, ವಿವಾಹದ ಸಮಾರಂಭಕ್ಕೆ ಮುಂಚೆಯೇ ಮರಿಯಳು ಯೋಸೇಫನ ಹೆಂಡತಿಯೆಂದು ಪರಿಗಣಿಸಲ್ಪಟ್ಟಿದ್ದಳು.

ನಿಶ್ಚಿತಾರ್ಥದ ಕಾಲಾವಧಿಯು, ಪರಿಸ್ಥಿತಿಗಳ ಅನುಗುಣವಾಗಿ ಕ್ಲುಪ್ತ ಅಥವಾ ದೀರ್ಘಕಾಲ ಆಗಿರುತ್ತಿತ್ತು. ವಿವಾಹ ಒಡಂಬಡಿಕೆ ಹಾಗೂ ವಿವಾಹ ಔತಣದ ನಡುವಿನ ಕಾಲದ ಅಂತರವು ಹತ್ತು ಕನ್ಯೆಯರ ಸಾಮ್ಯದ ಮೂಲಕ ಸೂಚ್ಯಾರ್ಥವಾಗಿ ತಿಳಿಸಲ್ಪಟ್ಟಿದೆ (ಮತ್ತಾಯ 25:1-13). ಕಾಲವು ಎಷ್ಟೇ ಅಂತರದದಲ್ಲಿದ್ದರೂ ಸರಿಯೇ, ಈ ಕಾಲಾವಧಿಯು ಎದುರುನೋಡುವಿಕೆ, ನಿರ್ಮಲತೆ, ಹಾಗೂ ಸಿದ್ಧತೆಗಳಿಂದ ಕೂಡಿರುತ್ತಿತ್ತು. ಸಿದ್ಧತೆಯ ಭಾಗವಾಗಿ ಮದಲಗಿತ್ತಿಯು ತನ್ನ ವಿವಾಹದ ಉಡುಪುಗಳನ್ನು ಸಿದ್ಧ ಮಾಡಿಕೊಳ್ಳುತ್ತಿದ್ದಳು. ಮದಲಿಂಗನು ಮಾಡಿಕೊಳ್ಳುವ ಸಿದ್ಧತೆಯಲ್ಲಿ ಆತನು ವಧುದಕ್ಷಿಣೆಯನ್ನು ಕೊಡುವದು ಸೇರಿರುತ್ತಿತ್ತು (ನೋಡಿರಿ ಆದಿಕಾಂಡ 34:12).

ಕೊನೆಗೂ ವಿವಾಹದ ಸಮಯವು ಬಂದಿತ್ತು. William Hendriksenನು ಸಡಗರಗಳನ್ನು ಕುರಿತು ಬಣ್ಣಿಸುತ್ತಾನೆ:

> ಮದಲಗಿತ್ತಿಯು ತನ್ನನ್ನು ಸಿದ್ಧಪಡಿಸಿಕೊಂಡು ಶೃಂಗರಿಸಿಕೊಳ್ಳುತ್ತಾಳೆ. ಮದಲಿಂಗನು ತನ್ನ ತನಗಿರುವ ಅತ್ಯುತ್ತಮವಾದ ಉಡುಪನ್ನು ಧರಿಸಿಕೊಂಡು, ತನ್ನ ಸ್ನೇಹಿತರೊಂದಿಗೆ ಜೊತೆಗೂಡಿ ನಿಶ್ಚಿತಾರ್ಥದ ಮನೆಗೆ ಸಾಗುತ್ತಿದ್ದರೆ ಆತನ ಸ್ನೇಹಿತರು ಹಾಡುತ್ತಾ ಕೈಯಲ್ಲಿ ದೀಪಗಳನ್ನು ಹಿಡಿದಿರುತ್ತಾರೆ. ಆತನು ಮದಲಗಿತ್ತಿಯನ್ನು ಸ್ವೀಕರಿಸಿಕೊಂಡು ತನ್ನ ಸ್ವಂತ ಮನೆ ಅಥವಾ ತನ್ನ ಹೆತ್ತವರ ಮನೆಯ ಕಡೆಗೆ ತಿರುಗಿ ಮೆರವಣಿಗೆ ಹೋಗುವದರೊಂದಿಗೆ ಆಕೆಯನ್ನು ಕರೆದೊಯ್ಯುತ್ತಾನೆ.[18]

ಆಮಂತ್ರಿಸಲ್ಪಟ್ಟ ಅಥಿತಿಗಳು ವಿವಾಹ ದಂಪತಿಗಳೊಂದಿಗೆ ಒಂದು ವಿವಾಹದ ಔತಣಕ್ಕಾಗಿ ಸೇರಿಕೊಳ್ಳುತ್ತಾರೆ ಮತ್ತು ಅದು ಒಂದು ಅಥವಾ ಎರಡು ವಾರಗಳ ಕಾಲ ಸಾಗುತ್ತದೆ. ಅದು ಸಂಭ್ರಮದ ಕಾಲವಾಗಿರುತ್ತಿತ್ತು. ಅನೇಕ ಸಾರಿ ಆಮಂತ್ರಿಸಲ್ಪಟ್ಟ

ಅಥಿತಿಗಳಿಗೆ ವಿವಾಹದ ಉಡುಪುಗಳಿಲ್ಲದಿದ್ದರೆ ಅವುಗಳನ್ನು ಅವರಿಗೆ ಕೊಡಲಾಗುತ್ತಿತ್ತು. ಮತ್ತಾಯ 22:11, 12 ವಚನಗಳಲ್ಲಿನ ದೃಶ್ಯವು ಈ ಪದ್ಧತಿಯನ್ನು ಒಳಗೊಂಡಿರುತ್ತದೆ; ಮನುಷ್ಯನಿಗೆ ಒಂದು ವಿವಾಹದ ಉಡುಪು ಕೊಡಲ್ಪಟ್ಟಿತ್ತೆಂದು ತೋರುತ್ತದೆ, ಆದರೆ ಆತನು ಅದನ್ನು ಧರಿಸದಿರುವದಕ್ಕೆ ನಿರ್ಧರಿಸಿಕೊಂಡಿದ್ದನು.

ಯೆಹೂದಿ ವಿವಾಹದ ಸಾದೃಶ್ಯವು ಹೊಸ ಒಡಂಬಡಿಕೆಯಲ್ಲಿ ಯೇಸು ಹಾಗೂ ಆತನ ಹಿಂಬಾಲಕರ ನಡುವೆ ಇರುವ ವಿಶೇಷವಾದ ಸಂಬಂಧವನ್ನು ಕುರಿತು ಒತ್ತಿ ಹೇಳಲು ಬಳಸಲ್ಪಟ್ಟಿದೆ. ಪೌಲನು ಸಭೆಯನ್ನು ಕ್ರಿಸ್ತನ ಮದಲಗಿತ್ತಿಯಾಗಿ ಚಿತ್ರಿಸಿದನೆಂಬುದನ್ನು ನಾವು ಈಗಾಗಲೇ ನೋಡಿದ್ದೇವೆ. ಯೇಸುವು ತನ್ನ ಮದಲಗಿತ್ತಿಗಾಗಿ ಕೊಡಬೇಕಾಗಿ ಬಂದ ಬೆಲೆಯು ಆತನ ಸ್ವರಕ್ತವೇ ಆಗಿತ್ತು (ಅಪೊಸ್ತಲರ ಕೃತ್ಯಗಳು 20:28). ಒಂದು ಸುಂದರವಾದ ಹಳೆಯ ಗೀತೆಯು ಹೀಗೆ ಘೋಷಿಸುತ್ತದೆ,

> ಪರಲೋಕದಿಂದ ಆತನು ಬಂದು ಆಕೆಯನ್ನು ಹುಡುಕಿದನು
> ತನ್ನ ಪರಿಶುದ್ಧ ಮದಲಗಿತ್ತಿಯಾಗಿರಲು,
> ತನ್ನ ಸ್ವರಕ್ತದಿಂದ ಆತನು ಆಕೆಯನ್ನು ಕೊಂಡುಕೊಂಡನು,
> ಮತ್ತು ಆಕೆಯ ಜೀವಕ್ಕಾಗಿ ತಾನು ಮರಣಸಿದನು.[19]

ನಾವು ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ, ನಾವು ಸಭೆಯ ಭಾಗವಾದೆವು (ಅಪೊಸ್ತಲರ ಕೃತ್ಯಗಳು 2:47; KJV; 1 ಕೊರಿಂಥ 12:13; ಎಫೆಸ 1:22, 23), ಹೀಗೆ ಮದಲಗಿತ್ತಿಯ ಭಾಗವಾದೆವು. ಈಗಿನ ಕಾಲದಲ್ಲಿ, ನಾವು ಒಂದು "ನಿಶ್ಚಿತಾರ್ಥ" ಕಾಲಾವಧಿಯಲ್ಲಿ ಜೀವಿಸುತ್ತಿದ್ದೇವೆ, ಮದಲಿಂಗನು ಬಂದು "ನಮ್ಮನ್ನು ತನ್ನೊಂದಿಗೆ ಕರೆದೊಯ್ಯುವದಕ್ಕೆ" ಕಾಯುತ್ತಿದ್ದೇವೆ. ಸಭೆಯು ನಿಜವಾಗಿಯೂ ಕ್ರಿಸ್ತನಿಗೆ ಆತನು ಹಿಂದಿರುಗಿ ಬರುವ ತನಕವೂ ಆತನೊಂದಿಗೆ "ವಿವಾಹವಾಗುವದಕ್ಕೆ" ಸಾಧ್ಯವಿಲ್ಲ ಎಂದು ಕೆಲವರು ನಂಬುತ್ತಾರೆ - ಮತ್ತು ಆ ತಪ್ಪಿನಿಂದ ಕೂಡಿದ ಪ್ರಮೇಯವನ್ನು ಆಧರಿಸಿ ಸುಳ್ಳು ನಿರ್ಧಾರಕ್ಕೆ ಬಂದಿರುತ್ತಾರೆ. ಅವರು ನಿಶ್ಚಿತಾರ್ಥದ ಸ್ವಭಾವವನ್ನು ಅರ್ಥಮಾಡಿಕೊಂಡಿರುವದಿಲ್ಲ. ಸಭೆಯು ಸ್ಥಾಪಿಸಲ್ಪಟ್ಟ ದಿನದಿಂದಲೂ ಕ್ರಿಸ್ತನ ಮದಲಗಿತ್ತಿಯಾಗಿರುತ್ತದೆ. "ಭೂಮಿಯ ಮೇಲಿರುವ ಸಭೆಯು ... ಎರಡು ಕಾಲಗಳ ನಡುವೆ ಜೀವಿಸುವದಾಗಿದೆ, ಖಂಡಿತವಾಗಿಯೂ ಕ್ರಿಸ್ತನಿಗೆ ನಿಶ್ಚಯ ಮಾಡಲ್ಪಟ್ಟವಳು, ಆದರೆ ಒಡಂಬಡಿಕೆಯು ಪೂರ್ಣಗೊಳ್ಳುವದಕ್ಕಾಗಿ ಕಾಯುತ್ತಿರುವಳು."[20] ಯೇಸುವಿನೊಂದಿಗಿನ ನಮ್ಮ ಸಂಬಂಧವು ಈಗ ಮಧುರವಾಗಿರುತ್ತದೆ (1 ಪೇತ್ರ 1:8), ಆದರೆ ನಾವು ಆತನನ್ನು ಮುಖಾಮುಖಿಯಾಗಿ ನೋಡುವಾಗ ಇನ್ನಷ್ಟು ಅಧಿಕ ಮಧುರವಾಗಿರುವದು (1 ಯೋಹಾನ 3:2). ನಾವು ಕಾಯುವ ಸಮಯವು ಎದುರುನೋಡುವಿಕೆ, ನಿರ್ಮಲತೆ, ಹಾಗೂ ಸಿದ್ಧತೆಗಳಿಂದ ಕೂಡಿರುತ್ತದೆ.

ಶೀಘ್ರವಾಗಿ ಅಥವಾ ತಡವಾಗಿಯಾದರೂ, ಯೇಸುವು ತಮ್ಮ ಪ್ರತಿಜ್ಞೆಗೆ ನಂಬಿಗಸ್ತರಾಗಿರುವವರನ್ನು ಕರೆದೊಯ್ಯುವದಕ್ಕಾಗಿ ಹಿಂದಿರುಗಿ ಬರಲಿದ್ದಾನೆ. ಆತನು ತನ್ನ ಶಿಷ್ಯರಿಗೆ ಹೀಗೆ ಹೇಳಿದನು, "ನಾನು ... ತಿರಿಗಿ ಬಂದು ನಿಮ್ಮನ್ನು ಕರಕೊಂಡು ಹೋಗಿ ನನ್ನ ಬಳಿಗೆ ಸೇರಿಸಿಕೊಳ್ಳುವೆನು; ಯಾಕಂದರೆ ನಾನಿರುವ ಸ್ಥಳದಲ್ಲಿ ನೀವು ಸಹ ಇರಬೇಕು" (ಯೋಹಾನ 14:3). ಮದಲಿಂಗನು ತನ್ನ ಮದಲಗಿತ್ತಿಯನ್ನು ತನ್ನವಳನ್ನಾಗಿ ಮಾಡಿಕೊಳ್ಳಲು "ತನ್ನ ಮಹಿಮೆಯಿಂದ ಎಲ್ಲಾ ದೇವದೂತರೊಂದಿಗೆ ಕೂಡಿ" ಬರುವನು (ಮತ್ತಾಯ 25:31). ಬಳಿಕ, ಸಿದ್ಧವಾಗಿರುವವರು "ಅಂತರಿಕ್ಷದಲ್ಲಿ ಕರ್ತನನ್ನು ಎದುರುಗೊಳ್ಳುವದಕ್ಕಾಗಿ ಅವರ

ಸಂಗಡಲೇ ಮೇಘವಾಹನರಾಗಿ ಫಕ್ಕನೆ ಒಯ್ಯಲ್ಪಡುವೆವು; ಹೀಗಾಗಿ ನಾವು ಸದಾಕಾಲವೂ ಕರ್ತನ ಜೊತೆಯಲ್ಲಿರುವೆವು" (1 ಥೆಸಲೋನಿಕ 4:17).

ನಮ್ಮ ಕೊಂಡಾಟದ ಸಮಯವು - ವಿವಾಹದ ಔತಣ - ಒಂದು ವಾರ, ಅಥವಾ ಎರಡು ವಾರಗಳಷ್ಟು ಕಾಲ ಇರುವದಿಲ್ಲ, ಆದರೆ ಅದು ನಿತ್ಯತ್ವದುದ್ದಕ್ಕೂ ಇರುವದು. ಕರ್ತನು ನಮ್ಮೊಂದಿಗೆ ನಿವಾಸಿಸುವನು ಮತ್ತು ನಾವು ಆಥನ ಜನರಾಗಿರುವೆವು. "ಅವರ ಕಣ್ಣೀರನ್ನೆಲ್ಲಾ ಒರಸಿಬಿಡುವನು. ಇನ್ನು ಮರಣವಿರುವದಿಲ್ಲ, ಇನ್ನು ದುಃಖವಾಗಲಿ ಗೋಳಾಟವಾಗಲಿ ಕಷ್ಟವಾಗಲಿ ಇರುವದಿಲ್ಲ; ಮೊದಲಿದ್ದದ್ದೆಲ್ಲಾ ಇಲ್ಲದೆ ಹೋಯಿತು" (ಪ್ರಕಟನೆ 21:4). ಒಂದು ವಿವಾಹದ, ಒಂದು ಔತಣ, ಮತ್ತು ಉಡುಪುಗಳ ರೂಪಕಗಳು ಒಂದು ಸುಂದರವಾದ ಚಿತ್ರವನ್ನು ರೂಪಿಸುತ್ತವೆ - ನಾವು ಈಗ ಆನಂದಿಸುವ ನಮ್ಮ ಆತ್ಮೀಕ ಸಂಬಂಧಮತ್ತು ನಿತ್ಯತ್ವದಲ್ಲಿ ನಾವು ಅನುಭವಿಸಬೇಕೆಂದು ಹಂಬಲಿಸುವ ಸಂಬಂಧ ಎರಡನ್ನೂ ಕುರಿತ ಚಿತ್ರಣ.

**ವಚನ 7.** ಜಯಶಾಲಿಯಾದ ಜನರ ಗುಂಪು ಮೊದಲು ದೇವರು ಮಾಡಿದ ಕಾರ್ಯಕ್ಕಾಗಿ ಆತನನ್ನು ಸ್ತುತಿಸಿದ್ದರು (ವಚನಗಳು 1-4). ಬಳಿಕ ಅವರು ಆತನನ್ನು ಏನು ಮಾಡುತ್ತಿದ್ದಾನೆಂಬುದಕ್ಕಾಗಿ ಸ್ತುತಿಸಿದ್ದರು (ವಚನಗಳು 5, 6). ಈಗ ಅವರು ಆತನನ್ನು ಆತನು ಏನು ಮಾಡುವೆನೆಂದು ವಾಗ್ದಾನ ಮಾಡಿದ್ದಾನೋ ಅದಕ್ಕಾಗಿ ಸ್ತುತಿಸಿದರು: **ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ; ಸಂತೋಷಪಡೋಣ, ಹರ್ಷಗೊಳ್ಳೋಣ, ಆತನನ್ನು ಘನಪಡಿಸೋಣ.**

**ಸಂತೋಷಪಡೋಣ** (χαίρω, *chairō*) ಮತ್ತು **ಹರ್ಷಗೊಳ್ಳೋಣ** (ἀγαλλιάω, *agalliaō*) ಎಂಬ ಕ್ರಿಯಾಪದಗಳು ಹೊಸ ಒಡಂಬಡಿಕೆಯೊಳಗೆ ಇನ್ನು ಒಂದೇ ಒಂದು ಕಡೆಯಲ್ಲಿ ಕಂಡು ಬರುತ್ತದೆ, ಅದು ಮತ್ತಾಯ 5:12ರಲ್ಲಿ: "ಸಂತೋಷಪಡಿರಿ, ಉಲ್ಲಾಸಪಡಿರಿ; ಪರಲೋಕದಲ್ಲಿ ನಿಮಗೆ ಬಹಳ ಫಲ ಸಿಕ್ಕುವದು; ನಿಮಗಿಂತ ಮುಂಚೆ ಇದ್ದ ಪ್ರವಾದಿಗಳನ್ನೂ ಹೀಗೆಯೇ ಹಿಂಸೆಪಡಿಸಿದರಲ್ಲಾ." ಎರಡು ವಾಕ್ಯಭಾಗಗಳೂ ಮೂಲಭೂತವಾಗಿ ಒಂದೇ ಕಾರ್ಯವನ್ನು ತಿಳಿಸುತ್ತವೆ: ಕಾಲಗಳು ಕಠಿಣವಾಗಿರಬಹುದು; ದಿನಗಳು ಕತ್ತಲೆಯಿಂದ ಕೂಡಿರಬಹುದು; ನಮ್ಮ ಕೆನ್ನೆಗಳು ಕಣ್ಣೀರಿನಿಂದ ತೇವವಾಗಿರಬಹುದು - ಆದರೆ ಒಂದು ಉತ್ತಮ ದಿನವು ಬರಲಿದೆ. ಕರ್ತನು ತನ್ನವರಿಗಾಗಿ ಬರುತ್ತಿದ್ದಾನೆ! **ಯಜ್ಞದ ಕುರಿಯಾದಾತನ ವಿವಾಹ ಕಾಲ ಬಂತು** ಎಂಬುದು "ಪರಲೋಕದಲ್ಲಿ ನಿಮಗೆ ಬಹಳ ಪ್ರತಿಫಲ ಸಿಕ್ಕುವದು" ಎಂಬುದಕ್ಕೆ ಸಮಾನವಾಗಿರುತ್ತದೆ!

ವಿವಾಹದ ಪದ್ಧತಿಗಳು ಸ್ಥಳದಿಂದ ಸ್ಥಳಕ್ಕೆ ಮತ್ತು ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗಿರುತ್ತವೆ, ಆದರೆ ಎಲ್ಲೆಡೆಯೂ ಅವುಗಳಲ್ಲಿ ಒಂದು ಭಾವವು ಸರ್ವೇಸಾಮಾನ್ಯವಾಗಿರುತ್ತದೆ: ಸಂತೋಷ. ಅದೇ ರೀತಿಯಲ್ಲಿ, ಕರ್ತನು ತನ್ನ ಮದಲಗಿತ್ತಿಯನ್ನು ತನ್ನವಳಾಗ ತೆಗೆದುಕೊಳ್ಳಲು ಹಿಂದಿರುಗಿ ಬರುವ ಕಾಲವು ಆತನ ಪುನರಾಗಮನಕ್ಕಾಗಿ *ಸಿದ್ಧರಾಗಿರುವವರಿಗೆ* ಒಂದು ಹರ್ಷಗೊಳ್ಳುವ ಸಮಯವಾಗಿರಲಿದೆ. 7ನೇ ವಚನದ ಕಡೇ ಭಾಗವು ದೊಡ್ಡ ಜನರ ಗುಂಪಿನಿಂದ ಹಾಡಲ್ಪಟ್ಟ ಹಾಡನ್ನು ಪೂರ್ತಿಗೊಳಿಸುತ್ತದೆ: **ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ.**

**ವಚನ 8.** ಈ ವಚನವು ಆ ಸಿದ್ಧತೆಯ ಒಂದು ಅಂಶದ ಮೇಲೆ ಮುಖ್ಯ ಗಮನವನ್ನು ಹರಿಸುತ್ತದೆ - ವಿವಾಹದ ಉಡುಪುಗಳನ್ನು ಒದಗಿಸುವದು: **ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು. ಆ ನಾರುಮಡಿ ಅಂದರೆ ದೇವಜನರ ಸತ್ಕಾರ್ಯಗಳೇ.** 19ನೇ ಅಧ್ಯಾಯದ, 8ನೇ ವಚನದಲ್ಲಿನ

ಮದಲಗಿತ್ತಿಯ ಗುರುತಿನ ವಿಷಯದಲ್ಲಿ ಯಾವನಿಗಾದರೂ ಈಗಲೂ ಸಂದೇಹವಿರುವದಾದರೆ, ಅದನ್ನು ಇತ್ಯರ್ಥಪಡಿಸಿಕೊಳ್ಳತಕ್ಕದ್ದು: ಮದಲಗಿತ್ತಿಯು ಉಡುಪನ್ನು ಧರಿಸಿಕೊಳ್ಳುತ್ತಾಳೆ, ಆದರೆ ಉಡುಪು **ದೇವಜನರ ಸತ್ಕಾರ್ಯಗಳೇ**; ಆದದರಿಂದ, ಮದಲಗಿತ್ತಿಯು "ದೇವಜನರಿಗೆ" ಸಮಾನವಾಗಿದ್ದಾಳೇ. ಸರಳವಾಗಿ ಹೇಳುವದಾದರೆ, ಮದಲಗಿತ್ತಿಯು ಸಭೆಯೇ, ರಕ್ಷಣೆ ಹೊಂದಿರುವ ವ್ಯಕ್ತಿಗಳಿಂದ ಕೂಡಿರುವ ಸಮೂಹ.

ಸ್ತ್ರೀಯರು ವಿವಾಹದ ಕುರಿತು ಚರ್ಚಿಸುವಾಗ, ಏಕರೂಪದಲ್ಲಿ ಕೇಳಲಾಗುವ ಪ್ರಶ್ನೆಯೆಂದರೆ "ಮದಲಗಿತ್ತಿಯ ಬಟ್ಟೆಯು ಯಾವ ರೀತಿಯಿತ್ತು?" ಈ ಪ್ರಕರಣದಲ್ಲಿ, ಉತ್ತರವು ಹೀಗಿರುವದು **ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರುಮಡಿ.** ಈ ಉಡುಪು 17ನೇ ಅಧ್ಯಾಯದಲ್ಲಿನ ಪಾಪಭರಿತ ಜಾರಸ್ತ್ರೀಯ ಥಳಕುಪಳಕಿನ ಉಡುಪಿಗೆ ತದ್ವಿರುದ್ಧವಾಗಿತ್ತು. ಪ್ರಕಾಶಮಾನ, ನಿರ್ಮಲವಾದ ನಾರುಮಡಿಯು ಶುದ್ಧತೆಗೆ ಸಂಕೇತವಾಗಿದೆ. ಪೌಲನು ಹೀಗೆ ಬರೆದನು,

> ... ಕ್ರಿಸ್ತನು ಸಭೆಯನ್ನು ಪ್ರೀತಿಸಿದ ... ಅದನ್ನು ಪ್ರತಿಷ್ಠೆಪಡಿಸುವದಕ್ಕಾಗಿ ತನ್ನನ್ನು ಒಪ್ಪಿಸಿಕೊಟ್ಟನು. ಅದನ್ನು ಕಳಂಕ ಸುಕ್ಕು ಮುಂತಾದ್ದೊಂದೂ ಇಲ್ಲದ ಕನ್ನಿಕೆಯೋ ಎಂಬಂತೆ ಪರಿಶುದ್ಧವೂ ನಿರ್ದೋಷವೂ ಮಹಿಮೆಯುಳ್ಳದ್ದೂ ಆಗಿರುವ ಸಭೆಯನ್ನಾಗಿ ತನ್ನೆದುರಿನಲ್ಲಿ ನಿಲ್ಲಿಸಿಕೊಳ್ಳಬೇಕೆಂದು ವಾಕ್ಯೋಪದೇಶ ಸಹಿತವಾದ ಜಲಸ್ನಾನವನ್ನು ಮಾಡಿಸಿ ಶುದ್ಧಮಾಡಿದನು (ಎಫೆಸ 5:25-27).

ನಾವು ನೀರಿನಲ್ಲಿ ಮುಳುಗಿಸಲ್ಪಡುವಾಗ (ದೀಕ್ಷಾಸ್ನಾನ ಮಾಡಿಸಲ್ಪಡುವಾಗ), ಯೇಸುವಿನ ರಕ್ತವು ನಮ್ಮನ್ನು ಸಕಲ ಪಾಪಗಳಿಂದ ಬಿಡಿಸಿ ಶುದ್ಧಮಾಡುವರು (ಅಪೊಸ್ತಲರ ಕೃತ್ಯಗಳು 22:16). ನಮ್ಮ "ಜೀವನ-ಉಡುಪುಗಳು" ರಕ್ತದಿಂದ ಬೆಳ್ಳಗೆ ಮಾಡಲ್ಪಡುವವು (ಪ್ರಕಟನೆ 7:9, 14); ನಾವು ಸ್ವತಃ ಯೇಸುವಿನಿಂದಲೋ ಎಂಬಂತೆ, ಆತನನ್ನು ಧರಿಸಿಕೊಂಡಿರುತ್ತೇವೆ (ಗಲಾತ್ಯ 3:27). ಬಳಿಕ ನಾವು ವಾಕ್ಯದ ಬೆಳಕಿನಲ್ಲಿ ನಡೆಯುತ್ತಿರಬೇಕು, ಹೀಗೆ ರಕ್ತವು ನಮ್ಮನ್ನು ನಿರಂತರವಾಗಿ ಶುದ್ಧಮಾಡುವದು (1 ಯೋಹಾನ 1:7). ನಾವು ನಮ್ಮ ಮದಲಿಂಗನಿಗೋಸ್ಕರ ನಮ್ಮನ್ನು ಶುದ್ಧವಾಗಿಟ್ಟುಕೊಳ್ಳಬೇಕು; ನಾವು ಆತನಿಗೆ ನಂಬಿಗಸ್ತರಾಗಿರಬೇಕು.

8ನೇ ವಚನವು ಎರಡು ಯೋಚನೆಗಳನ್ನು ಒಂದಾಗಿ ಮಿಶ್ರಣಗೊಳಿಸುತ್ತದೆ: ನಮ್ಮ ರಕ್ಷಣೆಯಲ್ಲಿ ದೇವರ ಪಾತ್ರ ಹಾಗೂ ನಮ್ಮ ಪಾತ್ರ. ದೇವರ ಪಾತ್ರವು **ನಯವಾದ ನಾರುಮಡಿಯನ್ನು ಧರಿಸಿಕೊಳ್ಳುವದಕ್ಕೆ ಆಕೆಗೆ ಅನುಗ್ರಹಿಸೋಣವಾಗಿತ್ತು** ಎಂಬುದರಲ್ಲಿ ಒತ್ತಿ ಹೇಳಲ್ಪಟ್ಟಿದೆ (ನೋಡಿರಿ 6:11). "ಅನುಗ್ರಹಿಸೋಣವಾಗಿತ್ತು" ಎಂಬ ಪದಗುಚ್ಛವು ದೇವರು ಅಧಿಕಾರದಲ್ಲಿದ್ದಾನೆಂಬುದನ್ನು ಒತ್ತಿ ಹೇಳುವದಕ್ಕಾಗಿ ಪ್ರಕಟನೆ ಪುಸ್ತಕದುದ್ದಕ್ಕೂ ಬಳಸಲ್ಪಟ್ಟಿದೆ (6:2, 8; 13:7, 14; 16:8). ನಾವು ನಮ್ಮ "ಉಡುಪುಗಳನ್ನು" ನಮ್ಮ ಸ್ವಶಕ್ತಿಯಿಂದ ಶುದ್ಧಮಾಡಿಕೊಳ್ಳಲು ದಾರಿಯೇ ಇರುವದಿಲ್ಲ; ನಾವು ದೇವರ ಕರುಣೆಯ ಮೇಲೆ ಅವಲಂಭಿತರಾಗಿರಬೇಕು. ರಕ್ತದ ಶುದ್ಧೀಕರಿಸುವಿಕೆಯಿಲ್ಲದೆ, ನಮ್ಮ ಜೀವಿತಗಳು "ಹೊಲೆಯ ಬಟ್ಟೆಗಳಂತೆ" ಇರುತ್ತವೆ (ಯೆಶಾಯ 64:6; KJV). ಕರ್ತನು ನಮಗೆ ಶುದ್ಧಗೊಳ್ಳಲ್ಪಡುವದಕ್ಕೆ ದಾರಿಗಳನ್ನು, ಸದವಕಾಶಗಳನ್ನು ಒದಗಿಸುತ್ತಾನೆ - ಮತ್ತು ಬಳಿಕ ತನ್ನ ಕೃಪಾಭರಿತ ಕ್ಷಮಾಪಣೆಯನ್ನು ಅನುಗ್ರಹಿಸುತ್ತಾನೆ. ಆದದರಿಂದ ನಾವು "ಸಂತೋಷ ಪಡೋಣ, ಹರ್ಷಗೊಳ್ಳೋಣ, *ಆತನನ್ನು ಘನಪಡಿಸೋಣ*" (ವ. 7; ಒತ್ತಿ ಹೇಳಿದ್ದು ನನ್ನದು).

ಈ ವಾಸ್ತವಾಂಶದ ಅರ್ಥವು ನಮ್ಮ ಕಡೆಯಿಂದ ನಾವು ಯಾವ ಪ್ರಯತ್ನವನ್ನೂ ಮಾಡಬೇಕಾಗಿಲ್ಲ ಎಂಬುದಲ್ಲ. ನಮ್ಮ ರಕ್ಷಣೆಯಲ್ಲಿ, ನಮಗಿರುವ ಪಾತ್ರವು 8ನೇ ವಚನದಲ್ಲಿರುವ ಈ ಮಾತುಗಳಿಂದ ಒತ್ತಿ ಹೇಳಲ್ಪಟ್ಟಿದೆ: **ದೇವಜನರ ಸತ್ಕಾರ್ಯಗಳೇ**. "ಸತ್ಕಾರ್ಯಗಳು" ಎಂಬುದು ಒಂದು ಗ್ರೀಕ್ ಪದದಿಂದ ಅನುವಾದಿಸಲ್ಪಟ್ಟಿದೆ; ಏಕವಚನದ ರೂಪವು δικαίωμα (*dikaiōma*) ಎಂದಾಗಿರುತ್ತದೆ. ಈ ಪದವು ಒಂದು ದೈವಿಕ ಕಟ್ಟಳೆಯನ್ನು (ಲೂಕ 1:6; ರೋಮಾ 2:26; ಇಬ್ರಿಯ 9:1) ಅಥವಾ ಆ ಅಗತ್ಯವು ನೆರವೇರಿಸಲ್ಪಡುವದನ್ನು ಸೂಚಿಸಬಹುದಾಗಿದೆ (ರೋಮಾ 5:18). ಈ ಸನ್ನಿವೇಶದಲ್ಲಿ ಅದು ಎರಡನೆಯ ಅರ್ಥವನ್ನು ಹೊಂದಿರುತ್ತದೆ. ದೇವಜನರು ದೇವರ ಕಟ್ಟಳೆಗಳಿಗೆ ವಿಧೇಯರಾಗಿದ್ದರು.

ವಿವಾಹ ಉಡುಪಿಗೆ ಸಂಬಂಧಿಸಿದ ವಾಕ್ಯಭಾಗವು 22:14ರಲ್ಲಿ ಸಿಕ್ಕುತ್ತದೆ, ಅದು ಹೀಗೆ ಹೇಳುತ್ತದೆ, "ತಮ್ಮ ನಿಲುವಂಗಿಗಳನ್ನು ತೊಳಕೊಂಡವರು ಧನ್ಯರು ..." ನಮ್ಮ ನಿಲುವಂಗಿಗಳು ಯೇಸುವಿನ ರಕ್ತದಲ್ಲಿ ತೊಳೆಯಲ್ಪಡುತ್ತವೆ, ಆದರೆ ನಾವು ವಿಶ್ವಾಸ ಹಾಗೂ ವಿಧೇಯತೆಗಳ ಮೂಲಕವಾಗಿ "ತೊಳಕೊಳ್ಳಬೇಕು." Robert Mounceನು ಹೇಳಿದ್ದೇನೆಂದರೆ ಪರಿಭಾಷೆಯು "ಮದಲಗಿತ್ತಿಯ ಉಡುಪು ಕಡೇ ವರೆಗೂ ತಾಳಿಕೊಳ್ಳುವವರ ಅಸಂಖ್ಯಾತ ನಂಬಿಗಸ್ತಿಕೆಯ ವಿಧೇಯತೆ ಕೃತ್ಯಗಳಿಂದ ಹೆಣೆಯಲ್ಪಟ್ಟಿರುವದನ್ನು ಸೂಚಿಸಬಹುದಾಗಿದೆ."[21] H. L. Ellisonನು ಇದನ್ನು ಹೊಸ ಒಡಂಬಡಿಕೆಯಲ್ಲಿಯೇ "ಅತ್ಯಂಥ ಸುಂದರವಾದ ಚಿತ್ರಣಗಳಲ್ಲೊಂದು" ಎಂದು ಬಣ್ಣಿಸಿದನು:

> ಇಲ್ಲಿ ಆವಾಹನೆ ಮಾಡಲ್ಪಟ್ಟಿರುವ ಚಿತ್ರಣವು ಪರಲೋಕದಲ್ಲಿರುವ ಒಂದು ಶ್ರೇಷ್ಠವಾದ ಕೈಮಗ್ಗದ್ದಾಗಿದೆ; ಪ್ರತಿಯೊಂದು ಸತ್ಕಾರ್ಯವು, [ಅಂದರೆ,] ನಮ್ಮ ಜೀವಿತದಿಂದ ಉಂಟು ಮಾಡಲ್ಪಟ್ಟಿರುವ ಪ್ರತಿಯೊಂದು ಕೃತ್ಯವು ಕ್ರಿಸ್ತನಲ್ಲಿ ನೀತಿಯೆಂದು ಎಣಿಸಲ್ಪಟ್ಟಿದ್ದು, ಅದು ಹೆಣೆಯುವ ದೇವದೂತನ ಬಳಿಗೆ ಒಯ್ಯಲ್ಪಡುತ್ತದೆ, ಆತನು ಅದನ್ನು ವಿವಾಹ ಉಡುಪಿನ ಸಾಮಗ್ರಿಯಲ್ಲಿ ಏಕೀಕರಿಸುತ್ತಾನೆ, ಮದಲಗಿತ್ತಿಗೆ ಅಲ್ಲ, ಆದರೆ ಮದಲಿಂಗನಿಗೆ ಮಹಿಮೆಯನ್ನು ತರುವದಕ್ಕೆ ವಿನ್ಯಾಶಿಸಲ್ಪಡುವ ಉಡುಪು ಅದಾಗಿರುತ್ತದೆ.[22]

Henry Sweteನು ಬರೆದದ್ದೇನೆಂದರೆ "ಇಡೀ ಸಭೆಯು ... ಒಟ್ಟಾರೆ ನಿರ್ಮಲವಾಗಿರುವ ಪ್ರಕಾಶಮಾನವಾದ ಶ್ವೇತತ್ವವನ್ನು ಧರಿಸಿಕೊಂಡದ್ದಾಗಿ ಕಾಣುತ್ತದೆ."[23]

ಇಂದು, ವೇದಪಂಡಿತರು ರಕ್ಷಣೆಯಲ್ಲಿ ದೇವರ ಪಾತ್ರವಿರುವದರ ಕುರಿತಾದ ವಾಕ್ಯಭಾಗಗಳು ಹಾಗು ಮನುಷ್ಯನ ಪಾತ್ರದ ಕುರಿತು ಮಾತಾಡುವ ವಾಕ್ಯಭಾಗಗಳ ನಡುವೆ ಸಂಧಾನ ಮಾಡುವದಕ್ಕೆ ಕಷ್ಟಪಡುತ್ತಾರೆ. ಕೆಲವು ವಾಕ್ಯಗಳು ಹೇಳುವದೇನೆಂದರೆ, ರಕ್ಷಣೆಯ ವಿಷಯದಲ್ಲಿ ದೇವರೇ ಎಲ್ಲವನ್ನೂ ಮಾಡುತ್ತಾನೆ ಎಂದು ಹೇಳಿದರೆ, ಇನ್ನು ಕೆಲವು ವಾಕ್ಯಗಳು ಮನುಷ್ಯನೇ ಅದನ್ನು ಮಾಡುವನೆಂಬ ಅರ್ಥಬರುವಂತೆ ಅರ್ಥನಿರೂಪಣೆ ಮಾಡಲ್ಪಡಬಹುದಾಗಿವೆ. ಆರಂಭಿಕ ಲೇಖಕರು ಇಂದಿನ ವ್ಯಾಖ್ಯಾನಕಾರರಂತೆ ಈ ತೋರಿಕೆಯ ವ್ಯಾಜ್ಯದ ಬಗ್ಗೆ ಕಳಕಳಿಯನ್ನು ಹೊಂದಿರಲಿಲ್ಲ. ಅವರು ದೇವರ ಪಾತ್ರದ ಬಗ್ಗೆ ಮಹಿಮೆ ಪಡಿಸಿದರು; ಆತನಿಲ್ಲದೆ, ರಕ್ಷಣೆಯು ಇಲ್ಲವೇ ಇಲ್ಲ ಎಂದರು. ಅದೇ ವೇಳೆಯಲ್ಲಿ, ದೇವರ ರಕ್ಷಣೆಯನ್ನು ಸ್ವೀಕರಿಸಿಕೊಳ್ಳುವನೋ ಅಥವಾ ಇಲ್ಲವೋ ಎಂಬುದನ್ನು ಪ್ರತಿಯೊಬ್ಬ ವ್ಯಕ್ತಿಯು ಸ್ವತಃ ತಾನೇ ನಿರ್ಧರಿಸುವನೆಂಬುದನ್ನು ಅವರು ಸ್ಪಷ್ಟಗೊಳಿಸಿದರು. Burton Coffmanನು ಅದನ್ನು ಈ ರೀತಿಯಾಗಿ ಹೇಳಿದನು: "ದೇವರ [ಮದಲಗಿತ್ತಿಗೆ] ಉಡುಪನ್ನು

ಕೊಟ್ಟನು ಆದರೆ ಅವುಗಳನ್ನು ಆಕೆಯೇ *ಧರಿಸಿಕೊಳ್ಳುವದು* ಅಗತ್ಯವಿತ್ತು!"[24]

ನಾವು ಬರಲಿರುವ ಮದಲಿಂಗನಿಗೋಸ್ಕರ ನಮ್ಮನ್ನು ಹೇಗೆ ಸಿದ್ಧಪಡಿಸಿಕೊಳ್ಳುವೆವು? ನಾವು ನಂಬಿಕೆ ಹಾಗೂ ದೀಕ್ಷಾಸ್ನಾನಗಳ ಮೂಲಕವಾಗಿ ಕ್ರಿಸ್ತನ ಮದಲಗಿತ್ತಿಯ ಭಾಗವಾಗುತ್ತೇವೆ, ಮತ್ತು ಬಳಿಕ ನಮ್ಮನ್ನು "ಪ್ರಪಂಚದ ದೋಷವು ಹತ್ತದಂತೆ" (ಯಾಕೋಬ 1:27) ಕಾಪಾಡಿಕೊಳ್ಳುತ್ತೇವೆ. ಯೋಹಾನನು ಹೀಗೆ ಹೇಳಿದನು:

> ಪ್ರಿಯರೇ, ಈಗ ದೇವರ ಮಕ್ಕಳಾಗಿದ್ದೇವೆ; ಮುಂದೆ ನಾವು ಏನಾಗುವೆವೋ ಅದು ಇನ್ನು ಪ್ರತ್ಯಕ್ಷವಾಗಲಿಲ್ಲ. ಕ್ರಿಸ್ತನು ಪ್ರತ್ಯಕ್ಷನಾದರೆ ನಾವು ಆತನ ಹಾಗಿರುವೆವೆಂದು ಬಲ್ಲೆವು; ಯಾಕಂದರೆ ಆತನಿರುವ ಪ್ರಕಾರವೇ ಆತನನ್ನು ನೋಡುವೆವು. ಆತನ ಮೇಲೆ ಈ ನಿರೀಕ್ಷೆಯನ್ನು ಇಟ್ಟಿರುವ ಪ್ರತಿಯೊಬ್ಬನು ಕ್ರಿಸ್ತನು ಶುದ್ಧನಾಗಿರುವಂತೆಯೇ ತನ್ನನ್ನು ಶುದ್ಧಮಾಡಿಕೊಳ್ಳುತ್ತಾನೆ (1 ಯೋಹಾನ 3:2, 3).

ಪೌಲನು ಹೀಗೆ ಬರೆದನು, "ಪ್ರಿಯರೇ, ಈ ವಾಗ್ದಾನಗಳು ನಮಗಿರುವದರಿಂದ ನಾವು ಶರೀರಾತ್ಮಗಳ ಕಲ್ಮಶವನ್ನು ತೊಲಗಿಸಿ ನಮ್ಮನ್ನು ಶುಚಿಮಾಡಿಕೊಂಡು ದೇವರ ಭಯದಿಂದ ಕೂಡಿದವರಾಗಿ ಪವಿತ್ರತ್ವವನ್ನು ಸಿದ್ಧಿಗೆ ತರುವದಕ್ಕೆ ಪ್ರಯತ್ನಿಸೋಣ" (2 ಕೊರಿಂಥ 7:1). ಪೇತ್ರನು ತಾನು ಬರೆದ ಎರಡನೆಯ ಪತ್ರಿಕೆಯಲ್ಲಿ ಅದೇ ಸಂಗತಿಯನ್ನು ತಿಳಿಸುತ್ತಾನೆ (2 ಪೇತ್ರ 3:14).

ಒಬ್ಬ ಪುರುಷನು ಸ್ತ್ರೀಗೆ ಕೊಡಬಹುದಾದ ಅತ್ಯಂಥ ದೊಡ್ಡ ಸನ್ಮಾನವೆಂದರೆ ಆಕೆಯನ್ನು ತನಗೆ ಮದಲಗಿತ್ತಿಯಾಗಿರುವಂತೆ ಕೇಳಿಕೊಳ್ಳುವದೇ ಆಗಿದೆ. ಯೇಸುವು ಆ ಸನ್ಮಾನವನ್ನು ತನ್ನ ಸಭೆಗೆ ನೀಡಿದ್ದನು. ನಾವು ಸನ್ಮಾನವನ್ನು ಅರ್ಥಮಾಡಿಕೊಂಡು ಅದನ್ನು ಶ್ಲಾಘಿಸುತ್ತೇವೆಂಬುದನ್ನು ತೋರಿಸುವದಕ್ಕೆ, ಕ್ರೈಸ್ತರಾಗಿರುವ ನಾವು ಕರ್ತನ ಪರಿಶುದ್ಧ ಮದಲಗಿತ್ತಿಗೆ ತಕ್ಕುದಾದ ವಿಧದಲ್ಲಿ ನಡೆದುಕೊಳ್ಳಬೇಕು.

**ವಚನ 9.** ಯೋಹಾನನು ದೇವಜನರ "ನಯವಾದ ನಾರುಮಡಿ" ಬಗ್ಗೆ ಯೋಚಿಸುತ್ತಿರುವ ವೇಳೆ, ಯಾರೋ ಮಾತಾಡಿದರು: **ಅವನು ನನ್ನ ಸಂಗಡ ಮಾತಾಡುತ್ತಾ**. RSV ಮತ್ತು NIV ತರ್ಜುಮೆಗಳಲ್ಲಿ "ದೇವದೂತನು ನನಗೆ ಹೇಳಿದನು" ಎಂದಿರುತ್ತದೆ. ಈ ಘಟನೆಯನ್ನು 22:8, 9ರಲ್ಲಿರುವ ಅದೇ ರೀತಿಯ ಘಟನೆಯೊಂದಿಗೆ ಹೋಲಿಸುವಾಗ, ಆ "ಯಾರೋ ಒಬ್ಬನು" ಬಹುಶಃ ಒಬ್ಬ ದೇವದೂತನು, ಬಹುಶಃ ದರ್ಶನಗಳ ಸರಣಿಯನ್ನು ಪರಿಚಯಿಸಿದಾತನೇ ಆಗಿರಬಹುದು (17:1). ಮಾತಾಡಿದವನು ಯಾರೆಂಬುದನ್ನು ಕುರಿತು ಇತರ ಗುರುತುಗಳು ಮುಂದಿಡಲ್ಪಟ್ಟಿವೆ, ಅವುಗಳಲ್ಲಿ ಆತನು ಪರಲೋಕದಲ್ಲಿದ್ದ ನಂಬಿಗಸ್ತ ರಕ್ತಸಾಕ್ಷಿಗಳಲ್ಲೊಬ್ಬನು ಆಗಿದ್ದನೆಂಬ ಯೋಚನೆಯೂ ಸೇರಿರುತ್ತದೆ. ಒಬ್ಬ ದೇವದೂತನು ಎಂಬುದು ಸನ್ನಿವೇಶಕ್ಕೆ ಸರಿಯಾಗಿ ಹೊಂದುತ್ತದೆ, ಆದರೆ ಮಾತಾಡಿದವನು ಯಾರೇ ಆಗಿದ್ದರೂ ವಿಷಯವಂತೂ ಬದಲಾಗುವದಿಲ್ಲ: ಆತನು ಯೇಸು ಅಥವಾ ಯೆಹೋವ *ಆಗಿರಲಿಲ್ಲ*, ಮತ್ತು ಆ ಕಾರಣದಿಂದ ಆರಾಧಿಸಲ್ಪಡಕೂಡದು (ನೋಡಿರಿ ವ, 10).

ಮಾತಾಡಿದವನು ಅಪೊಸ್ತಲನಿಗೆ **ಬರೆ** ಎಂದು ಹೇಳಿದನು. ಯೋಹಾನನು ತನಗೆ ಪ್ರಕಟವಾಗುವ ಸಮಯದಲ್ಲಿ ದರ್ಶನಗಳನ್ನು ಮತ್ತು ಉಪದೇಶಗಳನ್ನು ಪೂರ್ತಿಯಾಗಿ ಅಥವಾ ಭಾಗಶಃ ಬರೆದಿಡುತ್ತಿದ್ದನೆಂದು ವಾಚಕನಿಗೆ ಪುನಃ ಜ್ಞಾಪಿಸಲ್ಪಡುತ್ತದೆ (1:11, 19; 2:1; 10:4; 14:13; 21:5).

ಯೋಹಾನನಿಗೆ ಇದನ್ನು ಬರೆಯುವಂತೆ ಆಜ್ಞಾಪಿಸಲಾಯಿತು, **ಯಜ್ಞದ ಕುರಿಯಾದಾತನ**

**ವಿವಾಹದ ಔತಣಕ್ಕೆ ಕರಸಿಕೊಂಡವರು ಧನ್ಯರು.** ಇದು ಪ್ರಕಟನೆ ಪುಸ್ತಕದಲ್ಲಿರುವ ನಾಲ್ಕನೆಯ ಧನ್ಯನುಡಿಯಾಗಿದೆ, ಮತ್ತು ಅದು ಸಂಖ್ಯೆಯ ದೃಷ್ಟಿಯಿಂದ ಮಾತ್ರವೇ ಅಲ್ಲ, ಆದರೆ ಭಾವನೆಯಲ್ಲಿ ಕೇಂದ್ರಿಯವಾಗಿದೆ. ಪರಲೋಕದಲ್ಲಿನ ವಿವಾಹ ಔತಣದಲ್ಲಿ ಭಾಗಿಯಾಗುವದಕ್ಕಿಂತಲೂ ದೊಡ್ಡದಾದ ಬೇರೆ ಯಾವ ಆಶೀರ್ವಾದವನ್ನೂ ಊಹಿಸಿಕೊಳ್ಳುವದಕ್ಕೆ ಸಾಧ್ಯವಿಲ್ಲ.

ಆದಿ ಕ್ರೈಸ್ತರಿಗೆ ಈ ವಿಧವಾದ ಭರವಸವು ಅಗತ್ಯವಿತ್ತು. Leon Morrisನು ಗಮನಕ್ಕೆ ತರುವದೇನೆಂದರೆ ಈ ವಿಭಾಗದ ಸಂದೇಶವು "ಸಭೆಗೆ ಅವಳಿದ್ದ ಪರಿಸ್ಥಿತಿಗಳಲ್ಲಿ ಇದೊಂದು ದೊಡ್ಡ ಅಂಶವಾಗಿತ್ತು. ಹಿಂಸೆಯಿಂದ ಕೂಡಿರುವ ಕಷ್ಟಕರ ದಿನಗಳಲ್ಲಿ ಕ್ರೈಸ್ತರು ಹಿಂಸಿಸಲ್ಪಡುತ್ತಿರುವ ದೇವಜನರು ಧನ್ಯರೇ ಹೊರತು, ಅವರ ಹಿಂಸಕರಲ್ಲ ಎಂಬುದನ್ನು ತಿಳಿಯುವದು ಅಗತ್ಯವಿತ್ತು."[25] ಇಂದು ಕ್ರೈಸ್ತರಿಗೆ ಈಗಲೂ ಈ ಭರವಸೆಯ ಅಗತ್ಯವಿರುತ್ತದೆ. Michael Wilcockನು ಬರೆದದ್ದೇನೆಂದರೆ ವಾಕ್ಯವು "ಕ್ರೈಸ್ತನ ಇಡೀ ಬಾಹ್ಯನೋಟದ ಮೇಲೆ ಪರಿಣಾಮ ಬೀರತಕ್ಕದ್ದು. ಇದು ಆತನ ಅನುಪಾತದ ಪ್ರಜ್ಞೆಯನ್ನು ಮರಳಿ ಬರುವಂತೆ ಮಾಡಬೇಕು, ಮತ್ತು ಆ ಕಾರಣದಿಂದ ಆತನ ಭರವಸೆ, ಆತನ ನಿರೀಕ್ಷೆ, ಆತನ ದೃಢವಿಶ್ವಾಸ, ಧೈರ್ಯ ಹಾಗೂ ಸಂತೋಷ ಇವುಗಳನ್ನು ಬರಮಾಡಬೇಕು. ಇದು ಆತನ ಸಮಸ್ಯೆಗಳನ್ನು *ನಿಭಾಯಿಸತಕ್ಕವುಗಳನ್ನಾಗಿ* ಮಾಡುತ್ತದೆ."[26]

**ವಿವಾಹದ ಔತಣಕ್ಕೆ ಕರಸಿಕೊಂಡವರ** ಗುರುತಿನ ವಿಷಯದಲ್ಲಿ ಸ್ವಲ್ಪ ಮಟ್ಟಿಗೆ ಗೊಂದಲವು ಇರುತ್ತದೆ, ಆದರೆ ಸನ್ನಿವೇಶವು ಅವರು ಕರ್ತನ ಆಮಂತ್ರಣಕ್ಕೆ ಸಕಾರಾತ್ಮಕವಾಗಿ ಓಗೊಟ್ಟವರು - ಸರಳವಾಗಿ ಹೇಳುವದಾದರೆ, ಕ್ರೈಸ್ತರು - ಎಂಬುದಾಗಿ ತಿಳಿಸುತ್ತದೆ. ಪ್ರೀತಿಯ ಆಮಂತ್ರಣವು ಎಲ್ಲರಿಗೂ ಕೊಡಲ್ಪಟ್ಟಿದೆ: "ಆತ್ಮನೂ ಮದಲಗಿತ್ತಿಯೂ - ಬಾ ಅನ್ನುತ್ತಾರೆ. ಕೇಳುವವನು - ಬಾ ಅನ್ನಲಿ. ಬಾಯಾರಿದವನು ಬರಲಿ. ಇಷ್ಟವುಳ್ಳವನು ಜೀವಜಲವನ್ನು ಕ್ರಯವಿಲ್ಲದೆ ತೆಗೆದುಕೊಳ್ಳಲಿ" (22:17). ಹಾಗಿದ್ದರೂ, ದೇವರ ಚಿತ್ತಕ್ಕೆ ಅಧೀನಪಡಿಸಿಕೊಳ್ಳುವ ಮೂಲಕ ಆ ಆಮಂತ್ರಣವನ್ನು *ಸ್ವೀಕರಿಸಿಕೊಂಡಿ*ರುವವರು ಮಾತ್ರವೇ ಧನ್ಯರಾಗಿರುವರು (7:14ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಸುವಾರ್ತೆಯ ಸಾರುವಿಕೆಯ ಮೂಲಕವಾಗಿ ಪ್ರತಿಯೊಬ್ಬನೂ "ಆಮಂತ್ರಿಸಲ್ಪಟ್ಟಿದ್ದಾನೆ" (ನೋಡಿರಿ 1 ಕೊರಿಂಥ 1:9; 2 ಥೆಸಲೋನಿಕ 2:14), ಆದರೆ ಆತನ ಕೃಪಾಭರಿತ ಕರೆಯನ್ನು ಎಲ್ಲರೂ ಸ್ವೀಕರಿಸಿಕೊಳ್ಳುವದಿಲ್ಲ (ಮತ್ತಾಯ 22:1–14).

ಮದಲಗಿತ್ತಿಯು ಸಭೆಯ ಸದಸ್ಯರನ್ನೊಳಗೊಂಡು ಆಗಿರುತ್ತಾಳೆಂದು ಒತ್ತಿ ಹೇಳಲ್ಪಟ್ಟಿರುತ್ತಾಳೆ, ಮತ್ತು ಇಲ್ಲಿ ಈಗ ಸಭೆಯ ನಂಬಿಗಸ್ತ ಸದಸ್ಯರು ಆಮಂತ್ರಿಸಲ್ಪಟ್ಟಿದ್ದಾರೆಂದು ಅಭಿಪ್ರಾಯ ಪಡುವದರಿಂದಲೇ ಗೊಂದಲವು ಇರುತ್ತದೆ. 12ನೇ ಅಧ್ಯಾಯದಲ್ಲಿ ಒಂದು ಹೋಲಿಸಬಹುದಾದ ಪರಿಸ್ಥಿತಿಯಿತ್ತು, ಅಲ್ಲಿ ಸ್ತ್ರೀಯನ್ನು ಸಭೆ ಎಂದು ಗುರುತಿಸಲಾಗಿರುತ್ತದೆ, ಆದರೆ ಆಕೆಯ ಮಕ್ಕಳು ಸಭೆಯ ಸದಸ್ಯರೆಂದು ಗುರುತಿಸಲ್ಪಟ್ಟಿರುತ್ತಾರೆ. ಒಬ್ಬನಿಗಿಂತಲೂ ಹೆಚ್ಚು ಲೇಖಕರು ಹೀಯಾಳಿಸುತ್ತಾ ಹೀಗೆ ಹೇಳಿರುತ್ತಾರೆ, "ಸ್ವತಃ ಮದಲಗಿತ್ತಿಯನ್ನೇ ಆಕೆಯ ಮದುವೆಗೆ ಆಮಂತ್ರಿಸುವದನ್ನು ಎಂದಾದರೂ ಕೇಳಿದವರು ಇದ್ದಾರೋ?" ಆ ಲೇಖಕರು ಬಳಿಕ ಆಮಂತ್ರಿಸಲ್ಪಟ್ಟ ಇತರ ವ್ಯಕ್ತಿಗಳನ್ನು ಗುರುತಿಸುವದಕ್ಕೆ ಪ್ರಯತ್ನಿಸುತ್ತಾರೆ. ಅರ್ಥನಿರೂಪಣೆಯ ಪ್ರಕಾರ, ಸಭೆ ಎಂದರೆ ಯೇಸುವಿನ ರಕ್ತದಿಂದ ರಕ್ಷಿಸಲ್ಪಟ್ಟವರನ್ನೊಳಗೊಂಡ ದೇಹವಾಗಿದೆ (ನೋಡಿರಿ ಅಪೊಸ್ತಲರ ಕೃತ್ಯಗಳು 20:28; ಎಫೆಸ 5:23, 25) ಎಂಬ ವಾಸ್ತವಾಂಶದ ಹೊರತಾಗಿಯೂ, ಒಬ್ಬ ಲೇಖಕನಂತೂ ಆಮಂತ್ರಿಸಲ್ಪಟ್ಟವರು "ಸಭೆಯ ಸದಸ್ಯರಲ್ಲದೆ ರಕ್ಷಿಸಲ್ಪಟ್ಟಿರುವ ಜನರು"

ಎಂಬುದಾಗಿ ಗುರುತಿಸುವ ಮೊಂಡು ಧೈರ್ಯವನ್ನು ಮಾಡಿದನು. ಈ ಸಂದೇಹವಾದಿಗಳು ಪ್ರಕಟನೆ ಪುಸ್ತಕದ ಅಸ್ಥಾಯಿ ಸ್ವಭಾವವನ್ನು ನಿರ್ಲಕ್ಷ್ಯ ಮಾಡುತ್ತಾರೆ. ಕುರಿಯು ಕುರುಬನಾಗಿರುವದರ ಬಗ್ಗೆ ಎಂದಾದರೂ ಕೇಳಿದವನು ಇದ್ದಾನೋ? ಹಾಗಿದ್ದರೂ, ಪ್ರಕಟನೆ ಪುಸ್ತಕದಲ್ಲಿ, ಕುರಿಯಾದಾತನು ಕುರುಬನಾಗಿದ್ದಾನೆ (7:17). ಅದೇ ರೀತಿಯಲ್ಲಿ, 19ನೇ ಅಧ್ಯಾಯದಲ್ಲಿ ಪವಿತ್ರಾತ್ಮನು ಮೊದಲು ಕುರಿಯಾದಾತನ ಮದುವೆಯ ಒಂದು ಅಂಶವನ್ನು ನಂಬಿಗಸ್ತರು ಮದಲಗಿತ್ತಿಯಾಗಿದ್ದೆಂದು ಬಣ್ಣಿಸುವ ಮೂಲಕ ಪ್ರಕಟಗೊಳಿಸುತ್ತಾನೆ, ಬಳಿಕ ಎರಡನೆಯ ಅಂಶವಾಗಿ ನಂಬಿಗಸ್ತರನ್ನು ಅಥಿತಿಗಳಾಗಿ ಬಣ್ಣಿಸುತ್ತಾನೆ. ಇದು ಹೊಸ ಒಡಂಬಡಿಕೆಯ ಉಳಿದ ಭಾಗದೊಂದಿಗೆ ಸಾಮಂಜಸ್ಯತೆಯಿಂದಿರುತ್ತದೆ, ಅದು ಯೇಸುವಿನ ಹಿಂಬಾಲಕರನ್ನು ಮದಲಗಿತ್ತಿಯಾಗಿಯೂ (ನೋಡಿರಿ ರೋಮಾ 7:2-4; 2 ಕೊರಿಂಥ 11:2; ಎಫೆಸ 5:23-33), ಮತ್ತು ಕೆಲವು ಸಾರಿ ಮದಲಿಂಗನ ಮಿತ್ರರಾಗಿಯೂ ಬಣ್ಣಿಸುತ್ತದೆ (ನೋಡಿರಿ ಮತ್ತಾಯ 9:15; 25:1).

ಕುರಿಯಾದಾತನ ಮದುವೆಗೆ ಪ್ರತಿಯೊಬ್ಬರೂ ಆಮಂತ್ರಿಸಲ್ಪಟ್ಟಿರುತ್ತಾರೆ, ಆದರೆ ಒಬ್ಬನು ಆಮಂತ್ರಣವನ್ನು ಸ್ವೀಕರಿಸುತ್ತಾನೋ ಅಥವಾ ಇಲ್ಲವೋ ಎಂಬುದು ಆ ವ್ಯಕ್ತಿಗೆ ಬಿಟ್ಟ ವಿಚಾರವಾಗಿದೆ. ವಿವಾಹದ ಔತಣಕ್ಕೆ ಬರಬೇಕೆಂದು ಕರ್ತನು ನೀಡುವ ಆಮಂತ್ರಣವನ್ನು ತಿರಸ್ಕರಿಸುವ ಪ್ರತಿಯೊಬ್ಬನು ಅದಕ್ಕಾಗಿ ಯುಗಯುಗಾಂತರಗಳಲ್ಲಿಯೂ ವಿಷಾದ ಪಡುವನು (ನೋಡಿರಿ ಮತ್ತಾಯ 22:13). ನಾವು "ಕುರಿಯಾದಾತನ ವಿವಾಹದ ಔತಣಕ್ಕೆ" ಎಂದು ಕರೆಯಲ್ಪಡುವ ನಿತ್ಯವಾದ, ಪರಲೋಕದ ಕೊಂಡಾಟದಲ್ಲಿ ಸೇರಿಕೊಳ್ಳಬೇಕೆಂದು ಕೊಡಲಾದ ಆಮಂತ್ರಣಕ್ಕಿಂತಲೂ ದೊಡ್ಡದಾದ ಆಶೀರ್ವಾದವನ್ನು ನಾವು ಹೊಂದಲಾರೆವು. ಇದು ಅತ್ಯಂಥ ಅಮೂಲ್ಯವೆಂದೆಣಿಸಿಕೊಂಡು ಸ್ವೀಕರಿಸಿಕೊಳ್ಳಬೇಕಾದ ಒಂದು ಆಮಂತ್ರಣವಾಗಿದೆ.

ತನ್ನ ಹೇಳಿಕೆಯ ಮಹತ್ವಪೂರ್ಣತೆಯ ಬಗ್ಗೆ ಒತ್ತಿ ಹೇಳುವದಕ್ಕೆ ಪರಲೋಕದ ಸಂದೇಶಕನು ಪುನಃ ಮಾತಾಡಿದನು: **ಈ ಮಾತುಗಳು ದೇವರ ಸತ್ಯವಚನಗಳಾಗಿವೆ, ಅಂದನು.** ಈ ಪ್ರತಿಪಾದನೆಯನ್ನು ಇಡೀ ಪ್ರಕಟನೆ ಪುಸ್ತಕದ ಬಗ್ಗೆ ಮಾಡಬಹುದಾಗಿದೆ, ಮತ್ತು ವಾಸ್ತವಿಕದಲ್ಲಿ, ಸಂಪೂರ್ಣ ಬೈಬಲ್ ಬಗ್ಗೆಯೂ ಮಾಡಬಹುದಾಗಿದೆ. ಅನೇಕರು ಇದು 17:1ರಲ್ಲಿ ಆರಂಭಗೊಂಡ ವಿಭಾಗದ ಸಾರಾಂಶವೆಂದು ಭಾವಿಸುತ್ತಾರೆ. ಹೇಗೂ, ಹೆಚ್ಚು ಖಚಿತವಾಗಿ ಅದು 7ರಿಂದ 9 ವಚನಗಳ ಕುರಿತು ಹೇಳಿದ್ದಾಗಿದೆ. ಅವಿಶ್ವಾಸಿಗಳು ದೇವರ ವಾಗ್ದಾನಗಳನ್ನು ಕುಚೋದ್ಯ ಮಾಡಬಹುದು, ಆದರೆ ನಾವು ಆತನ ಮೇಲೆ ಭರವಸವಿಡಬಹುದು ಎಂಬುದನ್ನು ತಿಳಿದುಕೊಳ್ಳಬೇಕೆಂಬುದು ಕರ್ತನ ಬಯಕೆಯಾಗಿದೆ.

ಕೆಲವರು 9ನೇ ವಚನದ ಕೊನೆಯ ಮಾತುಗಳನ್ನು ಪ್ರಕಟನೆ ಭಾಷೆಯನ್ನು ಅಕ್ಷರಶಃವಾಗಿ ಅರ್ಥೈಸಿಕೊಳ್ಳಬೇಕೆಂಬುದಕ್ಕೆ ಪುರಾವೆಯಾಗಿರುತ್ತದೆಂದು ಅರ್ಥನಿರೂಪಣೆ ಮಾಡುತ್ತಾರೆ - ಆದರೆ "ಸತ್ಯ" ಎಂದಾಕ್ಷಣ ಅದು ತನ್ನಿಂದಾನೇ ಅಕ್ಷರಶಃ ಎಂದರ್ಥವಾಗುವದಿಲ್ಲ. Sweteನು ಬರೆದದ್ದೇನೆಂದರೆ, "ನಿಖರತೆಯ ಕುರಿತಾದ ಈ ಘನಗಾಂಭೀರ್ಯವಾದ ಹೇಳಿಕೆಯು ಖಂಡಿತವಾಗಿಯೂ ವಿವರಗಳು ಅಕ್ಷರಶಃ ನೆರವೇರುತ್ತವೆಂಬುದಾಗಿ ನಂಬಿಕೆಯಿಡುವದು ಅಗತ್ಯವೆಂದು ಹೇಳುವದಿಲ್ಲ. ಅಂತ್ಯಾಕಲಿಕ ಪ್ರವಾದನೆಯು ಅರ್ಥನಿರೂಪಣೆಗಾಗಿ ತನ್ನದೇ ಆಗಿರುವ ವಿಧಾನಗಳನ್ನು ಮತ್ತು ನಿಯಮಗಳನ್ನು ಒಳಗೊಂಡಿರುತ್ತದೆ, ಮತ್ತು ಇವುಗಳಿಂದಲೇ ವಿದ್ಯಾರ್ಥಿಯು ನಡಿಸಲ್ಪಡಬೇಕು."[27]

**ವಚನ 10.** 7ರಿಂದ 9 ವಚನಗಳ ಮಹಾ ಸತ್ಯಗಳು ಯೋಹಾನನಿಗೆ ಪ್ರಕಟಗೊಳಿಸಲ್ಪಟ್ಟಾಗ, ಆತನು ಅನಿರೀಕ್ಷಿತವಾದದ್ದೊಂದನ್ನು, ಶ್ರೇಷ್ಠ ಅಪೊಸ್ತಲನಿಗೆ

ತಕ್ಕುದಲ್ಲದಂಥ ಕಾರ್ಯವೊಂದನ್ನು ಮಾಡಿದನು. ಆತನು ಹೇಳಿದ್ದೇನೆಂದರೆ **ಆಗ ನಾನು ಅವನಿಗೆ ನಮಸ್ಕಾರ ಮಾಡಬೇಕೆಂದು ಆತನ ಪಾದಗಳಿಗೆ ಬೀಳಲು** ಮುಂದಾದೆನು.

ಕೆಲವು ವ್ಯಾಖ್ಯಾನಕಾರರು ಈ ಒಪ್ಪಿಕೊಳ್ಳುವಿಕೆಯನ್ನು ಮೃದುಗೊಳಿಸುವದಕ್ಕೆ ಪ್ರಯತ್ನಿಸುತ್ತಾ ಬಹಳಷ್ಟು ಸಮಯವನ್ನು ಕಳೆಯುತ್ತಾರೆ. ಒಬ್ಬನು ಊಯೆಯನ್ನು ಮಾಡಿದ್ದೇನೆಂದರೆ ಯೋಹಾನನು ಮಾತಾಡಿದವನನ್ನು ಯೇಸುವೆಂದು ತಪ್ಪಾಗಿ ಭಾವಿಸಿಕೊಂಡನು ಎಂಬುದೆ. ಮತ್ತೊಬ್ಬನು ಈ ಘಟನೆಯು ನಿಜವಾಗಿಯೂ ನಡೆಯಲೇ ಇಲ್ಲವೆಂದು, ಅದು ದರ್ಶನದ ಭಾಗವಾಗಿತ್ತಷ್ಟೆ ಎಂದು ಪ್ರತಿಪಾದಿಸುತ್ತಾನೆ. ಇನ್ನೂ ಒಬ್ಬನು ಇಡೀ ಘಟನೆಯು ಆಸ್ಯ ಸೀಮೆಯಲ್ಲಿ ದೇವದೂತರನ್ನು ಆರಾಧಿಸುತ್ತಿದ್ದವರ ಪ್ರಯೋಜನಾರ್ಥವಾಗಿದ್ದ ಒಂದು ಹಾಸ್ಯಾಸ್ಪದ ನಟನೆ ಆಗಿತ್ತೆಂಬ ಮನವರಿಕೆಯನ್ನು ಹೊಂದಿದ್ದನು (ನೋಡಿರಿ ಕೊಲೊಸ್ಸೆ 2:18). ಅದು ಯೋಹಾನನು ಹೇಳಿದಂತೆಯೇ ನಿಖರವಾಗಿ ಸಂಭವಿಸಿರುವ ಸಾಧ್ಯತೆಯು ಬಹಳಷ್ಟಿದೆ, ಮತ್ತು ಬಹುಶಃ ಯೋಹಾನನು ತಾನು ಮಾಡಿದ್ದ ಕೃತ್ಯದ ಕುರಿತು ಬರೆಯುವ ವೇಳೆ ಆತನ ಕೆನ್ನೆಗಳು ಉರಿಯುತ್ತಿದ್ದಿರಬಹುದಾಗಿದೆ. ಮೋಶೆಯು ತನ್ನ ತಾಳ್ಮೆಯನ್ನು ಕಳೆದುಕೊಂಡಂಥ ಮತ್ತು ಅದರ ನಿಮಿತ್ತವಾಗಿ ಕಾನಾನ್ ದೇಶವನ್ನು ಪ್ರವೇಶಿಸುವ ಸದವಕಾಶದಿಂದ ವಂಚಿತನಾದದ್ದರ ಕುರಿತು ಬರೆದನು (ಅರಣ್ಯಕಾಂಡ 20:1-13). ಆದಿ ಲೇಖಕರು ಪ್ರತಿಪಾದಿಸಿದ ಪ್ರಕಾರವೇ, ಮಾರ್ಕನು ಬರೆದ ಸುವಾರ್ತೆಯು ಪೇತ್ರನ ಕಥನವೇ ಆಗಿರುವದಾದಲ್ಲಿ, ಪೇತ್ರನು ತಾನು ಯೇಸುವನ್ನು ಅಲ್ಲಗಳೆದಿದ್ದರ ಕುರಿತು ಹೇಳಿಕೊಳ್ಳಲು ಸಂಕೋಚ ಪಡಲಿಲ್ಲ ಎಂದಾಗುತ್ತದೆ (ಮಾರ್ಕ 14:66-72).

ಯೋಹಾನನು ಕ್ಷಣ ಮಾತ್ರಕ್ಕೆ ಮಾಡಿದ ಅಚಾತುರ್ಯವು ಆತನು ಒಬ್ಬ ಮನುಷ್ಯನಾಗಿದ್ದನು ಮತ್ತು ಎಲ್ಲರನ್ನೂ ಬಾಧಿಸುವ ಅದೇ ಬಲಹೀನತೆಗಳಿಗೆ ಅಧೀನನಾಗಿದ್ದನೆಂಬುದನ್ನು ತೋರಿಸುತ್ತದಷ್ಟೇ. ಪ್ರಕಟನೆ 19:10ಕ್ಕೆ ಮುನ್ನ, ಅಪೊಸ್ತಲನು ಪ್ರತಿಯೊಂದು ಗಳಿಗೆಗೂ ಒಂದಾದರ ಮೇಲೊಂದರಂತೆ ದರ್ಶನಗಳನ್ನು ಕಾಣುತ್ತಲೇ ಇದ್ದನು. ಬಹಳಷ್ಟು ಜನರು ಪ್ರಕಟನೆ ಪುಸ್ತಕವನ್ನು ಸ್ವಲ್ಪ ಹೊತ್ತು ಅಧ್ಯಯನ ಮಾಡುತ್ತಾರೆ ಮತ್ತು ಬಳಿಕ ಒಂದು ವಿರಾಮ ತೆಗೆದುಕೊಳ್ಳುತ್ತಾರೆ; ಆದರೆ ಯೋಹಾನನ ಕಣ್ಣುಗಳು ಹಾಗೂ ಕಿವಿಗಳು ನಿರಂತರವಾಗಿ ಅಮೋಘವಾದ ದರ್ಶನಗಳಿಂದ, ಅಚ್ಚರಿಯುಂಟು ಮಾಡುವ ಸಂಕೇತಗಳಿಂದ, ಮತ್ತು ಮೈಮರೆಸುವಂಥ ಸತ್ಯಗಳಿಂದ ತುಂಬಿಕೊಂಡಿದ್ದು. ಆತನ ಕಣ್ಣುಗಳು ಕೋರೈಸಿರಬಹುದು ಮತ್ತು ಕಿವಿಗಳು ಗುಯ್ಯಂಗುಟ್ಟಿರಬಹುದು. ಆ ಕ್ಷಣದಲ್ಲಿ ದೇವರ ಸಂದೇಶಕನು ಕುರಿಯಾದಾತನ ವಿವಾಹದ ಔತಣದ ಕುರಿತು ಹೇಳಿದನು ಮತ್ತು ಈ ಸಂಗತಿಗಳು ಸತ್ಯವಚನಗಳಾಗಿವೆ ಎಂಬ ಅದ್ಭುತಕರವಾದ ಭರವಸನ್ನು ಕೊಟ್ಟನು. ಬಹುಶಃ ಯೋಹಾನನು ಇದೆಲ್ಲದರಿಂದ ಮೈಮರೆಸಲ್ಪಟ್ಟವನಾಗಿದ್ದನೆಂದು ಕಾಣುತ್ತದೆ. ಅಪೊಸ್ತಲನ ಆ ಕೃತ್ಯಕ್ಕೆ ಕಾರಣವು ಏನೇ ಆಗಿದ್ದರೂ ಸರಿಯೇ, ಅದು ಆತನನ್ನು ಮುಜುಗರಕ್ಕೀಡು ಮಾಡುವದಕ್ಕಾಗಿ ಬರೆಯಲ್ಪಟ್ಟಿರುವದಿಲ್ಲ. ಬದಲಾಗಿ, ನಾವು ಮುಂದೆ ನೋಡಲಿರುವ ಪ್ರಕಾರ, ಈ ಘಟನೆಯಿಂದ ಎಲ್ಲರೂ ಒಂದು ಕಾರ್ಯವನ್ನು ಕಲಿತುಕೊಳ್ಳಬೇಕೆಂದು ದೇವರು ಬಯಸುತ್ತಾನೆ.

ಯೋಹಾನನು ಆತನ ಪಾದಗಳ ಮುಂದೆ ಬಿದ್ದಾಗ ಮಾತಾಡಿದ ವ್ಯಕ್ತಿಯು ಆಘಾತಗೊಂಡನು: **ಮಾಡಬೇಡ ನೋಡು, ನಾನು ನಿನಗೂ ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವ ನಿನ್ನ ಸಹೋದರರಿಗೂ ಜೊತೆಯ ದಾಸನಾಗಿದ್ದೇನೆ.** ಅಕ್ಷರಶಃ ಮಾತಾಡಿದವನು ಹೇಳಿದ್ದೇನೆಂದರೆ, "ನಾನು ನಿಮ್ಮ ಜೊತೆಯ ದಾಸನು" (σύνδουλος,

*sundoulos*). ದೇವದೂತರು (ಮಾತಾಡಿದವನು ಒಬ್ಬ ದೇವದೂತನೆಂದು ಭಾವಿಸಿಕೊಳ್ಳುವದಾದರೆ) ಮತ್ತು ಮನುಷ್ಯರ ನಡುವೆ ಮೂಲಭೂತವಾದ ವ್ಯಾತ್ಯಾಸಗಳಿರುತ್ತವೆ (ಇಬ್ರಿಯ 2:6-8), ಆದರೆ ದೇವದೂತರು ಹಾಗೂ ನಂಬಿಗಸ್ತ ಕ್ರೈಸ್ತರು ಕರ್ತನ ಸೇವಕರಾಗಿರುತ್ತಾರೆ (ಕೊಲೊಸ್ಸೆ 4:7; ಇಬ್ರಿಯ 1:7, 14). ಇಬ್ಬರಲ್ಲಿ ಯಾರನ್ನೂ ಪೂಜ್ಯನೀಯವೆಂದೆಣಿಸಬಾರದು.

**ಯೇಸುವಿನ ವಿಷಯವಾದ ಸಾಕ್ಷಿಯು** ಎಂಬ ಮಾತು ಈ ಮುಂಚೆ ಪ್ರಕಟನೆ ಪುಸ್ತಕದಲ್ಲಿ ಕಂಡು ಬಂದಿರುತ್ತದೆ (1:2, 9). ಅದು "ಯೇಸುವಿನ *ಕುರಿತಾದ* ಸಾಕ್ಷಿ" ಎಂದಾಗಲಿ ಅಥವಾ "ಯೇಸುವಿ*ನಿಂದ* ಬಂದ ಸಾಕ್ಷಿ" ಎಂದಾಗಲಿ ಸಹ ಅರ್ಥವಾಗಿರಬಲ್ಲದು. ಎರಡೂ ಪದಗಳು "ಸುವಾರ್ತೆ" ಎಂಬದರೊಂದಿಗೆ ಸಮನಾರ್ಥಕವಾಗಿವೆ. ವಾಕ್ಯಭಾಗವು "ಯೇಸುವಿನ ವಿಷಯವಾದ ಸಾಕ್ಷಿ"ಯನ್ನು "ಪ್ರವಾದನೆ" ಜೊತೆಯಲ್ಲಿ ಸಂಬಂಧಗೊಳಿಸುತ್ತದಾದ್ದರಿಂದ, ಕೆಲವರು ಈ ವಚನದಲ್ಲಿರುವ "ಯೇಸುವಿನ ವಿಷಯವಾದ ಸಾಕ್ಷಿಯನ್ನು ಹೇಳಿರುವ"ವರು ಎಂಬುದು ಯೋಹಾನ ಹಾಗೂ ಇತರ ಪ್ರೇರಿತ ಅಪೊಸ್ತಲರನ್ನು ಸೂಚಿಸುತ್ತದೆಂದು ನಂಬುತ್ತಾರೆ. ಅರ್ಥನಿರೂಪಣೆಯು ಸತ್ಯವಾಗಿರಬಹುದು; ಹೇಗೂ, ಅದೇ ಪರಿಭಾಷೆಯು ಒಟ್ಟಾರೆಯಾದ ನಂಬಿಗಸ್ತ ಕ್ರೈಸ್ತರನ್ನು ಸೂಚಿಸುವದಕ್ಕೆ 12:17ರಲ್ಲಿ ಬಳಸಲ್ಪಟ್ಟಿತು, ಮತ್ತು ಇದು ಬಹುಶಃ ಇಲ್ಲಿ ಅದೇ ಅರ್ಥವನ್ನು ಹೊಂದಿರಬಹುದಾಗಿದೆ. ಎರಡರಲ್ಲಿ ಯಾವ ವಿಧವಾಗಿದ್ದರೂ ಸರಿಯೇ, ತಿಳಿಸಲಿಚ್ಛಿಸುವ ಅಂಶವಂತೂ ಬದಲಾಗದೆ ಉಳಿಯುತ್ತದೆ: ದೇವರನ್ನು ಹೊರತು ಪಡಿಸಿ ಬೇರೆ ಯಾರನ್ನೂ ಆರಾಧಿಸಕೂಡದು.

ಸಂದೇಶಕನು ಯೋಹಾನನಿಗೆ **ದೇವರಿಗೇ ನಮಸ್ಕಾರಮಾಡು** ಎಂದು ಹೇಳಿದನು. ಹೆಚ್ಚು ಕಡಿಮೆ ಎಪ್ಪತ್ತು ವರ್ಷಗಳ ಮುಂಚೆ, ಯೇಸುವು ಹೀಗೆ ಹೇಳಿದ್ದನು, "ನನ್ನ ದೇವರಾಗಿರುವ ಕರ್ತನಿಗೆ ಅಡ್ಡಬಿದ್ದು ಆತನೊಬ್ಬನನ್ನೇ ಆರಾಧಿಸಬೇಕು" (ಮತ್ತಾಯ 4:10). ಆ ದಿನಕ್ಕಾಗಿ ಪ್ರಕಟನೆ 19:10ರ ಸಂದೇಶವು ಕ್ರೈಸ್ತರು, ತಮ್ಮ ಮೇಲೆ ಎಷ್ಟೇ ಒತ್ತಡ ಹೇರಲ್ಪಟ್ಟರೂ ಸರಿಯೇ ಅವರು ಚಕ್ರವರ್ತಿಯನ್ನು ಆರಾಧಿಸಕೂಡದು ಎಂಬುದೆ. ಬಹುಶಃ ವಾಚಕರು ತಾವು ದೇವದೂತರನ್ನು ಸಹ ಆರಾಧಿಸಕೂಡದು ಎಂಬುದನ್ನು ಸಹ ಕಲಿತುಕೊಳ್ಳಬೇಕಾಗಿತ್ತು (ಕೊಲೊಸ್ಸೆ 2:18). ಇಂದು ಇರುವ ಪಾಠವು ಏನೆಂದರೆ ನಮ್ಮ ಹೃದಯಗಳಲ್ಲಿ ಹಾಗೂ ಮನಸ್ಸುಗಳಲ್ಲಿ ಕರ್ತನಿಗಿಂತ ಮುಂಚಿನ ಸ್ಥಾನವನ್ನು ಯಾವದಕ್ಕೂ ಕೊಡಕೂಡದು ಎಂಬುದೆ. ಕೆಲವರು ಈಗಲೂ ದೇವದೂತರನ್ನು ಪೂಜ್ಯನೀಯವೆಂದು ಕಾಣುತ್ತಾರೆ, ಮತ್ತು ಇನ್ನು ಕೆಲವರು ಧಾರ್ಮಿಕ ನಾಯಕರ ಮುಂದೆ ಸಹ ಅಡ್ಡಬೀಳುತ್ತಾರೆ, ಆದರೆ ಈ ವಾಕ್ಯಭಾಗ ಹಾಗೂ 22:8, 9 ವಚನಗಳು ಅಂಥ ಕ್ರಿಯೆಗಳನ್ನು ಹಾಗೂ ಮನೋಭಾವಗಳನ್ನು ಕಡ್ಡಾಯವಾಗಿ ನಿಷೇಧಿಸುತ್ತವೆ. ದೇವದೂತರನ್ನು ಆರಾಧಿಸಕೂಡದಾಗಿದ್ದಲ್ಲಿ, ಲಯವಾಗುವ ಮನುಷ್ಯನನ್ನು ಇನ್ನೆಷ್ಟು ಅಧಿಕವಾಗಿ ಆರಾಧಿಸದೆ ಇರಬೇಕು (ನೋಡಿರಿ ಅಪೊಸ್ತಲರ ಕೃತ್ಯಗಳು 10:25, 26; 14:11-18). ಇನ್ನು ಹೆಚ್ಚು ಸಾಮಾನ್ಯವಾದದ್ದೆಂದರೆ, ಅನೇಕ ಜನರು ಇಹಲೋಕದ ಸಂಗತಿಗಳಿಗೆ ತಮ್ಮ "ವಿಗ್ರಹಗಳು" ಆಗುವಂತೆ ಅವಕಾಶ ಕೊಡುತ್ತಾರೆ (ಕೊಲೊಸ್ಸೆ 3:5). ಬೈಬಲ್ ಸ್ಪಷ್ಟವಾಗಿ ಹೇಳುತ್ತದೆ: ದೇವರೊಬ್ಬನನ್ನೇ ಆರಾಧಿಸಬೇಕು (14:7; 19:5).

ಪ್ರಕಟನೆ 19:10ನೇ ವಚನವು ಯೇಸುವು ದೇವರೆಂಬುದಾಗಿ ಪರೋಕ್ಷವಾಗಿ ಸಾಭಿತುಪಡಿಸುತ್ತದೆ: ದೇವರಿಗೇ ನಮಸ್ಕಾರಮಾಡಬೇಕು; ಆದರೆ ಭೂಮಿಯ ಮೇಲಿರುವ ವೇಳೆ, ಯೇಸುವು ಆರಾಧನೆಯನ್ನು ಸ್ವೀಕರಿಸಿಕೊಂಡನು (ಯೋಹಾನ 9:35-38).

ಯೇಸುವಿನ ಕುರಿತು ಮಾತಾಡುತ್ತಾ, ಫಿಲಿಪ್ಪಿಯವರಿಗೆ 1:6 ಹೀಗೆ ಹೇಳುತ್ತದೆ, "ದೇವರ ದೂತರೆಲ್ಲರೂ ಆತನಿಗೆ ಅಡ್ಡ ಬೀಳಲಿ ಎಂದು ಹೇಳುತ್ತಾನೆ." ದೇವರೊಬ್ಬನನ್ನೇ ಆರಾಧಿಸಬೇಕಾಗಿರುತ್ತದಾದ್ದರಿಂದ, ಯೇಸುವು ದೇವರಾಗಿರತಕ್ಕದ್ದು, ಅಂದರೆ ದೈವಿಕನು.

ದೇವರೊಬ್ಬನನ್ನೇ ಆರಾಧಿಸಬೇಕು ಎಂಬ ಸತ್ಯವು ಮಾತಾಡಿದವನು ನುಡಿದ ಗೂಢಾತ್ಮಕ ಹೇಳಿಕೆಗೆ ಒಂದು ವೇದಿಕೆಯಾಗಿರುತ್ತದೆ: **ಯೇಸುವಿನ ವಿಷಯವಾದ ಸಾಕ್ಷಿಯು ಪ್ರವಾದನೆಯ ಆತ್ಮವೇ. ಪ್ರವಾದನೆಯು** ಪ್ರೇರಿತ ಉಪದೇಶವಾಗಿರುತ್ತದೆ. 10ನೇ ವಚನದ ಕಡೇ ಭಾಗದ ಕುರಿತು ಅನೇಕ ಅರ್ಥನಿರೂಪಣೆಗಳನ್ನು ಹೊಂದಿರುವ ಸಾಧ್ಯತೆಯಿದೆ. ಕೆಲವರು ಯೇಸುವಿನ ಪ್ರಕಟನೆ ವಿಷಯದಲ್ಲಿ ಪವಿತ್ರಾತ್ಮನ ಪಾತ್ರವನ್ನು ಗಮನಕ್ಕೆ ತರುವವರಾಗಿ, **ಆತ್ಮ** ಎಂಬುದನ್ನು ಪವಿತ್ರಾತ್ಮ ಎಂದು ಅರ್ಥನಿರೂಪಣೆ ಮಾಡುತ್ತಾರೆ. ಕೆಲವರು "ಆತ್ಮ" ಎಂಬುದರ ಬದಲಾಗಿ "ಪ್ರೇರಣೆ" ಎಂಬ ಪದವನ್ನು ಬಳಸುತ್ತಾರೆ. "ಆತ್ಮ" ಎಂಬ ಪದದ ಅರ್ಥವು "ಗಾಳಿ" ಅಥವಾ "ಶ್ವಾಸ" ಎಂದು ಆಗಿರಬಲ್ಲದಾದ್ದರಿಂದ, ಕೆಲವರು ಯೇಸುವಿನ ವಿಷಯವಾದ ಸಾಕ್ಷಿಯನ್ನು ಪ್ರೇರಿತ ಉಪದೇಶದ "ಜೀವಶ್ವಾಸ" ಎಂದು ನಂಬುತ್ತಾರೆ. "ಆತ್ಮ" ಎಂಬ ಪದವು ಬಹುಶಃ ಇಲ್ಲಿ ನಿಜವಾದ "ಅರ್ಥ ಅಥವಾ ಮಹತ್ವಪೂರ್ಣತೆಯುಳ್ಳ ಸಂಗತಿ: *ಧರ್ಮಶಾಸ್ತ್ರದ ಆತ್ಮನು* [ಎಂಬಂತಹದ್ದು]."[28] ಈ ವಾಕ್ಯಭಾಗದಲ್ಲಿರುವ "ಆತ್ಮ" ಎಂಬುದಕ್ಕೆ ಪರ್ಯಾಯವಾಗಿ ಬಳಸಬಹುದಾದ ಪದವೆಂದರೆ "ತಿರುಳು" ಎಂಬುದೆ.

10ನೇ ವಚನದ ಪರಿಭಾಷೆಯ ಅರ್ಥವು ಏನೇ ಆಗಿದ್ದರೂ ಸರಿಯೇ, ಮುಖ್ಯ ಒತ್ತು "ಯೇಸು" ಎಂಬ ಪದದ ಮೇಲಿರುತ್ತದೆ, ಮತ್ತು ಪ್ರತಿಯೊಂದು ಸಂದರ್ಭದಲ್ಲಿಯೂ ಮುಕ್ತಾಯವು ಒಂದೇ ಆಗಿರುತ್ತದೆ: ಘನಪಡಿಸಲ್ಪಡುವವನು *ಯೇಸುವೇ* ಆಗಿದ್ದಾನೆ. ಯೇಸುವಿನಿಂದ ಮತ್ತು ಕುರಿತಾದ ಸಾಕ್ಷಿಯೇ ಪ್ರೇರಿತ ಉಪದೇಶದ ತಿರುಳು ಆಗಿರುತ್ತದೆ (ನೋಡಿರಿ ಲೂಕ 24:44; ಯೋಹಾನ 5:46). ಮನುಷ್ಯರು ಘನಪಡಿಸಲ್ಪಡಕೂಡದು; ದೇವದೂತರು ಘನಪಡಿಸಲ್ಪಡಕೂಡದು; ಯೇಸುವು ಮಾತ್ರವೇ ಘನಪಡಿಸಲ್ಪಡಬೇಕು. ಭೂಲೋಕದಲ್ಲಿನ ಒಂದು ವಿವಾಹವು ಮದಲಗಿತ್ತಿಯ ಸುತ್ತ ಕೇಂದ್ರಿಕೃತವಾಗಿರುತ್ತದೆ, ಆದರೆ ಈ ವಿವಾಹವು "*ಯಜ್ಞದ ಕುರಿಯಾದಾತನ* ವಿವಾಹ" ಆಗಿರುತ್ತದೆ (ವ. 7; ಒತ್ತಿ ಹೇಳಿದ್ದು ನನ್ನದು).

## ಬಿಳೀ ಕುದುರೆ ಮೇಲೆ ನಂಬಿಗಸ್ತನೂ ಸತ್ಯವಂತನೂ ಆಗಿರುವಾತನು (19:11-16)

**11ಪರಲೋಕವು ತೆರೆದಿರುವದನ್ನು ನಾನು ಕಂಡೆನು. ಆಗ ಇಗೋ, ಬಿಳೀ ಕುದುರೆಯು ನನಗೆ ಕಾಣಿಸಿತು; ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು. ಆತನು ನೀತಿಯಿಂದ ನ್ಯಾಯವಿಚಾರಿಸುತ್ತಾನೆ, ನೀತಿಯಿಂದ ಯುದ್ಧಮಾಡುತ್ತಾನೆ; 12ಆತನ ಕಣ್ಣುಗಳು ಬೆಂಕಿಯ ಉರಿಯಂತಿವೆ; ಆತನ ತಲೆಯ ಮೇಲೆ ಅನೇಕ ಮಕುಟಗಳುಂಟು; ಆತನಿಗೆ ಒಂದು ಹೆಸರು ಬರೆದು ಕೊಟ್ಟಿದೆ, ಅದು ಆತನಿಗೇ ಹೊರತು ಮತ್ತಾರಿಗೂ ತಿಳಿಯದು. 13ಆತನು ರಕ್ತಪ್ರೋಕ್ಷಿತವಾದ ವಸ್ತ್ರವನ್ನು ಧರಿಸಿಕೊಂಡಿದ್ದನು. ಆತನಿಗೆ ದೇವರ ವಾಕ್ಯವೆಂದು ಹೆಸರು. 14ಪರಲೋಕದಲ್ಲಿರುವ ಸೈನ್ಯದವರು ಶುಭ್ರವಾಗಿಯೂ ನಿರ್ಮಲವಾಗಿಯೂ ಇರುವ ನಯವಾದ ನಾರುಮಡಿಯನ್ನು ಧರಿಸಿಕೊಂಡು ಬಿಳೀ ಕುದುರೆಗಳ ಮೇಲೆ ಹತ್ತಿದವರಾಗಿ ಆತನ ಹಿಂದೆ ಬರುತ್ತಿದ್ದರು. 15ಜನಾಂಗಗಳನ್ನು ಹೊಡೆಯುವದಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ**

**ಬರುತ್ತದೆ. ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು. ಆತನು ಸರ್ವಶಕ್ತನಾದ ದೇವರ ಉಗ್ರಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ. [16]ಆತನ ತೊಡೆಯ ಮೇಲಣ ವಸ್ತ್ರದಲ್ಲಿ - ರಾಜಾಧಿರಾಜನೂ ಕರ್ತರ ಕರ್ತನೂ ಎಂಬ ಹೆಸರು ಬರೆದದೆ.**

7ರಿಂದ 10 ವಚನಗಳು ಕುರಿಯಾದಾತನ ವಿವಾಹದ ಸುತ್ತ ಕೇಂದ್ರಕೃತವಾಗಿದ್ದವು: "ಯಜ್ಞದ ಕುರಿಯಾದಾತನ ವಿವಾಹ ಕಾಲವು ಬಂತು; ಆತನಿಗೆ ವಿವಾಹವಾಗುವ ಕನ್ಯೆ ತನ್ನನ್ನು ಸಿದ್ಧಮಾಡಿಕೊಂಡಿದ್ದಾಳೆ" (19:7); "ಯಜ್ಞದ ಕುರಿಯಾದಾತನ ವಿವಾಹದ ಔತಣಕ್ಕೆ ಕರಸಿಕೊಂಡವರು ಧನ್ಯರು" (19:9). ಹೀಗೆ ವಾಚಕನು ಮಾನಸಿಕವಾಗಿ ಹಾಗೂ ಭಾವನಾತ್ಮಕವಾಗಿ ಕ್ರಿಸ್ತನು ಕಣ್ಣು ಕೋರೈಸುವ ವಿವಾಹದ ಉಡುಪು ಧರಿಸಿದವನಾಗಿ ಕಾಣಿಸಿಕೊಳ್ಳುವದನ್ನು ನೋಡುವದಕ್ಕೆ ಸಿದ್ಧನಾಗಿದ್ದನು. ಯೇಸು ಕಾಣಿಸಿಕೊಳ್ಳುವದು *ನಿಜವೇ*, ಆದರೆ, ಪ್ರಕಟನೆ ಪುಸ್ತಕದಲ್ಲಿ ಅನೇಕ ಸಾರಿ ಸಂಭವಿಸುವ ಪ್ರಕಾರವೇ, ನಾವು ನಿರೀಕ್ಷೆ ಮಾಡಿದಂತೆ ಆಗಿರಲಿಲ್ಲ. ದೃಶ್ಯದೊಳಗೆ ಹಠಾತ್ತನೆ ಕಾಣಿಸಿಕೊಳ್ಳುವವನು ಮದಲಿಂಗನಾಗಿರಲಿಲ್ಲ, ಆದರೆ ಒಬ್ಬ ಯುದ್ಧ ರಾಜನು. 11ರಿಂದ 21 ವಚನಗಳು *ಜಯ*ದ ಕುರಿತಾಗಿರುತ್ತವೆ: ಕ್ರಿಸ್ತನ ಹಾಗೂ ಆತನ ಸಭೆಯ ವೈರಿಗಳ ಮೇಲೆ ಹೊಂದುವ ಜಯ - ವಿಶೇಷವಾಗಿ, ಮೃಗ ಮತ್ತು ಸುಳ್ಳು ಪ್ರವಾದಿ (ವಚನಗಳು 19, 20) ಇವರ ಜೊತೆಯಲ್ಲಿ ಅವರ ಮಿತ್ರರ ಮೇಲೆ ಹೊಂದುವ ಜಯವಾಗಿದೆ (ವ. 21).

ಕುರಿಯಾದಾತನ ವೈರಿಗಳು ಈ ಕ್ರಮಾಂಕದಲ್ಲಿ ಪರಿಚಯಿಸಲ್ಪಡುತ್ತಾರೆ: (1) ಘಟಸರ್ಪ (12:3), (2) ಸಮುದ್ರದಿಂದ ಬಂದ ಮೃಗ ಹಾಗೂ ಭೂಮಿಯೊಳಗಿಂದ ಬಂದ ಮೃಗ (13:1, 11), ಮತ್ತು (3) ಮಹಾ ಬಾಬೆಲ (14:8; 16:19; 17:1, 5). ಅವರು ಹಿಮ್ಮೊಗ ಕ್ರಮಾಂಕದಲ್ಲಿ ತೊಲಗಿಸಲ್ಪಡುತ್ತಾರೆ: (1) 17 ಮತ್ತು 18 ಅಧ್ಯಾಯಗಳಲ್ಲಿ ಬಾಬೆಲ, (2) 19ನೇ ಅಧ್ಯಾಯದಲ್ಲಿ ಮೃಗ, ಮತ್ತು (3) ಅಂತಿಮವಾಗಿ 20ನೇ ಅಧ್ಯಾಯದಲ್ಲಿ ಘಟಸರ್ಪ. ಈ ಕ್ರಮಾಂಕದ ಅರ್ಥವು ಅವರು ಬೇರೆ ಬೇರೆ ಕಾಲಘಟ್ಟಗಳಲ್ಲಿ ಸೋಲಿಸಲ್ಪಟ್ಟರು ಎಂಬದಲ್ಲ. ಬದಲಾಗಿ, ಕ್ರಮ ಸಂಖ್ಯೆಯು ಮಹಾ ಉಪಸಂಹಾರಕ್ಕೆ ಕ್ರಮೇಣವಾಗಿ ನಡಿಸುವ ಅಂತ್ಯಕಾಲಿಕ ಸಾಧನವಾಗಿರುತ್ತದೆ. ಉಪಸಂಹಾರವು 20ನೇ ಅಧ್ಯಾಯದಲ್ಲಿ ಘಟಸರ್ಪನ ಅಂತಿಮ ಸೋಲು ಆಗಿರುತ್ತದೆ. ಹಿಂದಿನ ಅಧ್ಯಾಯಗಳಲ್ಲಿ ಬಾಬೆಲಿನ ನಾಶನವನ್ನು ನೋಡಿದ ಬಳಿಕ, ವಾಚಕನು ಈಗ ಮೃಗಗಳ ಅವನತಿಯನ್ನು ಕಾಣುವದಕ್ಕೆ ಸಿದ್ಧನಾಗಿರುತ್ತಾನೆ, ಇವುಗಳ 12ನೇ ಅಧ್ಯಾಯದಲ್ಲಿ ಅಪರಾಜಿತರಂತೆ ಕಂಡಂಥ ಭಯಂಕರ ಜೀವಿಗಳಾಗಿವೆ. ಮೊದಲನೆಯ ಮೃಗವು "ನಾಶನಕ್ಕೆ ಹೋಗುವನು" ಎಂಬುದಾಗಿ ಈ ಮುಂಚೆ ಮುಂತಿಳಿಸಲಾಗಿತ್ತು (17:8; ನೋಡಿರಿ 17:11), ಮತ್ತು ಆ ಮುಂತಿಳಿಸುವಿಕೆಯು ನಿಜವಾಗಲಿತ್ತು (19:20).

ಪ್ರಕಟನೆ 19:11-21ರ ಉದ್ದೇಶವು ಎರಡು ಮೃಗಗಳನ್ನು ಪತನಗೊಳಿಸುವಿಕೆಯನ್ನು ಚಿತ್ರಿಸುವದೇ ಆಗಿರುತ್ತದಾದರೂ, ಮುಖ್ಯ ಒತ್ತು ಆ ನಾಶನವನ್ನು ತಂದವನ ಮೇಲೆ ಇರುತ್ತದೆ: ರಾಜಾಧಿರಾಜನೂ ಕರ್ತರ ಕರ್ತನೂ. James Efirdನು ಗಮನಕ್ಕೆ ತಂದ ಪ್ರಕಾರ, "ಲೇಖಕನು ಇಲ್ಲಿ ನ್ಯಾಯತೀರ್ಪು *ಹೇಗೆ* ಸಂಭವಿಸುತ್ತದೆಂಬುದನ್ನು ಬಣ್ಣಿಸುವದಕ್ಕೆ ಪ್ರಯತ್ನಿಸುತ್ತಿಲ್ಲ ಆದರೆ ಬದಲಾಗಿ ಆ ನ್ಯಾಯತೀರ್ಪಿಗೆ ಜವಾಬ್ದಾರ*ನಾದಾತನ*ನ್ನು ಬಣ್ಣಿಸುವದೇ."[29]

**ವಚನ 11.** ಯೋಹಾನನು ಹೀಗೆ ಹೇಳುವವನಾಗಿ ಆರಂಭಿಸುತ್ತಾನೆ, **ಪರಲೋಕವು ತೆರೆದಿರುವದನ್ನು ಕಂಡೆನು.** ಈ ಮುಂಚೆ ಪರಲೋಕದೊಳಕ್ಕೆ ಒಂದು ಬಾಗಿಲು ತೆರೆಯಲ್ಪಟ್ಟು ಸಿಂಹಾಸನದಲ್ಲಿ ಕೂತಿರುವ ದೇವರನ್ನು ಪ್ರಕಟಗೊಳಿಸಿತ್ತು (4:1, 2), ಆದರೆ ಈ ದರ್ಶನಕ್ಕೆ

ಒಂದು ಬಾಗಿಲು ಗಾತ್ರದ ದೃಶ್ಯವು ಸಾಕಾಗಲಾರದ್ದಾಗಿತ್ತು. ಅಪೊಸ್ತಲನು ಕ್ರಿಸ್ತನನ್ನು ಆತನ ಶಕ್ತಿಯಲ್ಲಿ ಹಾಗೂ ಮಹಿಮೆಯಲ್ಲಿ ನೋಡುವದಕ್ಕೆ ಸಾಧ್ಯವಾಗುವಂತೆ ಇಡೀ ಪರಲೋಕವು ತೆರೆಯಲ್ಪಟ್ಟಿತು. Barclayನು ಹೀಗೆ ಬರೆದನು, "ಪ್ರಕಟನೆ ಪುಸ್ತಕದಲ್ಲಿಯೇ ಅತ್ಯಂಥ ನಾಟಕೀಯವಾದ ಕ್ಷಣಗಳಲ್ಲಿ ಒಂದು ನಮ್ಮ ಮುಂದಿರುತ್ತದೆ, ಅದು ಜಯಗೊಳ್ಳುವ ಕ್ರಿಸ್ತನು ಹೊರಹೊಮ್ಮುವದೇ."[30] G. R. Beasley-Murrayನು ಹೇಳಿದ್ದೇನೆಂದರೆ, "ಈ ವಾಕ್ಯದಲ್ಲಿ ಕರ್ತನು ಬರುವದರ ಕುರಿತ ವರ್ಣನೆಯು ಪ್ರಕಟನೆ ಪುಸ್ತಕದಲ್ಲಿಯೇ ಅತ್ಯಂಥ ಶಕ್ತಿಶಾಲಿ ಹಾಗೂ ಮನಸೆಳೆಯುವ ಚಿತ್ರಣಗಳಲ್ಲೊಂದಾಗಿದೆ."[31]

ಪರಲೋಕವು ತೆರೆದುಕೊಂಡಾಗ, ಯೋಹಾನನಿಗೆ **ಬಿಳೀ ಕುದುರೆಯು ಕಾಣಿಸಿತು; ಅದರ ಮೇಲೆ ಕೂತಿದ್ದವನಿಗೆ ನಂಬಿಗಸ್ತನೂ ಸತ್ಯವಂತನೂ ಎಂದು ಹೆಸರು.** 6ನೇ ಅಧ್ಯಾಯದಲ್ಲಿನ ಬಿಳೀ ಕುದುರೆಯ ಸವಾರನ ಗುರುತಿನ ವಿಷಯದಲ್ಲಿ ವಿವಾದವು ಇರಬಹುದು (6:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಆದರೆ 19ನೇ ಅಧ್ಯಾಯದಲ್ಲಿನ ಬಿಳೀ ಕುದುರೆ ಸವಾರನ ವಿಷಯದಲ್ಲಂತೂ ಯಾವದೇ ವಿವಾದವು ಇರುವದಿಲ್ಲ. Edward Myersನು 19:11-21ರಲ್ಲಿನ ದರ್ಶನದ ವಿಷಯದಲ್ಲಿ ಹೀಗೆ ಹೇಳಿದನು, "ಇಲ್ಲಿನ ಸವಾರನು ಹಾಗೂ 6ನೇ ಅಧ್ಯಾಯದಲ್ಲಿ ಪ್ರಸ್ತಾಪಿಸಲಾಗಿರುವ ಸವಾರನ ನಡುವೆ ಒಂದು ಸಾಮ್ಯತೆಯು ಇದೆಯೋ [ಅಥವಾ ಇಲ್ಲವೋ] ಎಂಬುದು ನಿರಾಧಾರವಾದದ್ದು."[32] 19ನೇ ಅಧ್ಯಾಯದಲ್ಲಿನ ಸವಾರನು ಯೇಸುವೇ ಎಂಬುದಕ್ಕೆ ಸಾರ್ವತ್ರಿಕವಾದ ಒಮ್ಮತವಿರುತ್ತದೆ: ಆತನು ಯೇಸುವಿನಂತೆ ತೋರುವವನಾಗಿದ್ದನು (ವಚನಗಳು 12, 15) ಮತ್ತು ಯೇಸುವಿಗಿರುವ ಬಿರುದುಗಳನ್ನು ಹೊಂದಿದ್ದನು (ವಚನಗಳು 11, 13, 16).

ಈ ವಿಭಾಗದಲ್ಲಿರುವ ಬಹಳಷ್ಟು ವರ್ಣನಾತ್ಮಕ ಪದಗಳನ್ನು ಪುಸ್ತಕದ ಆರಂಭದಲ್ಲಿ ಕಾಣಬಹುದಾಗಿದೆ. 6ನೇ ಅಧ್ಯಾಯದ ಸವಾರನ ರೀತಿಯಲ್ಲಿಯೇ, ಯೇಸುವು **ಬಿಳೀ ಕುದುರೆಯ** ಮೇಲಿದ್ದನು ಯಾಕೆಂದರೆ "ಬಿಳೀ ಕುದುರೆಯು ಜಯಿಸುವವನ ಸಂಕೇತವಾಗಿರುತ್ತದೆ ... ಒಬ್ಬ ರೋಮನ್ ಸೇನಾಧಿಪತಿಯು ಯುದ್ಧವೊಂದರಲ್ಲಿ ಜಯ ಗಳಿಸಿದಾಗ ಬಿಳೀ ಕುದುರೆಯ ಮೇಲೆಯೇ ಸವಾರಿ ಮಾಡುತ್ತಿದ್ದನು."[33] ಕರ್ತನ ಸೈನ್ಯವು ಬಿಳೀ ಕುದುರೆಗಳ ಮೇಲೆ ಸವಾರಿ ಮಾಡುತ್ತಿದ್ದರು (ವ. 14) - ಅದೇ ರೀತಿಯೇ ಜಯವನ್ನು ಸೂಚಿಸುವದಾಗಿದೆ.

ಈ ಮುಂಚೆ, ಯೇಸುವು "ನಂಬತಕ್ಕ ಸಾಕ್ಷಿ" (1:5) ಎಂದು ಕರೆಯಲ್ಪಟ್ಟನು. 3:14ರಲ್ಲಿ ಆತನು "ನಂಬತಕ್ಕ ಸತ್ಯಸಾಕ್ಷಿ" ಎಂದು ಕರೆಯಲ್ಪಟ್ಟನು. ಇಲ್ಲಿ ಆತನು **ನಂಬಿಗಸ್ತನೂ ಸತ್ಯವಂತನೂ** ಎಂದು ಕರೆಯಲ್ಪಡುತ್ತಾನೆ ಯಾಕೆಂದರೆ ಆತನು ತನ್ನ ವಿಶ್ವಾಸರ್ಹತೆಯನ್ನೂ ಭರವಸಯೋಗ್ಯತೆಯನ್ನೂ ತೋರ್ಪಡಿಸುತ್ತಿದ್ದನು: ಆತನು ನೀತಿವಂತರಿಗೆ ಪ್ರತಿಫಲವನ್ನು ಕೊಟ್ಟು ದುಷ್ಟರಿಗೆ ನ್ಯಾಯತೀರಿಸುವೆನೆಂದು ವಾಗ್ದಾನ ಮಾಡಿದ್ದನು, ಮತ್ತು ಆತನು ಆ ವಾಗ್ದಾನವನ್ನು ಕಾಪಾಡಿಕೊಳ್ಳುತ್ತಿದ್ದಾನೆ.

ಮುಂದಿನ ಹೇಳಿಕೆಯು ಬರುವಿಕೆಯಲ್ಲಿ ಆತನಿಗಿರುವ ಉದ್ದೇಶವನ್ನು ಕುರಿತು ಒತ್ತಿ ಹೇಳುತ್ತದೆ: **ನೀತಿಯಿಂದ ನ್ಯಾಯವಿಚಾರಿಸುತ್ತಾನೆ, ನೀತಿಯಿಂದ ಯುದ್ಧ ಮಾಡುತ್ತಾನೆ.** ಆತನು ಮೊದಲ ಬಾರಿಗೆ ನಮ್ಮ ರಕ್ಷಕನಾಗಿ ಬಂದನು; ಆತನು ಎರಡನೆಯ ಬಾರಿಗೆ ನಮ್ಮ ನ್ಯಾಯಾಧಿಪತಿಯಾಗಿ ಬರುವನು. ಭೂಲೋಕದ ನ್ಯಾಯಾಧಿಪತಿಗಳಿಗೆ ತದ್ವಿರುದ್ಧವಾಗಿ - ಅವರು ಅನೇಕ ಸಾರಿ ಪೂರ್ವಕಲ್ಪಿತ ಭಾವನೆಯನ್ನಿಟ್ಟುಕೊಂಡವರು, ಜನಪ್ರಿಯ ಅಭಿಪ್ರಾಯದಂತೆ ಬದಲಾಗುವವರು, ಮತ್ತು ಕೆಲವು ಸಾರಿ ಲೋಭದಿಂದ ಸಹ ಪ್ರಭಾವಕ್ಕೊಳಗಾಗುವವರು ಆಗಿರುತ್ತಾರೆ - ಯೇಸುವು ನೀತಿ ಹಾಗೂ ಸತ್ಯವಾಗಿರುವ

ನ್ಯಾಯತೀರ್ಪುಗಳನ್ನು ನೀಡುವನು.

ಈಗ ಪುನಃ ಸ್ವಲ್ಪ ತಡೆದು ಇಲ್ಲಿ ದೃಶ್ಯದಲ್ಲಿರುವದು ಯಾವದು ಎಂಬ ಪ್ರಶ್ನೆಗೆ ಉತ್ತರಿಸುವದು ಅವಶ್ಯಕವಾಗಿರುತ್ತದೆ: ಈ ಯುಗಾಂತ್ಯದಲ್ಲಾಗುವ ಎರಡನೆಯ ಬರೋಣವೀ ಅಥವಾ ಪ್ರಥಮ ಶತಮಾನದ ಕ್ರೈಸ್ತರ ವೈರಿಯನ್ನು, ಸರಳವಾಗಿ ಹೇಳುವದಾದರೆ ರೋಮನ್ ಸಾಮ್ರಾಜ್ಯವನ್ನು ದಂಡಿಸುವದಕ್ಕೆ ಕರ್ತನ ಬರುವಿಕೆಯೋ ಎಂಬುದೆ. ಪ್ರಕಟನೆ ಪುಸ್ತಕದ ಮೂಲ ವಾಚಕರಿಗಾಗಿದ್ದ ಸಂದೇಶವು ಇವುಗಳೊಳಗೆ ಎರಡನೆಯದ್ದೇ ಆಗಿತ್ತದೆಂಬುದರಲ್ಲಿ ಯಾವದೇ ಸಂದೇಹವಿರುವದಿಲ್ಲ: (1) ಈ ಮುಂಚೆ ಹೇಳಿದ ಪ್ರಕಾರ, ಯೋಹಾನನ ದಿನದಲ್ಲಿ, ಎರಡು ಮೃಗಗಳು ರೋಮನ್ ಸಾಮ್ರಾಜ್ಯವನ್ನು (ಅಥವಾ ಚಕ್ರವರ್ತಿಯನ್ನು) ಮತ್ತು ಚಕ್ರವರ್ತಿಯ ಆರಾಧನೆಯನ್ನು ಜಾರಿಗೆ ತರುತ್ತಿದ್ದ ಮಧ್ಯವರ್ತಿ ಸಂಸ್ಥೆಗಳನ್ನು ಪ್ರತಿನಿಧಿಸಿದವು. (2) ಮೂಲ ವಾಚಕರ ತಕ್ಷಣದ ಕಳಕಳಿಯು ರೋಮಿನ ಬೀಳುವಿಕೆಯಾಗಿತ್ತೇ ಹೊರತು, ಸೈತಾನನ ಅಂತಿಮವಾದ ಪತನ ಕುರಿತಾಗಿರಲಿಲ್ಲ. (3) ವಾಕ್ಯಭಾಗವು ವರ್ತಮಾನ ಕಾಲರೂಪದ ಕ್ರಿಯಾಪದವನ್ನು ಬಳಸುವದಾಗಿದ್ದು ("ನ್ಯಾಯವಿಚಾರಿಸುತ್ತಾನೆ" ಮತ್ತು "ಯುದ್ಧಮಾಡುತ್ತಾನೆ"), ಕ್ರಿಯೆಯು ದೂರದ ಭವಿಷ್ಯದಲ್ಲಿ ಅಲ್ಲದೆ, ಈಗ ತಕ್ಷಣದಲ್ಲಿ ನಡೆಯುವಂಥದ್ದಾಗಿರುತ್ತದೆ ಎಂಬುದನ್ನು ಸೂಚಿಸುತ್ತದೆ.

ಆದದರಿಂದ ವಾಕ್ಯಭಾಗವು ಕ್ರೈಸ್ತತ್ವದ ನಿರ್ದಿಷ್ಟವಾದ ವೈರಿಗಳನ್ನು ಮನಸ್ಸಿನಲ್ಲಿಟ್ಟುಕೊಂಡಿರಬಹುದಾಗಿದೆ - ಆದರೆ ಪ್ರತಿಯೊಂದು ಪೀಳಿಗೆಯಲ್ಲಿನ ವಾಚಕನಿಗಾಗಿ ಬದಲಾಗದೆ ಇರುವ ಪಾಠವು ಏನೆಂದು ಕರ್ತನ ವೈರಿಯು, ಎಷ್ಟೇ ಪರಾಕ್ರಮಿಯಾಗಿದ್ದರೂ ಸರಿಯೇ, *ಯಾವನೂ* ಆತನ ಶಕ್ತಿಯ ಎದುರಿಗೆ ನಿಲ್ಲಲಾರನು ಎಂಬುದೆ. ಅಂತ್ಯದಲ್ಲಿ, ಆತನನ್ನು ವಿರೋಧಿಸುವದ *ಎಲ್ಲರೂ* ಬಿದ್ದು ಹೋಗುವರು. ಒಂದು ಅರ್ಥದಲ್ಲಿ, ಹಾಗಾದರೆ, 19:11-16 ವಚನಗಳು ಎರಡನೆ ಬರೋಣದ ಕುರಿತಾದ ಶ್ರೇಷ್ಠ ವಾಕ್ಯಭಾಗಗಳೊಂದಿಗೆ ಸಮಾನತೆಯನ್ನು ಹೊಂದಿರುತ್ತದೆ, ಉದಾಹರಣೆಗೆ 2 ಥೆಸಲೋನಿಕ 1:7-9.

**ವಚನ 12.** 1:14ರಲ್ಲಿರುವ ಪ್ರಕಾರವೇ, ಯೇಸುವಿನ **ಕಣ್ಣುಗಳು ಬೆಂಕಿಯ ಉರಿಯಂತಿವೆ** ಎಂಬುದಾಗಿ ಬಣ್ಣಿಸಲ್ಪಟ್ಟಿವೆ (1:14; 2:18ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಆತನ ದೃಷ್ಟಿಗೆ ಯಾವದೂ ಮರೆಯಾಗಿ ಇರುವದಕ್ಕೆ ಸಾಧ್ಯವಿಲ್ಲ. ನ್ಯಾಯಾಧಿಪತಿಯು ದೋಷಾತೀತವಾಗಿ ನೀತಿವಂತನು ಮತ್ತು ನ್ಯಾಯವಾಗಿಯೂ ಇರಬೇಕಾದರೆ ಸರ್ವವ್ಯಾಪಿಯಾಗಿರುವದು ಅವಶ್ಯಕವಾಗಿರುತ್ತದೆ.

ಮುಂದೆ ಬರುವ ವಿವರವು ಹೊಸದಾಗಿರುತ್ತದೆ: **ಆತನ ತಲೆಯ ಮೇಲೆ ಅನೇಕ ಮುಕುಟಗಳುಂಟು.** ಯೇಸುವನ್ನು ಈ ಮುಂಚೆ ಜಯಮಾಲೆಯನ್ನು (στέφανος, *stephanos*; 14:14) ಧರಿಸಿದವನಾಗಿ ಚಿತ್ರಿಸಲಾಗಿತ್ತು, ಆದರೆ ಮೊದಲ ಬಾರಿಗೆ ಆಳ್ವಿಕೆಯ ಮಾಡುವ ಕೀರಿಟವನ್ನು (διάδημα, *diadēma*) ಧರಿಸಿರುವವನಾಗಿ ಬಣ್ಣಿಸಲ್ಪಟ್ಟಿದ್ದಾನೆ (2:10ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಅಷ್ಟುಮಾತ್ರವಲ್ಲದೆ, ಆತನು ಒಂದು diadem ಅಲ್ಲ, ಆದರೆ **ಅನೇಕ** ಹೊಂದಿದ್ದಾನೆ. ಅವರು ಒಂದಕ್ಕಿಂತ ಹೆಚ್ಚು ದೇಶಗಳನ್ನು ಆಳುತ್ತಿದ್ದಲ್ಲಿ ರಾಜರುಗಳು ಬಹು ಕಿರೀಟಗಳನ್ನು ಧರಿಸಿಕೊಳ್ಳುವದು ಸಾಮಾನ್ಯವಾಗಿರುತ್ತಿತ್ತು. ಕೆಲವು ಸಾರಿ ಈ ಬಹು ಕಿರೀಟಗಳು ಒಂದೇ ಕಿರೀಟವಾಗಿ ಕಾಣುವಂತೆ ಒಂದರೊಳಗೊಂದು ಹೊಂದಿಕೆ ಮಾಡಲ್ಪಟ್ಟಿರುತ್ತಿದ್ದವು. ಘಟಸರ್ಪ ಮತ್ತು ಸಮುದ್ರದಿಂದ ಬಂದ ಮೃಗವು ಸಹ ಬಹು ಕಿರೀಟಗಳನ್ನು ಹೊಂದಿದ್ದವು (12:3; 13:1), ಆದರೆ ಅವರ ಆಳ್ವಿಕೆಯು ದ್ವಿತಿಯ ಮೂಲದಿಂದ ಬಂದದ್ದೂ ತಾತ್ಕಾಲಿಕವಾಗಿರುವಂಥದ್ದೂ ಆಗಿತ್ತು. ಯೇಸು ಕ್ರಿಸ್ತನಿಗೆ ಮಾತ್ರವೇ

"ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರ ..." ಇರುತ್ತದೆ (ಮತ್ತಾಯ 28:18).

11ನೇ ವಚನವು ಯೇಸುವಿಗೆ "ನಂಬಿಗಸ್ತನೂ ಸತ್ಯವಂತನೂ" ಎಂಬುದಾಗಿ ಬಿರುದು ಕೊಡುತ್ತದೆ. 12ನೇ ವಚನವು ಎರಡನೆಯ ಬಿರುದು ಕೊಡುತ್ತದೆ: **ಆತನಿಗೆ ಒಂದು ಹೆಸರು ಬರೆದು ಕೊಟ್ಟಿದೆ, ಅದು ಆತನಿಗೇ ಹೊರತು ಮತ್ತಾರಿಗೂ ತಿಳಿಯದು. ಆತನಿಗೆ** ಎಂಬುದು ಅನುವಾದಕರಿಂದ ಸೇರ್ಪಡೆಗೊಳಿಸಲ್ಪಟ್ಟದ್ದಾಗಿದೆ (ನೋಡಿರಿ KJV); ಆತನ ಹೆಸರು ಎಲ್ಲಿ ಬರೆಯಲ್ಪಟ್ಟಿದೆ ಎಂದು ವಾಚಕನಿಗೆ ಹೇಳಲಾಗಿರುವದಿಲ್ಲ. ಪ್ರಾಚೀನ ಜಗತ್ತಿನಲ್ಲಿ ಒಂದು ಹೆಸರು ಒಬ್ಬ ವ್ಯಕ್ತಿ ಸ್ವಭಾವವನ್ನು ಬಯಲುಗೊಳಿಸುವದಾಗಿತ್ತು - ಆತನು ಯಾರು ಮತ್ತು ಆತನು ಏನಾಗಿರುತ್ತಾನೆ. ವಾಕ್ಯಭಾಗವು ಯೇಸುವಿಗೇ ಹೊರತು **ಅದು ಮತ್ತಾರಿಗೂ ತಿಳಿಯದು** ಎಂದು ಸ್ಪಷ್ಟವಾಗಿ ಹೇಳಿರುವಾಗ, ಕೆಲವು ವ್ಯಾಖ್ಯಾನಕಾರರು ಆ ಹೆಸರು ಏನಾಗಿರಬಹುದೆಂದು ಊಹೆಗಳನ್ನು ಮಾಡುವವರಾಗಿ ಅನೇಕ ಪುಟಗಳನ್ನು ವ್ಯರ್ಥ ಮಾಡುತ್ತಾರೆ. J. W. Robertsನು ಯೇಸುವಿನ ಈ ನಿಗೂಢವಾದ ಹೆಸರನ್ನು "ಆತನ ಅಸ್ತಿತ್ವ ಹಾಗೂ ಸ್ವಭಾವದ ಅಂತಿಮ ಮರ್ಮ"[34] ಎಂದು ಕರೆದದ್ದು ಬಹುಶಃ ಸರಿಯಾಗಿಯೇ ಇರಬಹುದಾಗಿದೆ. ಯೇಸುವಿನ ವಿಷಯದಲ್ಲಿರುವನ್ನೆಲ್ಲಾ, ವಿಶೇಷಯವಾಗಿ ನಾವು ಇನ್ನೂ ಶರೀರದಲ್ಲಿರುವ ವೇಳೆ ಸಮಸ್ತವನ್ನೂ ತಿಳಿದುಕೊಳ್ಳುವದಕ್ಕೆ ಸಾಧ್ಯವಿಲ್ಲ.

**ವಚನ 13.** ನಂತರ, ಯೇಸುವು **ರಕ್ತದಲ್ಲಿ ಅದ್ದಿದ ವಸ್ತ್ರವನ್ನು ಧರಿಸಿಕೊಂಡಿದ್ದನು** ಎಂದು ವಾಚಕನಿಗೆ ತಿಳಿಸಲಾಗುತ್ತದೆ. ಕೆಲವು ಪ್ರಾಚೀನ ವಾಕ್ಯಗಳಲ್ಲಿ **ಅದ್ದಿದ** ಎಂಬುದಕ್ಕೆ ಬದಲಾಗಿ "ಪ್ರೋಕ್ಷಿತ" ಎಂದಿರುತ್ತದೆ. ಇಲ್ಲಿ ಹಸ್ತಪ್ರತಿಗಳ ಪುರಾವೆಯು ಅನಿಶ್ಚಿತವಾಗಿರುತ್ತದೆ.

**ರಕ್ತ**ವು ರಕ್ತಸಾಕ್ಷಿಗಳ ರಕ್ತವನ್ನು ಸೂಚಿಸುತ್ತಿರಬಹುದಾಗಿದೆ, ಅವರಿಗಾದ ಅನ್ಯಾಯಕ್ಕಾಗಿಯೇ ಯೇಸುವು ಪ್ರತಿದಂಡನೆಯನ್ನು ಮಾಡುತ್ತಿದ್ದಾನೆ (6:10; 16:6; 17:6; 18:24; 19:2). ಇದು ಯೇಸುವಿನ ಸ್ವಂತ ರಕ್ತವನ್ನು ಸೂಚಿಸುತ್ತಿರಬಹುದಾಗಿದೆ, ಅದರ ಮೂಲಕವೇ ಜಯವನ್ನು ಗಳಿಸಲ್ಪಡುವದು (1:5; 5:9; 7:14; 12:11). ಹೇಗೂ, ಇದನ್ನು ಯೇಸುವಿನ ವೈರಿಗಳ ರಕ್ತವೆಂದು ಗುರುತಿಸುವದು ಸನ್ನಿವೇಶಕ್ಕೆ ಮತ್ತು ಹಳೆಯ ಒಡಂಬಡಿಕೆಯೊಂದಿಗೆ ಉತ್ತಮವಾಗಿ ಸರಿಹೊಂದುತ್ತದೆ. ಈ ರೂಪಕವು ಯೆಶಾಯ 63ನೇ ಅಧ್ಯಾಯದಿಂದ ತೆಗೆದುಕೊಳ್ಳಲ್ಪಟ್ಟದ್ದಾಗಿ ತೋರುತ್ತದೆ, ಅದು ಇಸ್ರಾಯೇಲ್ಯರ ವೈರಿಗಳಿಗೆ ಪ್ರತಿದಂಡನೆಯನ್ನು ಮಾಡಿ ಹಿಂದಿರುಗುವವನಾಗಿ ದೇವರನ್ನು ಚಿತ್ರಿಸುತ್ತದೆ. ಪ್ರವಾದಿಯು ಕರ್ತನನ್ನು ಹೀಗೆ ಕೇಳುತ್ತಾನೆ, "ನಿನ್ನ ಉಡುಪು ಏಕೆ ಕೆಂಪಾಗಿದೆ, ನಿನ್ನ ವಸ್ತ್ರಗಳು ದ್ರಾಕ್ಷೆಯನ್ನು ತುಳಿಯುವವನ ಬಟ್ಟೆಯ ಹಾಗಿರುವದು ಏಕೆ?" (ಯೆಶಾಯ 63:2). ಅದಕ್ಕೆ ಬಂದ ಉತ್ತರವು ಹೀಗಿದೆ,

> ನಾನೊಬ್ಬನಾಗಿಯೇ ದ್ರಾಕ್ಷೆಯನ್ನು ತೊಟ್ಟಿಯಲ್ಲಿ ತುಳಿದಿದ್ದೇನೆ, ಜನಾಂಗದವರಲ್ಲಿ ಯಾರೂ ನನ್ನೊಂದಿಗಿರಲಿಲ್ಲ. ನನ್ನ ಕೋಪದಿಂದ ಶತ್ರುಗಳನ್ನು ತುಳಿದೆನು, ರೋಷವೇರಿದವನಾಗಿ ಅವರನ್ನು ಕಾಲಿನಿಂದ ಹೊಸಗಿದೆನು; *ಅವರ ಸಾರವು ನನ್ನ ವಸ್ತ್ರಗಳ ಮೇಲೆ ಸಿಡಿದಿದೆ*, ನನ್ನ ಉಡುಪನ್ನೆಲ್ಲಾ ಮಾಸಿಕೊಂಡೆನು (ಯೆಶಾಯ 63:3; ಒತ್ತಿ ಹೇಳಿದ್ದು ನನ್ನದು).

ಪ್ರಕಟನೆ 19ನೇ ಅಧ್ಯಾಯವು ಮುಂದಿನ ಎರಡು ವಚನಗಳ ವರೆಗೂ ದ್ರಾಕ್ಷಾತೊಟ್ಟಿಯ ಪ್ರಸ್ತಾಪವನ್ನು ಮಾಡುವದಿಲ್ಲ, ಆದರೆ ಮೊದಲಿನಿಂದ ಕಡೇ ವರೆಗೂ ವರ್ತಮಾನಕಾಲ ರೂಪವನ್ನು (ಮುಂದುವರೆದ ಕ್ರಿಯೆ) ಬಳಸಲಾಗಿರುತ್ತದೆ: "ಆತನು ನ್ಯಾಯವಿಚಾರಿಸುತ್ತಾನೆ

[ನಿರಂತರವಾಗಿ] ಮತ್ತು ಯುದ್ಧಮಾಡುತ್ತಾನೆ [ನಿರಂತರವಾಗಿ]" (ವ. 11), ಮತ್ತು "ಆತನು ಸರ್ವಶಕ್ತನಾದ ದೇವರ ಉಗ್ರ ಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು [ನಿರಂತರವಾಗಿ] ತುಳಿಯುತ್ತಾನೆ" (ವ. 15). ಅಂತ್ಯಕಾಲಿಕ ಸಾಹಿತ್ಯದಲ್ಲಿ ಅನಂತರದಲ್ಲಷ್ಟೇ ಪ್ರಸ್ತಾಪಿಸಲ್ಪಡುವಂಥ ಕೆಲವೊಂದು ವಿವರವನ್ನು *ಪ್ರತೀಕ್ಷೆ ಮಾಡುವದು* ಸರ್ವಸಾಧಾರಣವಾಗಿರುತ್ತಿತ್ತು.

ಹೇಗೂ, ವಾಕ್ಯಭಾಗದ ಮೂಲಭೂತ ಸಂದೇಶವನ್ನು ಅರ್ಥಮಾಡಿಕೊಳ್ಳಬೇಕಾದರೆ ನಾವು ಆ ರಕ್ತವು ಯಾರದ್ದೆಂಬುದನ್ನು ಗುರುತಿಸುವದು ಅಗತ್ಯವಾಗಿರುತ್ತದೆ. ಬಿಳೀ ಕುದುರೆಯ ಮೇಲೆ ಅತ್ತಿಂದಿತ್ತ ದೌಡಾಯಿಸುತ್ತಿದ್ದವನು ಒಬ್ಬ ಹೊಸದಾಗಿ ಸೇನೆಗೆ ಸೇರ್ಪಡೆಗೊಳಿಸಲ್ಪಟ್ಟವನು ಆಗಿರಲಿಲ್ಲ, ಆದರೆ ಯುದ್ಧದಲ್ಲಿ ಗಾಯದ ಗುರುತುಗಳನ್ನು ಮಾಡಿಕೊಂಡಿದ್ದ ಅನುಭವಿ ಯೋಧನಾಗಿದ್ದನು, ಆತನ ರಕ್ತ-ಸಿಕ್ತ ಉಡಿಗೆಯು ಗತಕಾಲದ ಕಾದಾಟಗಳಿಗೆ ಹಾಗೂ ಗತಕಾಲದ ಜಯಗಳಿಗೆ ಸಾಕ್ಷಿಯಾಗಿತ್ತು.

ನಂತರ, **ಆತನಿಗೆ ದೇವರ ವಾಕ್ಯವೆಂದು ಹೆಸರು** ಎಂಬುದಾಗಿ ಓದುತ್ತೇವೆ. **ವಾಕ್ಯ** ಎಂಬುದು ಗ್ರೀಕ್ ಭಾಷೆಯ *λόγος* (*logos*) ಎಂಬುದರ ಅನುವಾದವಾಗಿರುತ್ತದೆ. ಯೇಸುವು ವಾಕ್ಯದ ಮೂರ್ತರೂಪನಾಗಿದ್ದಾನೆ; ದೇವರು ಯಾರು ಹಾಗೂ ಏನಾಗಿದ್ದಾನೆಂಬುದರ ಪರಿಪೂರ್ಣವಾದ ಹಾಗೂ ಸಂಪೂರ್ಣವಾದ ಪ್ರಕಟನೆಯಾಗಿರುತ್ತಾನೆ (ಯೋಹಾನ 14:9). ಯೋಹಾನನ ಬರಹಗಳಲ್ಲಿ ಯೇಸುವಿಗೆ ಬಳಸಲಾಗುವ ವಿಶಿಷ್ಟ ಹೆಸರುಗಳಲ್ಲಿ "ವಾಕ್ಯ" ಎಂಬುದು ಒಂದಾಗಿರುತ್ತದೆ; ಅಪೊಸ್ತಲನು ಯೇಸುವನ್ನು ಸೂಚಿಸುವದಕ್ಕೆ ಹೊಸ ಒಡಂಬಡಿಕೆಯಲ್ಲಿ ಈ ಪದವನ್ನು ಬಳಸಿದ ಏಕೈಕ ವ್ಯಕ್ತಿಯಾಗಿದ್ದಾನೆ (ಯೋಹಾನ 1:1, 14; 1 ಯೋಹಾನ 1:1). ಇದು ಪ್ರಕಟನೆ ಪುಸ್ತಕವನ್ನು ಬರೆದ ಅದೇ ಯೋಹಾನನೇ ಈ ಅಪೊಸ್ತಲನಾದ ಯೋಹಾನನಾಗಿದ್ದಾನೆ ಎಂಬುದಕ್ಕೆ ಇನ್ನೊಂದು ಸೂಚನೆಯಾಗಿರುತ್ತದೆ.

**ವಚನ 14.** ಯೋಹಾನನು ದೃಶ್ಯದ ಕುರಿತು ಇನ್ನಷ್ಟು ಬಣ್ಣನೆಯನ್ನು ಮಾಡುತ್ತಾ ಯೇಸುವು ಒಂದು ಸೈನ್ಯವನ್ನು ನಡಿಸುತ್ತಿದ್ದಾನೆಂದು ಹೇಳುತ್ತಾನೆ: **ಪರಲೋಕದಲ್ಲಿರುವ ಸೈನ್ಯದವರು ಶುಭ್ರವಾಗಿಯೂ ನಿರ್ಮಲವಾಗಿಯೂ ಇರುವ ನಯವಾದ ನಾರುಮಡಿಯನ್ನು ಧರಿಸಿಕೊಂಡು ಬಿಳೀ ಕುದುರೆಗಳ ಮೇಲೆ ಹತ್ತಿದವರಾಗಿ ಆತನ ಹಿಂದೆ ಬರುತ್ತಿದ್ದರು.** ಈ ಸೈನ್ಯವು ಕ್ರಿಸ್ತನ ಮದಲಗಿತ್ತಿಯನ್ನು (ಸಭೆ) ಒಳಗೊಂಡಿತ್ತೆಂದು ಅನೇಕರು ಭಾವಿಸಿಕೊಳ್ಳುತ್ತಾರೆ ಯಾಕೆಂದರೆ, ಕೆಲವು ವಚನಗಳ ಮುಂಚೆ, ಮದಲಗಿತ್ತಿಗೆ "ಪ್ರಕಾಶಮಾನವೂ ನಿರ್ಮಲವೂ ಆದ ನಯವಾದ ನಾರು ಮಡಿ"ಯಿಂದ ತಯಾರಿಸಿದ್ದ ಉಡುಪನ್ನು ಧರಿಸಿಕೊಳ್ಳಲು ಕೊಡಲ್ಪಟ್ಟಿದ್ದಳು (ವ. 8). ಆತನ ಉಡುಪು ಸಹ ಮೂಲಭೂತವಾಗಿ ಅದೇ ರೀತಿಯಲ್ಲಿಯೇ ಇರುತ್ತದೆಂಬುದು ನಿಜವೇ, ಆದರೆ ಬಹುಶಃ ಅಂಥಹದ್ದು ಸಿಂಹಾಸನದ ಕೋಣೆಯ ಪ್ರಮಾಣಕ ಉಡುಪು ಆಗಿತ್ತೆಂದು ತೋರುತ್ತದೆ (ನೋಡಿರಿ 4:4). "ಪರಲೋಕದಲ್ಲಿರುವ ಸೈನ್ಯದವರು ... ನಾರುಮಡಿಯನ್ನು ಧರಿಸಿಕೊಂಡವರು" ಬಹುಶಃ ದೇವರ ದೂತರಾಗಿರುವ ಸಂಭಾವ್ಯತೆಯು ಅಧಿಕವಾಗಿರುತ್ತದೆ. "*ಪರಿಶುದ್ಧ* ದೇವದೂತರು" (ಮಾರ್ಕ 8:38; ಒತ್ತಿ ಹೇಳಿದ್ದು ನನ್ನದು) ಪ್ರಕಾಶಮಾನವಾಗಿಯೂ ಶುಭ್ರವಾಗಿಯೂ ಇರುವ ಬಟ್ಟೆಗಳನ್ನು ಧರಿಸಿಕೊಂಡವರಾಗಿ ಚಿತ್ರಿಸಲ್ಪಟ್ಟಿರುವ ತಾರ್ಕಿಕವಾಗಿರುತ್ತದೆ. ಯೇಸುವಿನ ಸಮಾಧಿಯ ಬಳಿಯಲ್ಲಿದ್ದ ಇಬ್ಬರು ದೇವದೂತರು "ಹೊಳೆಯುವ ಉಡುಪನ್ನು" (ಲೂಕ 24:4) ಧರಿಸಿದ್ದರು. ಶಾಸ್ತ್ರಗಳುದ್ದಕ್ಕೂ, ದೇವದೂತರು ದೇವರ ಪರಲೋಕದ "ಸೈನ್ಯ" ಅಥವಾ ಸೇನೆ ಎಂದು ಚಿತ್ರಿಸಲ್ಪಟ್ಟಿರುತ್ತಾರೆ (ನೋಡಿರಿ

ಯೆಹೋಶುವ 5:14, 15; 1 ಅರಸು 22:19; 1 ಪೂರ್ವಕಾಲವೃತ್ತಾಂತ 12:22; ದಾನಿಯೇಲ 7:10; ಮತ್ತಾಯ 26:53). ಯೇಸು ಯಾವ ಮಾರ್ಪಾಡೂ ಇಲ್ಲದೆ ತನ್ನ ಪರಿಶುದ್ಧ ದೇವದೂತರ ಸಂಗಡ ಬರುವವನಾಗಿ ಚಿತ್ರಿಸಲ್ಪಟ್ಟಿರುತ್ತಾನೆ (ಮತ್ತಾಯ 25:31; ಮಾರ್ಕ 8:38; ಲೂಕ 9:26; 2 ಥೆಸಲೋನಿಕ 1:7).

Albertus Pietersನು ಹೀಗೆ ಬರೆದನು, "ಕ್ರೈಸ್ತರು ಪರಲೋಕದ ವಿಶ್ರಾಂತಿಯನ್ನು ಪಡೆದುಕೊಂಡ ಬಳಿಕ ಪುನಃ ಕೆಟ್ಟದ್ದರ ಮೇಲೆ ಯುದ್ಧ ಮಾಡುವದಕ್ಕೆ ಹೋಗುವರೆಂಬುದಾಗಿ ಮಾತಾಡುವದು ಶಾಸ್ತ್ರಗಳಿಗೆ ಅಪರಿಚಿತವಾದ ವಿಚಾರವಾಗಿರುತ್ತದೆ."[35] Coffmanನು ತನ್ನ ಹೇಳಿಕೆಯಲ್ಲಿ ಸ್ವಲ್ಪ ಹಾಸ್ಯವನ್ನು ಸೇರ್ಪಡೆಗೊಳಿಸಿದನು: "ಕರ್ತನು ತನ್ನ ಕುರಿಗಳನ್ನು ತೋಳಗಳ ವಿರುದ್ಧದ ನಾಶನದ ದಂಡಯಾತ್ರೆಯಲ್ಲಿ ಸಂಘಟಿಸಲ್ಪಟ್ಟವುಗಳಾಗಿ ಎಂದಿಗೂ ಚಿತ್ರಿಸಿರುವದಿಲ್ಲ!"[36]

ಹೇಗೂ, ಸೈನ್ಯವು ದೇವಜನರನ್ನೊಳಗೊಂಡಿತ್ತೋ ಅಥವಾ ದೇವದೂತರನ್ನೊಳಗೊಂಡಿತ್ತೋ ಎಂಬುದರಿಂದ ಯಾವ ಸಮಸ್ಯೆಯು ಎದುರಾಗುವದಿಲ್ಲ. ಸೈನ್ಯವು ಯೇಸುವನ್ನು ಹಿಂಬಾಲಿಸುವದನ್ನು ಹೊರತು ಪಡಿಸಿ ಬೇರೆ ಇನ್ನೇನೂ ಮಾಡುವಂಥದ್ದಾಗಿ ಚಿತ್ರಿಸಲ್ಪಟ್ಟಿರುವದಿಲ್ಲ. Morrisನು ಹೀಗೆ ಹೇಳುತ್ತಾನೆ, "[ಯೇಸುವು] ಜನಾಂಗಗಳನ್ನು ಹೊಡೆಯುವದು ವಾಕ್ಯದಿಂದಲೇ ಹೊರತು ಸೈನ್ಯಗಳ ಮೂಲಕವಲ್ಲ. ... ಸೈನ್ಯಗಳು ವಾಕ್ಯಕ್ಕೆ ಹಿಂಪರೆದೆಯಲ್ಲಿ ಯಾವದೇ ಪಾತ್ರವನ್ನು ನಿರ್ವಹಿಸುವದಿಲ್ಲ. ಅವರು ಆತನೊಂದಿಗಿರುವ ತಕ್ಕದಾದ ಪರಿವಾರವಾಗಿದ್ದಾರೆ, ಆದರೆ ಆತನು ಅವರ ಮೇಲೆ ಅವಲಂಭಿತನಾಗಿರುವದಿಲ್ಲ."[37]

**ವಚನ 15.** ತನ್ನ ವೈರಿಗಳನ್ನು ಅಧೀನಪಡಿಸಿಕೊಳ್ಳುವವನು *ಯೇಸುವೇ* ಆಗಿದ್ದಾನೆ: **ಜನಾಂಗಗಳನ್ನು ಹೊಡೆಯುವದಕ್ಕಾಗಿ ಹದವಾದ ಕತ್ತಿಯು ಆತನ ಬಾಯಿಂದ ಬರುತ್ತದೆ. ಆತನು ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು. ಆತನು ಸರ್ವಶಕ್ತನಾದ ದೇವರ ಉಗ್ರಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ.** ಗ್ರೀಕ್ ವಾಕ್ಯದಲ್ಲಿ, ಕಡೇ ಎರಡು ಸರ್ವನಾಮಗಳು ಒತ್ತಿ ಹೇಳಲ್ಪಟ್ಟಿವೆ. ವಾಸ್ತವಿಕ ಸರ್ವನಾಮವಾಗಿರುವ **ಆತನು** (αὐτός, *autos*) ಎಂಬುದು **ಆಳುವನು** (ποιμανεῖ, *poimanei*) ಮತ್ತು **ತುಳಿಯುತ್ತಾನೆ** (πατεῖ, *patei*) ಎಂಬ ಕ್ರಿಯಾಪದಗಳೊಂದಿಗೆ ಸೇರ್ಪಡೆಗೊಳಿಸಲ್ಪಟ್ಟಿದ್ದು, ಅವುಗಳ ಅಂತ್ಯ ಪ್ರತ್ಯಯಗಳು (ει, *ei*) "ಆತನು" ವಿಷಯವಾಗಿದ್ದಾನೆಂಬುದನ್ನು ಈಗಾಗಲೇ ಸೂಚಿಸುವಂಥವುಗಳಾಗಿವೆ. ಹೀಗೆ ವಾಕ್ಯವು ಪ್ರತಿಪಾದಿಸುವದೇನೆಂದರೆ "*ಆತನು* ಅವರನ್ನು ಕಬ್ಬಿಣದ ಕೋಲಿನಿಂದ ಆಳುವನು," ಮತ್ತು "*ಆತನು* ದೇವರ ಉಗ್ರಕೋಪವೆಂಬ ದ್ರಾಕ್ಷೆಯ ತೊಟ್ಟಿಯಲ್ಲಿರುವದನ್ನು ತುಳಿಯುತ್ತಾನೆ" ಎಂಬದೆ.

15ನೇ ವಚನದ ಸಾಂಕೇತಿಕತೆಯು ಪ್ರಕಟನೆ ಪುಸ್ತಕದಲ್ಲಿ ಈ ಮುಂಚೆ ಬಳಸಲ್ಪಟ್ಟಿರುತ್ತದೆ: ಆತನ ಬಾಯಿಂದ ಹದವಾದ ಕತ್ತಿ ಹೊರಡುತ್ತದೆ (1:16; 2:12ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಕೋಲು (2:27; 12:5ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ), ಮತ್ತು ದ್ರಾಕ್ಷೆಯ ತೊಟ್ಟಿ (14:19ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಯೇಸುವು ದುಷ್ಟರಾಗಿರುವವರನ್ನು ನ್ಯಾಯತೀರಿಸಲು, ದಂಡಿಸಲು, ಮತ್ತು ನಾಶಗೊಳಿಸಲು ಬರುತ್ತಿದ್ದಾನೆಂಬುದನ್ನು ಒತ್ತಿ ಹೇಳುವದಕ್ಕೆ ಪವಿತ್ರಾತ್ಮನು ಚಿತ್ರದ ಮೇಲೆ ಚಿತ್ರವನ್ನು ರಾಶಿಯಾಗಿ ಕೂಡಿಸುತ್ತಾನೆ. George Laddನು ಹೀಗೆ ಬರೆದನು,

> ಕೆಲವು ವ್ಯಾಖ್ಯಾನಕಾರರ ನಿಲುವು ಏನೆಂದರೆ ಕ್ರಿಸ್ತನ ಈ ಚಿತ್ರಣವು ಹೊಸ

ಒಡಂಬಡಿಕೆಯ ಉಳಿದ ಭಾಗದಲ್ಲೆಲ್ಲಾ ಕಂಡು ಬರುವ ಕೃಪಾಭರಿತನೂ ಕುರಣೆಯುಳ್ಳವನೂ ಆಗಿರುವ ಕ್ರಿಸ್ತನ ಚಿತ್ರಣಕ್ಕೆ ತದ್ವಿರುದ್ಧವಾಗಿರುತ್ತದೆ ಎಂಬುದೆ. ಇದು ಸತ್ಯವಲ್ಲವಷ್ಟೇ; ಹೊಸ ಒಡಂಬಡಿಕೆಯಲ್ಲೆಲ್ಲಾ ನ್ಯಾಯತೀರ್ಪಿನ ಮೂಲಕವಾಗಿ ಜಯ ಎಂಬ ಅಂಶವು ಕ್ರಿಸ್ತನ ಸಂಪೂರ್ಣ ಕೆಲಸದಲ್ಲಿ ತಪ್ಪಿಸಿಕೊಳ್ಳಲಾಗದ ಸಂಗತಿಯಾಗಿರುತ್ತದೆ. (ನೋಡಿರಿ ಮತ್ತಾಯ 13:41-42; 25:41; ರೋಮಾ 2:5; 2 ಥೆಸಲೋನಿಕ 1:7; 2:8.)[38]

**ವಚನ 16.** ಈ ದೃಶ್ಯಕ್ಕೆ ಪರಾಕಾಷ್ಠೆಯಾಗಿ ಬಿಳೀ ಕುದುರೆ ಮೇಲಿನ ಸವಾರನ ಕುರಿತು ಇನ್ನಷ್ಟು ಪ್ರಕಟನೆಯನ್ನು ಒದಗಿಸಲಾಗುತ್ತದೆ: **ಆತನ ತೊಡೆಯ ಮೇಲಣ ವಸ್ತ್ರದಲ್ಲಿ - ರಾಜಾಧಿರಾಜನೂ ಕರ್ತರ ಕರ್ತನೂ ಎಂಬ ಹೆಸರು ಬರೆದದೆ.** ಎಲ್ಲರೂ ಸ್ಪಷ್ಟವಾಗಿ ನೋಡಬಹುದಾದ ಮತ್ತು ಗುರುತಿಸಬಹುದಾದ ರೀತಿಯಲ್ಲಿ ಒಂದು ಎದ್ದುಕಾಣುವ ಸ್ಥಳದಲ್ಲಿ ಬರೆಯಲ್ಪಟ್ಟಿತ್ತು: ಕುದುರೆ ಸವಾರನ ಮೇಲೆ, ಸಾಮಾನ್ಯವಾಗಿರುವ **ತೊಡೆಯ** ಭಾಗವು ಪ್ರಧಾನವಾಗಿರುತ್ತದೆ. ಹೇಗೂ, ಹೆಸರು ಬರೆಯಲ್ಪಟ್ಟಿದ್ದ ನಿಖರವಾದ ಸ್ಥಳವು ಅನಿಶ್ಚಿತವಾಗಿರುತ್ತದೆ. ಕೆಲವರು ಆ ಹೆಸರು ತೊಡೆಯನ್ನು ಮುಚ್ಚಿದ್ದ **ವಸ್ತ್ರದ** ಭಾಗವಾಗಿತ್ತೆಂದು ನಂಬುತ್ತಾರೆ. ಇನ್ನು ಕೆಲವರು ಗ್ರೀಕ್ ವಾಕ್ಯವು ಆತನ ವಸ್ತ್ರ *ಮತ್ತು* ಆತನ ತೊಡೆಯ ಮೇಲೆ ಎಂದು ಹೇಳುತ್ತದೆಂಬುದನ್ನು ಗಮನಕ್ಕೆ ತರುತ್ತಾರೆ. ಬೇರೆ ಕೆಲವರು ಹೆಸರನ್ನು ತೊಡೆಯ ಸಾಮಾನ್ಯ ಭಾಗದಲ್ಲಿರುತ್ತಿದ್ದ ಉಡುಪು ಅಥವಾ ಆಯುಧದ ಮೇಲೆ ಬರೆದಿತ್ತೆಂದು ಹೇಳುತ್ತಾರೆ: ಆತನ ಅಗಲವಾದ ನಡುಕಟ್ಟು (ಸುತ್ತುಗಟ್ಟು), ಆತನ ಕತ್ತಿಯ ಹಿಡಿಕೆಯ ಮೇಲೆ, ಅಥವಾ ಬೇರೊಂದು ಕಡೆಯಲ್ಲಿ. ನಿಖರವಾದ ಸ್ಥಳವು ಅಮುಖ್ಯವಾಗಿರುತ್ತದೆ; ಇಲ್ಲಿ ನಿರ್ದಿಷ್ಟವಾದ ಸ್ಥಳವನ್ನು ಗುರುತಿಸುವದರ ಮೇಲೆ ಒತ್ತು ಕೊಡಲಾಗಿರುವದಿಲ್ಲ, ಆದರೆ ಆತನ ಹೆಸರು ಎದ್ದು ಕಾಣುವಂಥದ್ದಾಗಿತ್ತು ಮತ್ತು ಸುಲಭವಾಗಿ ಕಾಣಿಸುತ್ತಿತ್ತು ಎಂಬುದೆ.

ಪರಿಶುದ್ಧ ಬಿರುದು **ರಾಜಾಧಿರಾಜನೂ ಕರ್ತರ ಕರ್ತನೂ** ಎಂದಾಗಿತ್ತು. ಮೋಶೆಯು ಇಸ್ರಾಯೇಲ್ಯರಿಗೆ ಹೀಗೆ ಹೇಳಿದನು, "ನಿಮ್ಮ ದೇವರಾದ ಯೆಹೋವನು ದೇವಾಧಿದೇವನಾಗಿಯೂ ಕರ್ತರ ಕರ್ತನಾಗಿಯೂ ಇದ್ದಾನೆ" (ಧರ್ಮೋಪದೇಶಕಾಂಡ 10:17). ನೆಬೂಕದ್ನೆಚ್ಚರನು ದಾನಿಯೇಲನ ದೇವರನ್ನು "ದೇವಾಧಿದೇವನೂ ರಾಜರ ಒಡೆಯನೂ" ಎಂದು ಒಪ್ಪಿಕೊಂಡಿದ್ದನು (ದಾನಿಯೇಲ 2:47). ಪೌಲನು ದೇವರನ್ನು "ರಾಜಾಧಿರಾಜನೂ ಕರ್ತರ ಕರ್ತನೂ" ಎಂದು ಕರೆದನು (1 ತಿಮೊಥೆ 6:15). ಪ್ರಕಟನೆ ಪುಸ್ತಕದಲ್ಲಿ ಈ ದೈವಿಕ ನಾಮಧೇಯವು ಯೇಸುವಿಗೆ ಅನ್ವಯಿಸಲ್ಪಟ್ಟಿದೆ. ಸಾಮಾನ್ಯವಾಗಿ ದೇವರಿಗೆ ಅನ್ವಯಿಸಲ್ಪಡುವಂಥ ಈ ಪರಿಭಾಷೆಯು, ಈಗ ಯೇಸುವಿಗೆ ಅನ್ವಯಿಸಲ್ಪಡುತ್ತದೆಂಬ ವಾಸ್ತವಾಂಶವು ಆತನು ಸ್ವತಃ ದೈವಿಕನಾಗಿದ್ದಾನೆಂಬುದಕ್ಕೆ ಇನ್ನೊಂದು ಪುರಾವೆಯಾಗಿರುತ್ತದೆ. ಪ್ರಕಟನೆ 17:14 ಹೀಗೆ ಹೇಳುತ್ತದೆ, "ಅವರು [ಮೃಗ ಮತ್ತು ಆತನ ಮಿತ್ರರು] ಯಜ್ಞದ ಕುರಿಯಾದಾತನ ಮೇಲೆ ಯುದ್ಧಮಾಡುವರು, ಆದರೆ ಆತನು ಕರ್ತರ ಕರ್ತನೂ ರಾಜಾಧಿರಾಜನೂ ಆಗಿರುವದರಿಂದ ಅವರನ್ನು ಜಯಿಸುವನು."

ಈ ಹೆಸರು ಮನುಷ್ಯರು ತಮ್ಮ ಬಗ್ಗೆ ಹೇಳಿಕೊಂಡ ಮಾತುಗಳನ್ನು ಖಂಡಿಸುವದಾಗಿತ್ತು: ಚಕ್ರವರ್ತಿಯು "ರಾಜಾಧಿರಾಜನೂ ಕರ್ತರ ಕರ್ತನೂ" ಎಂದು ಕರೆಯಲ್ಪಟ್ಟಿರಬಹುದು, ಆದರೆ ಆತನು ಹಾಗಿರುವದಿಲ್ಲ. ಹೆಸರು ಯೇಸುವಿನ ಸರ್ವೋನ್ನತತೆಯನ್ನು ಸಹ ಪ್ರತಿಪಾದಿಸುವದಾಗಿತ್ತು: ಆತನೊಬ್ಬನೇ ರಾಜಾಧಿರಾಜನು ಮತ್ತು ಕರ್ತರ ಕರ್ತನು. ಅನೇಕ ದೇವರುಗಳು ಅಥವಾ ಕರ್ತರು ಇದ್ದಾರೆ (1 ಕೊರಿಂಥ 8:5), ಆದರೆ ಎಲ್ಲರ ಮೇಲೆಯೂ ಕರ್ತನಾಗಿರುವಾತನು ಒಬ್ಬನೇ (ಎಫೆಸ 4:5). ಅನೇಕ ದೊರೆಗಳು ಇರುತ್ತಾರೆ, ಆದರೆ ಎಲ್ಲರ

ಮೇಲೆಯೂ ಅರಸನಾಗಿರುವಾತನು ಒಬ್ಬನೇ.

## ಮಾಂಸವನ್ನು ತಿನ್ನುವದಕ್ಕೆ ಪಕ್ಷಿಗಳು ಕರೆಯಲ್ಪಡುತ್ತವೆ (19:17, 18)

**[17]ಆಮೇಲೆ ಒಬ್ಬ ದೇವದೂತನು ಸೂರ್ಯನಲ್ಲಿ ನಿಂತಿರುವದನ್ನು ಕಂಡೆನು. ಅವನು ಮಹಾ ಶಬ್ದದಿಂದ ಕೂಗುತ್ತಾ ಆಕಾಶದಲ್ಲಿ ಹಾರಾಡುವ ಎಲ್ಲಾ ಪಕ್ಷಿಗಳಿಗೆ - ಬನ್ನಿರಿ, ದೇವರು ಮಾಡಿಸುವ ಮಹಾಭೋಜನಕ್ಕೆ ಕೂಡಿಬನ್ನಿರಿ, [18]ರಾಜರ ಮಾಂಸವನ್ನೂ ಸಹಸ್ರಾಧಿಪತಿಗಳ ಮಾಂಸವನ್ನೂ ಪರಾಕ್ರಮಶಾಲಿಗಳ ಮಾಂಸವನ್ನೂ ಕುದುರೆಗಳ ಮಾಂಸವನ್ನೂ ರಾಹುತರ ಮಾಂಸವನ್ನೂ, ಸ್ವತಂತ್ರರೂ ದಾಸರೂ ದೊಡ್ಡವರೂ ಚಿಕ್ಕವರೂ ಇವರೆಲ್ಲರ ಮಾಂಸವನ್ನೂ ತಿನ್ನುವದಕ್ಕೆ ಬನ್ನಿರಿ ಎಂದು ಹೇಳಿದನು.**

**ವಚನಗಳು 17, 18.** ಮುಖ್ಯ ಗಮನವು ಈಗ ಯೇಸುವಿನ ಕಡೆಯಿಂದ ಬದಲಾಗಿ **ಒಬ್ಬ ದೇವದೂತನ** ಕಡೆಗೆ ತಿರುಗುತ್ತದೆ. ಗ್ರೀಕ್ ವಾಕ್ಯದಲ್ಲಿ ಅಕ್ಷರಶಃ "ಒಬ್ಬನು" (ἕνα, *hena*) ದೇವದೂತನು ಎಂದಿರುತ್ತದೆ. ದೇವದೂತನು ಕಾಣಿಸಲ್ಪಡುವ ಹಾಗೆ **ಸೂರ್ಯನ ಮೇಲೆ ನಿಂತಿದ್ದನು** (ನೋಡಿರಿ 1 ತಿಮೊಥೆ 6:16; 1 ಪೇತ್ರ 2:9; 1 ಯೋಹಾನ 1:5; 7:2ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). **ಸೂರ್ಯನ** ಸಾಂಕೇತಿಕತೆಯು ದೇವದೂತನ ಸಂದೇಶದ ಮಹಿಮೆ ಮತ್ತು/ಅಥವಾ ಪ್ರಾಮುಖ್ಯತೆಯನ್ನು ಸೂಚಿಸಬಹುದಾಗಿದೆ (10:1), ಅಥವಾ ಆತನು ಬೆಳಕಿನ ಮೂಲದಿಂದ (ಪ್ರಕಾಶಮಾನತೆಯಿಂದ) ಬಂದವನಾಗಿರಬಹುದು.

ಸಂದೇಶಕನು **ಆಕಾಶದಲ್ಲಿರುವ ಎಲ್ಲಾ ಪಕ್ಷಿಗಳಿಗೆ** ಕೇಳಿಸುವಂತೆ **ಮಹಾಶಬ್ದದಿಂದ ಕೂಗುತ್ತಾ** ಇದ್ದನು. "ಆಕಾಶದಲ್ಲಿ" ಹಾರಾಡುವ ಪಕ್ಷಿಗಳು ದೊಡ್ಡವುಗಳು, ಬಲವಾದ ರೆಕ್ಕೆಗಳುಳ್ಳವುಗಳಾಗಿರುತ್ತವೆ, ಅವುಗಳಲ್ಲಿ ಅನೇಕ ಪಕ್ಷಿಗಳು ಮಾಂಸಾಹಾರಿಗಳಾಗಿರುತ್ತವೆ. ಅವುಗಳು ನೆಲದಿಂದ ಬಹಳ ಎತ್ತರದಲ್ಲಿ ವೃತ್ತಾಕಾರವಾಗಿ ಹಾರಾಡುತ್ತಾ ಆಹಾರವನ್ನು ಹುಡುಕುತ್ತಿರುತ್ತವೆ. ದೇವದೂತನು ಈ ಮಾಂಸ-ತಿನ್ನುವ ಪಕ್ಷಿಗಳಿಗೆ ಒಂದು ಶುಭವರ್ತಮಾನವನ್ನು ಹೊಂದಿದ್ದನು: ತಾಜಾ, ಸಮೃದ್ಧವಾದ ಆಹಾರವು ಸಿದ್ಧವಾಗಿ ಇಡಲ್ಪಟ್ಟಿತ್ತು. ಆತನು ಹೀಗೆ ಕೂಗಿದನು,

> **ಬನ್ನಿರಿ, ದೇವರು ಮಾಡಿಸುವ ಮಹಾಭೋಜನಕ್ಕೆ ಕೂಡಿಬನ್ನಿರಿ, ರಾಜರ ಮಾಂಸವನ್ನೂ ಸಹಸ್ರಾಧಿಪತಿಗಳ ಮಾಂಸವನ್ನೂ ಪರಾಕ್ರಮಶಾಲಿಗಳ ಮಾಂಸವನ್ನೂ ಕುದುರೆಗಳ ಮಾಂಸವನ್ನೂ ರಾಹುತರ ಮಾಂಸವನ್ನೂ, ಸ್ವತಂತ್ರರೂ ದಾಸರೂ ದೊಡ್ಡವರೂ ಚಿಕ್ಕವರೂ ಇವರೆಲ್ಲರ ಮಾಂಸವನ್ನೂ ತಿನ್ನುವದಕ್ಕೆ ಬನ್ನಿರಿ.**

ಮೂಲ ವಾಕ್ಯದಲ್ಲಿ, 18ನೇ ವಚನದ ಪೂರ್ತಿಯೆಲ್ಲಾ **ಮಾಂಸವನ್ನು** (σάρκας, *sarkas*, ಇದು σάρξ, *sarx* ಎಂಬದರಿಂದ ಬಂದದ್ದು) ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದದ ಮುಂಚೆ ಯಾವದೆ ನಿರ್ದಿಷ್ಟ ಗುಣವಾಚಿ ("the") ಇರುವದಿಲ್ಲ. ಅಷ್ಟುಮಾತ್ರವಲ್ಲದೆ, *sarkas* ಎಂಬುದು ಬಹುವಚನವಾಗಿದ್ದು "ಮಾಂಸಗಳು" ಎಂದರ್ಥವನ್ನು ಕೊಡುತ್ತದೆ. ಈ ಪದವು "ದೇಹಗಳು" ಅಥವಾ "ಶವಗಳು" ಎಂಬುದಾಗಿ ಅನುವಾದಿಸಲ್ಪಡಬಹುದಾಗಿದೆ. **ಇವರೆಲ್ಲರ** ಎಂಬುದು ಸನ್ನಿವೇಶದಿಂದ ಅರ್ಹಗೊಳಿಸಲ್ಪಡಬೇಕು: ಮೃಗದೊಂದಿಗೆ ತಮ್ಮನ್ನು ಹೊಂದಾಣಿಕೆ ಪಡಿಸಿಕೊಂಡಿದ್ದ "ಇವರೆಲ್ಲರು." ಸ್ಪಷ್ಟವಾಗಿರುವ ಪ್ರಕಾರ, ಕ್ರೈಸ್ತರು ಇದರಿಂದ ಹೊರಗಿಡಲ್ಪಡುತ್ತಾರೆ. ಮನುಷ್ಯರ ವರ್ಗಗಳ ಜೊತೆಯಲ್ಲಿ **ಕುದುರೆಗಳ ಮಾಂಸ** ಎಂಬುದನ್ನು

ಸೇರ್ಪಡೆಗೊಳಿಸಿರುವದು ವಿಚಿತ್ರವೆಂದು ಕಾಣಿಸುತ್ತದೆ, ಆದರೆ ಬಹುಶಃ ಚಿತ್ರಣವನ್ನು ಪೂರ್ತಿಗೊಳಿಸುವದನ್ನು ಬಿಟ್ಟರೆ ಬೇರೆ ಯಾವದೇ ಮಹತ್ವವು ಅದಕ್ಕೆ ಇಲ್ಲವೆಂದು ಕಾಣುತ್ತದೆ.

ಎದುರುನೋಡಿದಂಥ ದೃಶ್ಯವು ಭಯಾನಕವಾದದ್ದು: ರಕ್ತಸಿಕ್ತವಾದ ಯುದ್ಧಭೂಮಿಯು ಛಿದ್ರಗೊಂಡು ಮುರಿದು ಹೋಗಿರುವ ಶವಗಳ ರಾಶಿಯಿಂದ ತುಂಬಿರುತ್ತದೆ, ಪಕ್ಷಿಗಳು ಸತ್ತವರ ಮಾಂಸವನ್ನು ಕಿತ್ತು ತಿನ್ನುತ್ತಿರುವದು. ನಮಗೆ ಯೇಸುವಿನ ಮಾತುಗಳು ಜ್ಞಾಪಕಕ್ಕೆ ಬರುತ್ತವೆ: "ಹೆಣ ಬಿದ್ದಲ್ಲಿ ಹದ್ದುಗಳು ಕೂಡುವವು" (ಮತ್ತಾಯ 24:28). ಅಲ್ಲದೆ ನಮಗೆ "ಮಾಗೋಗ್ ದೇಶದ ದೊರೆಯಾದ ಗೋಗ್"ನ ಕುರಿತು ಯೆಹೆಜ್ಕೇಲನ ದೈವೋಕ್ತಿಯು ಜ್ಞಾಪಕಕ್ಕೆ ಬರುತ್ತದೆ (ಯೆಹೆಜ್ಕೇಲ 38:2). ಪ್ರವಾದಿಗೆ ಹೀಗೆ ಆಜ್ಞಾಪಿಸಲಾಗಿತ್ತು,

> ... ಎಲ್ಲಾ ಬಗೆಯ ಪಕ್ಷಿಗಳಿಗೂ ಸಮಸ್ತ ಭೂಜಂತುಗಳಿಗೂ ಹೀಗೆ ನುಡಿ - ನೀವು ಕೂಡಿಬನ್ನಿರಿ; ನಾನು ... ನಿಮಗಾಗಿ ಮಾಡುವ ಮಹಾಯಜ್ಞಕ್ಕೆ ಎಲ್ಲಾ ಕಡೆಯಿಂದಲೂ ನೆರೆದು ಬಂದು ಮಾಂಸವನ್ನು ತಿಂದು ರಕ್ತವನ್ನು ಕುಡಿಯಿರಿ ... ಬಲಿಷ್ಠರು, ಭೂಪತಿಗಳು ಇವರ ಮಾಂಸವೂ ರಕ್ತವೂ ನಿಮಗೆ ಸಿಕ್ಕುವವು. ನಾನು ನಿಮಗೋಸ್ಕರ ವಧಿಸಿರುವ ಯಜ್ಞಪಶುಗಳ ಮಾಂಸವನ್ನು ಹೊಟ್ಟೆತುಂಬಾ ತಿನ್ನುವಿರಿ, ರಕ್ತವನ್ನು ಅಮಲೇರ ಕುಡಿಯುವಿರಿ. ನಾನು ಸಿದ್ಧಪಡಿಸುವ ಆ ಔತಣದಲ್ಲಿ ಕುದುರೆ ರಾಹುತ ಶೂರ ಸಕಲ ವಿಧವಾದ ಸೈನಿಕ ಇವರನ್ನು ಬೇಕಾದಷ್ಟು ಭಕ್ಷಿಸುವಿರಿ; ಇದು ಕರ್ತನಾದ ಯೆಹೋವನ ನುಡಿ (ಯೆಹೆಜ್ಕೇಲ 39:17-20).

ಪ್ರಕಟನೆ 19:17, 18ರಲ್ಲಿನ ವಿಕಟವಾದ ಔತಣವು **ದೇವರು ಮಾಡಿಸುವ ಮಹಾ ಭೋಜನ** ಎಂದು ಕರೆಯಲ್ಪಟ್ಟಿದೆ ಯಾಕೆಂದರೆ ಅದು ಆತನಿಂದ ಏರ್ಪಡಿಸಲ್ಪಟ್ಟಿತ್ತು. ಈ "ಭೋಜನ"ವು ವಿವಿಧ ಖಾದ್ಯಗಳ ಪಟ್ಟಿಯನ್ನು ಒಳಗೊಂಡಿತ್ತು: ಅಲ್ಲಿ **ರಾಜರ** ಮತ್ತು **ಪರಾಕ್ರಮಶಾಲಿಗಳ, ಸಹಸ್ರಾಧಿಪತಿಗಳ** ಮತ್ತು ಅವರ ರಾಹುತರ ಮಾಂಸವು ಇತ್ತು. "ಸಹಸ್ರಾಧಿಪತಿ" ಅಥವಾ "ಸೇನಾನಾಯಕ" ಎಂಬುದನ್ನು ಅನುವಾದಿಸಿರುವ ಗ್ರೀಕ್ ಪದ χιλίαρχος (*chiliarchos*) ಎಂಬುದು, ಆರನೂರರಿಂದ ಒಂದು ಸಾವಿರದ ವರೆಗಿನ ಸಿಪಾಯಿಗಳ ಮೇಲೆ ಮಿಲಿಟರಿ ನಾಯಕನಾಗಿರುತ್ತಿದ್ದವನನ್ನು ಸೂಚಿಸುತ್ತದೆ. ತಮಗಾಗುವ ದಂಡನೆಯಿಂದ ತಪ್ಪಿಸಿಕೊಳ್ಳುವದಕ್ಕೆ ರಾಜರಿಗೆ ಅಷ್ಟೊಂದು ಶಕ್ತಿಯಿರಲಿಲ್ಲ, ಪರಾಕ್ರಮಶಾಲಿಗಳಿಗೆ ಸಾಕಷ್ಟು ಪ್ರಭಾವವು ಇರಲಿಲ್ಲ, ಅಥವಾ ಸಹಸ್ರಾಧಿಪತಿಗಳಿಗೆ ಸಾಕಷ್ಟು ರಾಹುತರು ಇರಲಿಲ್ಲ. ದೇವರ ವಿರುದ್ಧ ಬಂಡಾಯವೆದ್ದವರೊಳಗೆ ಇನ್ನು ಕೆಲವರು ಇದ್ದರು, **ಸ್ವತಂತ್ರರೂ ದಾಸರೂ ದೊಡ್ಡವರೂ ಚಿಕ್ಕವರೂ ಇವರೆಲ್ಲರು**. ಕರ್ತನ ಮುಂದೆ ಎಲ್ಲರೂ ಅಸಹಾಯಕರಾಗಿದ್ದರು.

ಆಲೋಚನೆ ಮಾಡಿ ನೋಡುವಾಗ, ಎದುರುನೋಡಲ್ಪಟ್ಟ ವಿವಿಧ ಭೋಜನಗಳ ಔತಣವು ಬಹುಶಃ ಆರಂಭದಲ್ಲಿ ಕಾಣಿಸುವಷ್ಟು ಶ್ರೇಷ್ಠವಾದದ್ದೇನೂ ಅನ್ನಿಸುವದಿಲ್ಲ. 17, 18 ವಚನಗಳಲ್ಲಿ ಸೋಲಿಸಲ್ಪಟ್ಟವರೊಳಗೆ ರಾಜರು, ಸಹಸ್ರಾಧಿಪತಿಗಳು ಪರಾಕ್ರಮಶಾಲಿಗಳು, ದೊಡ್ಡವರು ಸೇರಿರಬಹುದು, ಆದರೆ ಶವಗಳನ್ನು ತಿನ್ನುವ ಪಕ್ಷಿಗಳಿಗೆ ಐಶ್ವರ್ಯ ಅಥವಾ ಅಧಿಕಾರ ಅಥವಾ ಅಂತಸ್ತುಗಳ ಅರಿವು ಇರಲಿಲ್ಲ. ಸೇನಾನಾಯಕ ಆಗಿರಬಹುದು ಅಥವಾ ಸಾಮಾನ್ಯ ಸೈನಿಕನಾಗಿರಬಹುದು, ಒಂದು ಶ್ರೇಷ್ಠವಾದ ಕುದುರೆ ಸವಾರಿ ಮಾಡಿದ್ದ ಸೈನ್ಯಾಧಿಪತಿಯಾಗಿರಬಹುದು ಅಥವಾ ಆತನ ಪಕ್ಕದಲ್ಲಿ ಓಡುತ್ತಾ ಇರುತ್ತಿದ್ದ ಆತನ ಸೇವಕನಾಗಿರಬಹುದು, ಎಲ್ಲಾ ಮಾನವರ ಮಾಂಸವು ಭಕ್ಷಣೆ ಮಾಡುತ್ತಿದ್ದ ಪಕ್ಷಿಗಳಿಗೆ ಆಹಾರವಾಗಿದ್ದರು.[39] ಹೀಗೆ ಗರ್ವಿಷ್ಠರು ಹಾಗೂ ಸ್ವ-ಸಂತೃಪ್ತರು ತಗ್ಗಿಸಲ್ಪಡುವರು (ಜ್ಞಾನೋಕ್ತಿ 16:18). ಈ ದೃಶ್ಯದ ಒಂದು ಅವಮಾನಕರವಾದ ಅಂಶವೆಂದರೆ ಯುದ್ಧ ಭೂಮಿಯಲ್ಲಿ ಶವಗಳು

ಹೂಣಲ್ಪಡದೆ ಹಾಗೆಯೇ ಬಿದ್ದಿದ್ದವು ಎಂಬುದೆ (11:9ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ).

ಸ್ಪಷ್ಟವಾಗಿರುವ ಪ್ರಕಾರ, "ಕುರಿಯಾತನ ವಿವಾಹದ ಔತಣ" (ವ. 9) ಮತ್ತು "ದೇವರು ಮಾಡಿಸುವ ಮಹಾ ಭೋಜನ" (ವ. 17) ನಡುವೆ ಒಂದು ವಿರುದ್ಧ ಹೋಲಿಕೆ ಉದ್ದೇಶಿಸಲ್ಪಟ್ಟಿರುತ್ತದೆ.

> ಹತ್ತೊಂಭತ್ತನೆಯ ಅಧ್ಯಾಯವು ಎರಡು ತೀಕ್ಷ್ಣವಾಗಿ ವಿರುದ್ಧ ಹೋಲಿಕೆ ಮಾಡಲ್ಪಟ್ಟಿರುವ ದೃಶ್ಯಗಳನ್ನು ಚಿತ್ರಿಸುತ್ತದೆ, ಅವುಗಳನ್ನು ಒಂದೇ ರಟ್ಟರವೆಯ ಮೇಲೆ - ಎರಡು ಭೋಜನಗಳು - ಇದ್ದಾವೆಯೋ ಎಂಬಂತೆ ಚಿತ್ರ ಬಿಡಿಸಲಾಗಿತ್ತು... . ಮೊದಲನೆಯದ್ದು ಒಂದು ಪರಲೋಕದ ಬೆಳಕಿನಿಂದ ಆವರಿಸಲ್ಪಟ್ಟಿದೆ, ... ಮತ್ತೊಂದು ಕರಾಳ ಛಾಯೆಯಿಂದ ಆವರಿಸಲ್ಪಟ್ಟಿದೆ. ಒಂದು ಭೋಜನದಲ್ಲಿನ ಅಥಿತಿಗಳು ಶುಭ್ರವಾದ ಉಡುಪುಗಳನ್ನು ಧರಿಸಿರುವ ದೊಡ್ಡ ಜನರ ಗುಂಪು; ಇನ್ನೊಂದರಲ್ಲಿರುವ ಅಥಿತಿಗಳು ಕೊಳೆತ ಮಾಂಸ ತಿನ್ನುವ ಮೃಗಗಳು ಹಾಗೂ ಮಾಂಸಹಾರಿ ಪಕ್ಷಿಗಳು. ಒಂದು ಕಡೆಯಲ್ಲಿ ಸಂಗೀತವಿದೆ, ಪರಲೋಕದ ಗಾನವೃಂದವರು ಹಾಡುತ್ತಾ, ಹಲ್ಲೆಲೂಯಾ ಗೀತೆಗಳನ್ನು ಹಾಡುವರು ... ಮತ್ತೊಂದು ಕಡೆಯಲ್ಲಿ ಯಾವ ಸಂಗೀತವೂ ಇರುವದಿಲ್ಲ ಹಾಡುಗಳಿಲ್ಲ, ಕೇವಲ ಮೂಳೆಗಳನ್ನು ಜಗಿಯುವ ಕರುಂಕರುಂ [ಶಬ್ದವು] ಮಾತ್ರವೇ ಬರುತ್ತದೆ.[40]

ಒಬ್ಬರು ಆಕ್ಷೇಪಣೆಯನ್ನೆತ್ತಿ ಹೀಗೆ ಹೇಳಬಹುದು, "ಅದು ಹೇವರಿಕೆ ಹುಟ್ಟಿಸುವಂಥದ್ದು!" ಹೌದು - ಆದರೆ ನರಕದಷ್ಟು ಹೇವರಿಕೆ ಹುಟ್ಟಿಸುವಂಥದ್ದಂತೂ ಅಲ್ಲ. ಪವಿತ್ರಾತ್ಮನು ಭಯಹುಟ್ಟಿಸುವಂಥ ಚಿತ್ರಣವನ್ನು ಬಿಡಿಸುತ್ತಾನೆ, ಆದರೆ "ಯೆಹೋವನ ಭಯವೇ ಜ್ಞಾನಕ್ಕೆ ಮೂಲ" (ಜ್ಞಾನೋಕ್ತಿ 9:10) ಎಂಬುದನ್ನು ನೆನಪಿಟ್ಟುಕೊಳ್ಳಿರಿ. ಪ್ರತಿಯೊಬ್ಬ ವ್ಯಕ್ತಿಗೂ ಒಂದು ಆಯ್ಕೆ ಇರುತ್ತದೆ: ಆತನು ಯೇಸುವನ್ನು ಹಿಂಬಾಲಿಸಬಹುದು ಮತ್ತು ಕುರಿಯಾದಾತನ ವಿವಾಹದ ಔತಣಕ್ಕೆ ಆಮಂತ್ರಿಸಲ್ಪಡಬಲ್ಲನು, ಅಥವಾ ಆತನು ಕರ್ತನನ್ನು ವಿರೋಧಿಸಿ ದೇವರು ಮಾಡಿಸುವ ಮಹಾ ಭೋಜನದ ಖಾದ್ಯವಾಗಬಹುದು.

ಬರಲಿರುವ "ಯುದ್ಧ" ಫಲಿತವು ಸಂದೇಹವುಳ್ಳದ್ದಾಗಿರಲೇ ಇಲ್ಲ. ವೈರಿಯೊಂದಿಗೆ ಯುದ್ಧದಲ್ಲಿ ತೊಡಗುವ ಮುನ್ನವೇ ಶವಗಳನ್ನು ತಿನ್ನುವದಕ್ಕಾಗಿ ಪಕ್ಷಿಗಳಿಗೆ ಆಮಂತ್ರಣವನ್ನು ಕೊಡಲಾಗಿತ್ತು. ಯೇಸುವಿನ ಜಯವು ನಿಶ್ಚಿತವಾಗಿತ್ತು.

## ಮೃಗ ಹಾಗೂ ಸುಳ್ಳು ಪ್ರವಾದಿ ನಾಶವಾಗುತ್ತಾರೆ (19:19-21)

**19ತರುವಾಯ ಆ ಮೊದಲನೆಯ ಮೃಗವೂ ಭೂರಾಜರೂ ಅವರ ಸೈನ್ಯಗಳವರೂ ಆ ಕುದುರೆಯ ಮೇಲೆ ಕೂತಿದ್ದವನ ಮೇಲೆಯೂ ಆತನ ಸೈನ್ಯದ ಮೇಲೆಯೂ ಯುದ್ಧಮಾಡುವದಕ್ಕಾಗಿ ಕೂಡಿ ಬಂದಿರುವದನ್ನು ಕಂಡೆನು. 20ಆಗ ಮೃಗವು ಸೆರೆಸಿಕ್ಕಿತು; ಇದಲ್ಲದೆ ಮೃಗದ ಮುಂದೆ ಮಹತ್ಕಾರ್ಯಗಳನ್ನು ಮಾಡಿ ಮೃಗದ ಗುರುತು ಹಾಕಿಸಿಕೊಂಡವರನ್ನೂ ಅದರ ವಿಗ್ರಹಕ್ಕೆ ನಮಸ್ಕರಿಸಿದವರನ್ನೂ ಮರುಳುಗೊಳಿಸಿದ ಆ ಸುಳ್ಳುಪ್ರವಾದಿಯೂ ಅದರ ಜೊತೆಯಲ್ಲಿ ಸೆರೆಸಿಕ್ಕಿದನು. ಇವರಿಬ್ಬರೂ ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು; 21ಮಿಕ್ಕಾದವರು ಆ ಕುದುರೆಯ ಮೇಲೆ ಕೂತಿದ್ದವನ ಬಾಯಿಂದ ಬಂದ ಕತ್ತಿಯಿಂದ ಹತರಾದರು; ಮತ್ತು ಹಕ್ಕಿಗಳೆಲ್ಲಾ ಅವರ ಮಾಂಸವನ್ನು ಹೊಟ್ಟೆ ತುಂಬಾ ತಿಂದವು.**

**ವಚನ 19.** ಕೊನೆಗೂ, ನಾವು 19ನೇ ಅಧ್ಯಾಯದ ಪ್ರಾಥಮಿಕ ಉದ್ದೇಶದ ಕಡೆಗೆ

ಬಂದಿದ್ದೇವೆ: ಕರ್ತನ ವೈರಿಗಳಲ್ಲಿ ಇಬ್ಬರ ಬೀಳುವಿಕೆಯ ಚಿತ್ರಣ. ಯೋಹಾನನು ಹೀಗೆ ಬರೆದನು, **ತರುವಾಯ ಆ ಮೊದಲನೆಯ ಮೃಗವೂ ಭೂರಾಜರೂ ಅವರ ಸೈನ್ಯಗಳವರೂ ಆ ಕುದುರೆಯ ಮೇಲೆ ಕೂತಿದ್ದವನ ಮೇಲೆಯೂ ಆತನ ಸೈನ್ಯದ ಮೇಲೆಯೂ ಯುದ್ಧಮಾಡುವದಕ್ಕಾಗಿ ಕೂಡಿ ಬಂದಿರುವದನ್ನು ಕಂಡೆನು.** **ಮೃಗ** ಎಂಬುದು 13:1, 2 ವಚನಗಳಲ್ಲಿ ಪರಿಚಯಿಸಲ್ಪಟ್ಟ ಸಮುದ್ರದಿಂದ ಪ್ರಬಲ ಮೃಗವಾಗಿರುತ್ತದೆ (ನೋಡಿರಿ 13:4, 7, 8). ಮೃಗ ಮತ್ತು ಆತನ ಜೊತೆಗೆಲಸದವನು ಇಬ್ರೂ (ಭೂಮಿಯಿಂದ ಬಂದ ಮೃಗ/"ಸುಳ್ಳು ಪ್ರವಾದಿ"; 13:11–17; 16:13) ನಾಶಗೊಳಿಸಲ್ಪಡುವರು (19:20); ಆದರೆ ಮೃಗವು ಮಾತ್ರವೇ 19ನೇ ವಚನದಲ್ಲಿ ಪ್ರಸ್ತಾಪಿಸಲ್ಪಟ್ಟಿದ್ದಾನೆ, ಯಾಕೆಂದರೆ ಆತನು ನಾಯಕನು. ಸುಳ್ಳು ಪ್ರವಾದಿಯ ಕೆಲಸವು ಆತನಿಗೋಸ್ಕರ ಹಿಂಬಾಲಕರನ್ನು ನೇಮಿಸಿಕೊಳ್ಳುವದಷ್ಟೆ (13:12).

ಗ್ರೀಕ್ ವಾಕ್ಯವು ಅಕ್ಷರಶಃ ಮೃಗ ಮತ್ತು ಆತನ ಸೈನ್ಯಗಳು "ಕುದುರೆಯ ಮೇಲೆ ಕೂತಿದ್ದವನ [ಆತನ] ಮೇಲೆ *ಯುದ್ಧ* ಮಾಡುವದಕ್ಕೆ ಕೂಡಿ ಬಂದವು" ಎಂದಿರುತ್ತದೆ (ಒತ್ತಿ ಹೇಳಿದ್ದು ನನ್ನದು). ಇದು "ಅರ್ಮಗೆದ್ದೋನ್ ಯುದ್ಧ" ಎಂದು ಜನಪ್ರಿಯವಾಗಿ ಪರಿಚಿತವಿರುವ ಯುದ್ಧವಾಗಿದೆ, ಅದರ ಕುರಿತು 16ನೇ ಅಧ್ಯಾಯದಲ್ಲಿ ಚರ್ಚಿಸಲಾಯಿತು (16:16ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಮುಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಲ್ಪಡಲಿರುವ ಕಾದಾಟವು ಇದೇ ಆಗಿರುತ್ತದೆ (20:8). 19 ಹಾಗೂ 20 ಅಧ್ಯಾಯಗಳಲ್ಲಿನ ಯುದ್ಧಗಳು ಒಂದೇ ಆಗಿದೆ ಎಂಬುದಕ್ಕೆ ಭಾಗಶಃ ಪುರಾವೆಯಾಗಿ, 19:17, 18ರಲ್ಲಿನ "ದೇವರ ಮಾಡಿರುವ ಮಹಾ ಭೋಜನ"ದ ಮೂಲಮಾದರಿಯು ಯೆಹೆಜ್ಕೇಲ 38 ಹಾಗೂ 39ರಲ್ಲಿ ಸಿಕ್ಕುತ್ತದೆಂಬುದನ್ನು ಗಮನಿಸಿರಿ – 20:8ನೇ ವಚನಕ್ಕಾಗಿ "ಗೋಗ್ ಮತ್ತು ಮಾಗೋಗ್" ಹೆಸರುಗಳನ್ನು ಒದಗಿಸುವ ಅದೇ ಅಧ್ಯಾಯಗಳೇ ಆಗಿವೆ.

16ನೇ ಅಧ್ಯಾಯದಲ್ಲಿ ಒತ್ತಿ ಹೇಳಿದ ಪ್ರಕಾರ, ಗಮನಿಸಬೇಕಾದದ್ದೇನೆಂದರೆ, "ಒಂದು ಮುಖಾಮುಖಿಗಾಗಿ ವೇದಿಕೆಯು ಸಿದ್ಧಗೊಳಿಸಲ್ಪಟ್ಟಿದೆಯಾದರೂ … *ಅಲ್ಲಿ ಯುದ್ಧವೇ ಸಂಭವಿಸುವದಿಲ್ಲ.*"[41] Donald Guthrieನು ಗಮನಕ್ಕೆ ತರುವದೇನೆಂದರೆ, "ಯಾವದೇ ಯುದ್ಧದ ವರ್ಣನೆಯು ಇರುವದಿಲ್ಲ… . ಯುದ್ಧವೀರನಾದ ಅರಸನು ಮಿಲಿಟರಿ ಶಕ್ತಿಯಿಂದ ಗೆಲ್ಲುವದಿಲ್ಲ, ಆದರೆ ಆತನ ಬಾಯೊಳಗಿಂದ ಹೊರಡುವ ಕತ್ತಿಯಿಂದಲೇ ಆಗಿದೆ. ಆತನ ವಿನಾಶಕಾರಿ ಆಜ್ಞೆಯೊಂದೇ ಸಾಕಾಗಿರುತ್ತದೆ."[42] Coffmanನು ಹೀಗೆ ಬರೆಯುತ್ತಾನೆ,

> ಯಾವದೇ ವಿಧವಾದ ಯುದ್ಧವೂ ಸಂಭವಿಸುವದಿಲ್ಲ. ಅರ್ಮಗೆದ್ದೋನ್ ಎಂದು ಕರೆಯಲ್ಪಡುವ ಯುದ್ಧವು, ಸಾಮಾನ್ಯವಾಗಿ ಮನುಷ್ಯನ ಕಲ್ಪನಾಶಕ್ತಿಯಿಂದ ಕಲ್ಪಿಸಿಕೊಳ್ಳಲ್ಪಟ್ಟದ್ದೇ, ಹೊರತು ಮತ್ತೇನೂ ಅಲ್ಲ. ಕ್ರಿಸ್ತನಿಗೆ ಯಾವ ಸೈನ್ಯವೂ ಅಗತ್ಯವಿಲ್ಲ, ಅದು ದೇವದೂತರದ್ದಾಗಿರಬಹುದು, ಅಥವಾ ಬೇರೆ ಯಾವದೇ ಆಗಿರಲಿ. ಸೂರ್ಯನನ್ನು ಅಂತರೀಕ್ಷದಲ್ಲಿ ಬಿಸಾಡಿದ ಆತನ ಮಾತುಗಳೇ ಸಮಯ ಬಂದಾಗ ಆತನ ಚಿತ್ತವನ್ನು ಜಾರಿಗೆ ತರಲು ಸಾಕಾಗಿರುತ್ತವೆ.[43]

**ವಚನ 20.** ಬಹಳಷ್ಟು ತಂಟೆಕೋರರಂತೆಯೇ, ಮೃಗವು ತನಗಿಂತ ಶಾರೀರಿಕವಾಗಿ ಬಲಹೀನರಾಗಿರುವವರನ್ನು ದಬಾಯಿಸುವ ವೇಳೆ ಬಲಿಷ್ಠವೆಂಬಂತೆ ಕಾಣಿಸಬಹುದು (13:7, 15), ಆದರೆ ತನಗಿಂಥ ಶ್ರೇಷ್ಠವಾದ ಶಕ್ತಿಯನ್ನು ಎದುರಿಸುವಾಗ ಕುಸಿದು ಬೀಳುವನು. ಆತನ ದುರಹಂಕಾರ ಹಾಗೂ ದೇವದೂಷಣಾತ್ಮಕ ಹೇಳಿಕೆಗಳು (13:5, 6) ಕುರಿಯಾದಾತನ ಶಕ್ತಿಯ ಮುಂದೆ ಕೇವಲ ಶೂನ್ಯವಾಗಿದ್ದವು.

**ಆಗ ಮೃಗವು ಸೆರೆಸಿಕ್ಕಿತು; ಇದಲ್ಲದೆ ಮೃಗದ ಮುಂದೆ ಮಹತ್ಕಾರ್ಯಗಳನ್ನು ಮಾಡಿ ಮೃಗದ ಗುರುತು ಹಾಕಿಸಿಕೊಂಡವರನ್ನೂ ಅದರ ವಿಗ್ರಹಕ್ಕೆ ನಮಸ್ಕರಿಸಿದವರನ್ನೂ ಮರುಳುಗೊಳಿಸಿದ ಆ ಸುಳ್ಳುಪ್ರವಾದಿಯೂ ಅದರ ಜೊತೆಯಲ್ಲಿ ಸೆರೆಸಿಕ್ಕಿದನು. ಇವರಿಬ್ಬರೂ ಜೀವಸಹಿತವಾಗಿ ಗಂಧಕದಿಂದ ಉರಿಯುವ ಬೆಂಕಿಯ ಕೆರೆಯಲ್ಲಿ ಹಾಕಲ್ಪಟ್ಟರು.**

ಸುಳ್ಳು ಪ್ರವಾದಿಯ ಬಣ್ಣನೆಯನ್ನು 13:11-17ರಲ್ಲಿನ ಭೂಮಿಯಿಂದ ಬಂದ ಮೃಗದೊಂದಿಗೆ ಹೋಲಿಕೆ ಮಾಡಿರಿ.

ಈ ಉಲ್ಲೇಖನವು ಮೊದಲ ಬಾರಿಗೆ **ಗಂಧಕದಿಂದ ಉರಿಯುವ ... ಕೆರೆ** ಕುರಿತು ಪ್ರಸ್ತಾಪಿಸುತ್ತದೆ, ಆದರೆ ಇದೇ ಕೊನೆಯದ್ದು ಆಗಿರುವದಿಲ್ಲ (20:10, 14, 15; 21:8). ಬೆಂಕಿ/ಉರಿಯುವಿಕೆ (17:16; 18:8, 9, 18) ಮತ್ತು ಗಂಧಕ (9:17) ಕುರಿತು ಈ ಮುಂಚೆ ಪ್ರಸ್ತಾಪಿಸಲ್ಪಟ್ಟಿರುತ್ತದೆ, ಆದರೆ "ಗಂಧಕದಿಂದ ಉರಿಯುವ ಬೆಂಕಿಯ ಕೆರೆ" ಕುರಿತು ಇರಲಿಲ್ಲ (20:10, 14, 15ರ ಮೇಲಿನ ವ್ಯಾಖ್ಯೆಗಳನ್ನು ನೋಡಿರಿ). ಪ್ರಕಟನೆ ಪುಸ್ತಕವು "ನರಕ" ಎಂಬುದಕ್ಕಿರುವ ಪದವಾದ γέεννα (*gehenna*) ಎಂಬ ಪದವನ್ನ ಬಳಸುವದಿಲ್ಲ. (KJVಯು ಪ್ರಕಟನೆ ಪುಸ್ತಕದಲ್ಲಿ ಗ್ರೀಕ್ ಪದವಾದ ᾅδης [*hadēs*] ಎಂಬುದನ್ನು ಅನುವಾದಿಸುವದಕ್ಕೆ ನಾಲ್ಕು ಸಾರಿ "ನರಕ" ಎಂಬ ಪದವನ್ನು ಬಳಸುತ್ತದೆ; ಆದರೆ *hadēs* ಎಂಬುದು ಸತ್ತವರು ಇರುವಂಥ ಅಗೋಚರವಾದ ಜಗತ್ತನ್ನು ಸೂಚಿಸುತ್ತದೆ, ಹೊರತು ನಿತ್ಯವಾದ ದಂಡನೆಯ ಸ್ಥಳವನ್ನಲ್ಲ.) ಹಾಗಿದ್ದರೂ, ಪವಿತ್ರಾತ್ಮನು ದುಷ್ಟರಿಗೆ ಸಿಕ್ಕುವ ಅಂತಿಮವಾದ ನಿವಾಸವನ್ನು ಮನಸ್ಸಿನಲ್ಲಿಟ್ಟುಕೊಂಡಿದ್ದನು ಎಂಬುದು ಸ್ಪಷ್ಟವಾಗಿರುತ್ತದೆ. "ನಿತ್ಯವಾದ ಬೆಂಕಿ" "ಪಿಶಾಚನಿಗೂ ಅವನ ದೂತರಿಗೂ ಸಿದ್ಧಮಾಡಿರುವ" ಸ್ಥಳವಾಗಿದೆ (ಮತ್ತಾಯ 25:41), ಮತ್ತು ಸೈತಾನನನ್ನು ಹಿಂಬಾಲಿಸುವದರಲ್ಲೇ ಅಚಲವಾಗಿ ಮುಂದುವರೆಯುವವರೆಲ್ಲರೂ ಕೊನೆಗೆ ಅಲ್ಲಿಗೆ ಹೋಗುವರು.

ಬರೆಯುವ ವೇಳೆಯಲ್ಲಿ, ಇಲ್ಲಿ ಬಳಸಲಾಗಿರುವ ಸಂಕೇತಗಳು ರೋಮನ್ ಸಾಮ್ರಾಜ್ಯದ, ಅದರ ಮಧ್ಯವರ್ತಿ ಸಂಸ್ಥೆಗಳ, ಮತ್ತು ಅದರ ಮಿತ್ರರ ಅಂತಿಮ ಬೀಳುವಿಕೆಯನ್ನು ಮುಂತಿಳಿಸಿದವು. ಮಹಾ ಬಾಬೆಲಿನ ಬೀಳುವಿಕೆಯು 17 ಮತ್ತು 18 ಅಧ್ಯಾಯಗಳಲ್ಲಿ ಕಂಡು ಬರುತ್ತದೆ. ತಲೆಯು (ರೋಮ್ ನಗರಿ) ನಾಶಗೊಳಿಸಲ್ಪಟ್ಟರೆ, ದೇಹವು (ರೋಮನ್ ಸಾಮ್ರಾಜ್ಯ) ಹೆಚ್ಚು ಹೊತ್ತು ಬದುಕುಳಿಯಲು ಸಾಧ್ಯವಿರಲಿಲ್ಲ. ಹೇಗೂ, ಎಲ್ಲರೂ ಒಪ್ಪಿಕೊಳ್ಳುವದೇನೆಂದರೆ, "ದೇವರ ಹಾಗೂ ಆತನ ರಾಜ್ಯದ ವಿರುದ್ಧ ಎಂದಾದರೂ ಎದ್ದೇಳುವ ಅಂತಹ *ಎಲ್ಲಾ* ಶಕ್ತಿಗಳ ಅಂತ್ಯಾವಸ್ಥೆಯನ್ನು"[44] ಸಹ ಈ ಚಿತ್ರವು ತೋರ್ಪಡಿಸುತ್ತದೆ. ಒಂದು ದಿನವು ಬರುವಾಗ "ದುಷ್ಟರು ಅಂದರೆ ದೇವರನ್ನು ಅಲಕ್ಷ್ಯಮಾಡುವ ಜನಾಂಗಗಳವರೆಲ್ಲಾ ಪಾತಾಳಕ್ಕೆ ಇಳಿದುಹೋಗುವರು" (ಕೀರ್ತನೆ 9:17).

ವಾಕ್ಯಭಾಗದ ಅತ್ಯಂಥ ಮನಸೆಳೆಯುವ ಅಂಶವು ಏನೆಂದರೆ ಇಬ್ಬರು ವೈರಿಗಳು ತೊಲಗಿಸಲ್ಪಡುವದು ಎಷ್ಟು ಹಠಾತ್ತಾಗಿ ಸಂಭವಿಸುತ್ತದೆಂಬುದೇ. ಥಟ್ಟನೆ ಆಗುವಿಕೆಯು ಸಂಕ್ಷಿಪ್ತವಾಗಿ ಬರೆದಿರುವಿಕೆಯಿಂದ ಪ್ರತಿಫಲಗೊಳ್ಳುತ್ತದೆ: "ಮೃಗ ಹಾಗೂ ಸುಳ್ಳು ಪ್ರವಾದಿಗಳಿಬ್ಬರು ... ಹೇಗೆ ಸೆರೆ ಹಿಡಿಯಲ್ಪಟ್ಟು ಸಜೀವವಾಗಿ ಗಂಧಕದಿಂದ ಉರಿಯುವ ಕೆರೆಯೊಳಗೆ ಎಸೆಯಲ್ಪಟ್ಟರೆಂಬದನ್ನು ಹೇಳುವದಕ್ಕೆ ಒಂದೇ ವಚನವು ಸಾಕಾಗಿತ್ತು."[45] ಜಯವು ಅಷ್ಟೊಂದು ಸುಲಭವಾಗಿ ಗಳಿಸಲ್ಪಟ್ಟದ್ದಾಗಿ ತೋರುವದು ಅತ್ಯಂಥ ಪ್ರಬಲ ವಿರೋಧಿಯು ಸಹ ಕರ್ತನಿಗೆ ಹೋಲಿಕೆ ಮಾಡುವಾಗ ಅಸಹಾಯಕ ಕೂಸಿನಂತೆಯೇ ಎಂಬುದನ್ನು ಜ್ಞಾಪಿಸುವದಾಗಿರುತ್ತದೆ. ಎರಡು ಮೃಗಗಳಿಗೆ ಅವರ "ಚಿಕ್ಕ ದಿನ" ಕೊಡಲ್ಪಟ್ಟಿತ್ತು,

ಆದರೆ ಅಲ್ಲಿ ಅವರನ್ನು ಅವರಿಗೆ ತಕ್ಕದಾದ ಸ್ಥಳದಲ್ಲಿ ಇಡಲ್ಪಡುವದನ್ನು ಕಾಣುತ್ತೇವೆ.[46]

ಎರಡು ಮೃಗಗಳು ಇಬ್ಬರು ನಿರ್ದಿಷ್ಟವಾದ ವ್ಯಕ್ತಿಗಳಾಗಿದ್ದಾರೆಂದು ಉಪದೇಶಿಸುವವರು ಈ **ಜೀವಸಹಿತವಾಗಿ ಹಾಕಲ್ಪಟ್ಟರು** ಎಂಬ ಪದಗುಚ್ಛವನ್ನು ಬಳಸಿಕೊಂಡು ವಾಕ್ಯಭಾಗವು ಇಬ್ಬರು ವ್ಯಕ್ತಿಗಳ ಕುರಿತು ಮಾತಾಡುತ್ತಿದೆ ಎಂದು ಸಾಭಿತುಪಡಿಸುವದಕ್ಕೆ ಪ್ರಯತ್ನಿಸುತ್ತಾರೆ. ಹೇಗೂ, ಸಾಂಕೇತಿಕ ಅಂತ್ಯಕಾಲಿಕ ಭಾಷೆಯ ಸನ್ನಿವೇಶದಲ್ಲಿ ನೋಡುವದಾದರೆ, ಪದಗುಚ್ಛದ ಸರಳವಾದ ಅರ್ಥವು ಅವರ ನಾಶನದ ಸಮಯದ ತನಕ, ಎರಡು ಮೃಗಗಳು ಸಕ್ರಿಯವಾಗಿ ಕರ್ತನನ್ನು ವಿರೋಧಿಸುತ್ತಿದ್ದವು ಎಂದಷ್ಟೇ ಆಗಿರುತ್ತದೆ.

**ವಚನ 21.** ಅಧ್ಯಾಯದ ಅಂತಿಮ ವಚನವು ಎರಡು ಉದ್ದೇಶಗಳನ್ನು ಸಾಧಿಸುತ್ತದೆ: ಅದು ಮೃಗ ಹಾಗೂ ಸುಳ್ಳು ಪ್ರವಾದಿಗಳಿಂದ ವಂಚನೆಗೊಳಗಾಗಿದ್ದವರ ಅಂತ್ಯಸ್ಥಿತಿಯ ಕುರಿತು ತಿಳಿಸುತ್ತದೆ, ಮತ್ತು ದೇವದೂತನು ಪಕ್ಷಿಗಳಿಗೆ ಮಾಡಿದ್ದ ವಾಗ್ದಾನವನ್ನು ಅದು ನೆರವೇರಿಸುತ್ತದೆ: **ಮಿಕ್ಕಾದವರು ಆ ಕುದುರೆಯ ಮೇಲೆ ಕೂತಿದ್ದವನ ಬಾಯಿಂದ ಬಂದ ಕತ್ತಿಯಿಂದ ಹತರಾದರು; ಮತ್ತು ಹಕ್ಕಿಗಳೆಲ್ಲಾ ಅವರ ಮಾಂಸವನ್ನು ಹೊಟ್ಟೆ ತುಂಬಾ ತಿಂದವು.** ಕರ್ತನ ವೈರಿಗಳು "ಅರ್ಮಗೆದ್ದೋನನ್ನು ಒಂದು ಯುದ್ಧವಾಗಿ ನೋಡಬಹುದು, ಆದರೆ ದೇವರಿಗಾದರೋ, ಅದು ಕೇವಲ ಆಕಾಶದ ಪಕ್ಷಿಗಳಿಗಾಗಿ ಏರ್ಪಡಿಸಿದ್ದ ಒಂದು 'ಭೋಜನ' ಅಷ್ಟೆ ಆಗಿತ್ತು."[47] ಹೀಗಿರುವದರಿಂದ "ದೇವರ ವಿರುದ್ಧವಾದ ಬಂಡಾಯದ ಅರ್ಥಹೀನತೆ ಹಾಗೂ ವ್ಯರ್ಥತ್ವ"[48] ಕುರಿತು ಒತ್ತಿ ಹೇಳಲ್ಪಟ್ಟಿರುತ್ತದೆ. ಒಬ್ಬರು ಹೀಗೆ ಕೇಳಬಹುದು, "ಇವರನ್ನು ಸಹ ಏಕೆ ಬೆಂಕಿಯ ಕೆರೆಯಲ್ಲಿ ಎಸೆಯಲಾಗಲಿಲ್ಲ?" ಅವರು ಎಸೆಯಲ್ಪಡುವರು (20:15), ಆದರೆ ಸೈತಾನನು ಕೆರೆಯಲ್ಲಿ ಎಸೆಯಲ್ಪಡುವ ಪರಾಕಾಷ್ಠೆಯ ಕ್ಷಣದ ವರೆಗೆ ಮಾತ್ರ ಹಾಕಲ್ಪಡುವದಿಲ್ಲ (20:10).

## ಅನ್ವಯಿಸುವಿಕೆ

### ನಾಲ್ಕು ವಿಧದ ಹಲ್ಲೆಲೂಯ (19:1-6)

19:1-6ರ ಮೇಲೆ ಎರಡು-ಅಂಶಗಳುಳ್ಳ ಒಂದು ಪಾಠವನ್ನು ಅಭಿವೃದ್ಧಿಪಡಿಸಬಹುದು, ಇದು ನಾಲ್ಕು ಹಲ್ಲೆಲೂಯಾಗಳನ್ನೊಳಗೊಂಡ ವಾಕ್ಯವಾಗಿದೆ. ಮೊದಲನೆಯ ಅಂಶದ ಕೆಳಗೆ, ನಾವು ಆತನಿಗೆ ಸ್ತೋತ್ರ ಮಾಡಬಹುದಾದಂಥ ಯಾವ ಕಾರ್ಯಗಳನ್ನು ದೇವರು ಮಾಡಿದ್ದಾನೋ ಅವುಗಳ ಚರ್ಚೆಯೊಂದಿಗೆ ಆರಂಭಿಸಿರಿ. ಬಳಿಕ ಈ ವಾಕ್ಯಭಾಗವು ಆತನ *ನ್ಯಾಯವಿಚಾರಣೆ* ನಿಮಿತ್ತವಾಗಿ ಆತನನ್ನು ಸ್ತುತಿಸುತ್ತದೆ ಎಂಬುದನ್ನು ಗಮನಿಸಿರಿ, ಮತ್ತು ನಾವು ಆತನನ್ನು ಅದಕ್ಕಾಗಿ ಏಕೆ ಸ್ತುತಿಸಬೇಕೆಂಬುದಕ್ಕೆ ಕಾರಣಗಳನ್ನು ಚರ್ಚಿಸಿರಿ. ಎರಡನೆಯ ಮುಖ್ಯ ಅಂಶದ ಕೆಳಗೆ, ಮೊದಲು ಸಾಮಾನ್ಯವಾದ ವಿಧದಲ್ಲಿ ದೇವರಿಗಿರುವ ಕೆಲವೊಂದು ಸ್ತೋತ್ರಾರ್ಹವಾದ ಗುಣಸ್ವಭಾವಗಳ ಕುರಿತು ಚರ್ಚೆ ಮಾಡಿರಿ. ನಂತರ ವಾಕ್ಯಭಾಗದ ಮೇಲೆ ಮುಖ್ಯ ಗಮನ ಕೊಡಿರಿ, ಆತನ ಸರ್ವಶಕ್ತತೆ ಮತ್ತು ಆಳ್ವಿಕೆಗಳು ಆತನ ಗುಣಸ್ವಭಾವದಲ್ಲಿ ಏಕೆ ತಿರುಳಾತ್ಮಕ ಭಾಗವಾಗಿವೆ ಎಂಬದನ್ನು ವಿವರಿಸಿರಿ. ಈ ಪಾಠಕ್ಕೆ ಸಂಬಂಧ ಪಟ್ಟಂತೆ, ನೀವು ಸಂಗೀತ ಪುಸ್ತಕಗಳಲ್ಲಿ ಸಿಕ್ಕುವಂಥ ಕೆಲವೊಂದು ಶ್ರೇಷ್ಠವಾದ "ಹಲ್ಲೆಲೂಯಾ" ಹಾಡುಗಳನ್ನು ಹಾಡುವದಕ್ಕೆ ಬಯಸಬಹುದು.

## ಮೃಗದಿಂದ ತಪ್ಪಿಸಿ ಕಾಪಾಡಲ್ಪಟ್ಟದ್ದು (19:1-6)

ಒಂದು ಕತ್ತಲೆಯ ಕಾಡಿನೊಳಗೆ ಹುಚ್ಚು ಹಿಡಿದ, ಗಾಯಗೊಂಡಿರುವ ಪ್ರಾಣಿಯಿಂದ ಬೆನ್ನಟ್ಟಲ್ಪಟ್ಟಿರುವದನ್ನು ಊಹಿಸಿಕೊಳ್ಳಿರಿ. ನೀವು ಕತ್ತಲೆಯನ್ನು ಹಾಯ್ದು ವೇಗವಾಗಿ ಓಡುವಿರಿ, ನಿಮ್ಮ ಹೃದಯವು ಡವಡವ ಹೊಡೆದುಕೊಳ್ಳುತ್ತಿದೆ, ಮರದ ಕೊಂಬೆಗಳು ನಿಮ್ಮ ಮುಖಕ್ಕೆ ಬಡಿಯುತ್ತಿವೆ. ಅಷ್ಟೊತ್ತಿನಿಂದಲೂ, ರಕ್ತದಾಹದ ಪ್ರಾಣಿಯು ನಿಮಗೆ ಸಮೀಪವಾಗುತ್ತಲೇ ಬರುವದನ್ನು ನೀವು ಕೇಳಿಸಿಕೊಳ್ಳಬಹುದಾಗಿರುತ್ತದೆ. ನೀವು ಒಂದು ಬಿದ್ದಿರುವ ಕೊಂಬೆಗೆ ಎಡವಿ ಉರುಳುತ್ತಾ ನೆಲಕ್ಕೆ ಬೀಳುವಿರಿ. ನೀವು ಮೃಗದ ಕಣ್ಣುಗಳು ಕತ್ತಲೆಯಲ್ಲಿ ಹೊಳೆಯುತ್ತಿರುವದನ್ನು ಕಾಣಬಹುದು. ಅದು ಮುದುರಿಕೊಂಡು ಜಿಗಿಯುತ್ತದೆ. ನೀವು ಕಣ್ಣುಗಳನ್ನು ಮುಚ್ಚಿಕೊಂಡು ಅದರ ಭಯಂಕರ ಪಂಜಗಳು ನಿಮ್ಮ ಮಾಂಸವನ್ನು ಕೀಳುವದನ್ನು ಕಾಯುತ್ತಿರುವಿರಿ. ಹಠಾತ್ತನೆ, ಕಾಡಿನೊಳಗಿಂದ ಒಂದು ಬಂದೂಕು ಗುಂಡಿನ ಶಬ್ದವನ್ನು ಮಾಡುತ್ತದೆ - ಮತ್ತು ಮೃಗವು ನಿಮ್ಮ ಪಾದದ ಬಳಿ ಸತ್ತದ್ದಾಗಿ ಬೀಳುತ್ತದೆ. ಇದು ನಿಮಗೆ ಸಂಭವಿಸಿದ್ದಾದರೆ, ನೀವು ಸಂತೋಷ ಪಡುವದಿಲ್ಲವೋ? ನೀವು ನಿಮ್ಮನ್ನು ಕಾಪಾಡುವದಕ್ಕೆ ಬಂದಾತನ ಪ್ರಶಂಸೆಯನ್ನು ಸಹ ಮಾಡುವದಿಲ್ಲವೋ?

## ಕರ್ತನು ಆಳ್ವಿಕೆ ಮಾಡುತ್ತಾನೆ (19:6)

ಮೊದಲ ಶತಮಾನದಲ್ಲಿನ ಕ್ರೈಸ್ತರಿಗೆ ದೇವರು ಆಳ್ವಿಕೆ ಮಾಡುತ್ತಾನೆಂಬುದು ನೆನಪಿಸಲ್ಪಡುವ ಅಗತ್ಯವಿತ್ತು. ನಮಗೂ ಅದು ಅಗತ್ಯವಿದೆ. ಏನೇ ಸಂಭವಿಸಿದರೂ ಸರಿಯೇ, ಕ್ರೈಸ್ತರು ಯಾವಾಗಲೂ "ದೇವರು ಆಳ್ವಿಕೆ ಮಾಡುತ್ತಾನೆ" ಎಂದು ಕೂಗಬಹುದು! ಕೆಲವು ಸಾರಿ ಜನರು ಹೀಗೆ ಚಕಿತಗೊಳ್ಳುತ್ತಾರೆ, "ದೇವರು ಆಳ್ವಿಕೆ ಮಾಡುವದಾದರೆ, ಆಕೆ ಪ್ರಪಂಚದಲ್ಲಿ ಇಷ್ಟೊಂದು ಸಮಸ್ಯೆಗಳಿವೆ?" Clovis Chappellನು ಅಭಿಪ್ರಾಯ ಪಟ್ಟದ್ದೇನೆಂದರೆ, "ಆಳ್ವಿಕೆಯು ಒಂದು ವಿಧದಲ್ಲಿ ... ಮನುಷ್ಯನ ಸ್ವಾತಂತ್ರದೊಂದಿಗೆ ಸಾಮಂಜಸ್ಯತೆಯನ್ನು ಹೊಂದಿರುತ್ತದೆ"[49]: (1) ಆತನು ಆಳ್ವಿಕೆ ಮಾಡುತ್ತಾನೆ, ಅದರಲ್ಲಿ ನಾವು ಪಾಪ ಮಾಡುವದಕ್ಕೆ ಸ್ವತಂತ್ರರಾಗಿದ್ದೇವಾದರೂ, ನಮ್ಮ ಪಾಪದ ದಂಡನೆಯನ್ನು ಹೊಂದದೆ ತಪ್ಪಿಸಿಕೊಳ್ಳುವದಕ್ಕೆ ಸ್ವತಂತ್ರರಲ್ಲ. (2) ಆತನು ಆಳ್ವಿಕೆ ಮಾಡುತ್ತಾನೆ, ಅದರಲ್ಲಿ ಆತನು ಕೆಟ್ಟದ್ದನ್ನು ತಡೆಯುವದಿಲ್ಲವಾದರೂ, ಆತನು ಅದರಿಂದ ಎಂದಿಗೂ ಸೋಲಿಸಲ್ಪಡುವದಿಲ್ಲ. (3) ಆತನು ಆಳ್ವಿಕೆ ಮಾಡುತ್ತಾನೆ, ಅದರಲ್ಲಿ ಆತನನ್ನು ಪ್ರೀತಿಸಿ ಆತನಿಗೆ ವಿಧೇಯರಾಗುವವರ ಪಾಲಿಗಾದರೋ, ಪ್ರತಿಯೊಂದು ಒಳ್ಳೇದು ಇನ್ನಷ್ಟು ಅಧಿಕ ಒಳ್ಳೇದಾಗುತ್ತದೆ ಮತ್ತು ಪ್ರತಿಯೊಂದು ನಷ್ಟವು ಒಂದು ಲಾಭವಾಗಿ ಮಾರ್ಪಡುತ್ತದೆ. (4) ಆತನು ಆಳ್ವಿಕೆ ಮಾಡುತ್ತಾನೆ, ಅದರಲ್ಲಿ ಅಂತ್ಯದಲ್ಲಿ "ಪ್ರತಿಯೊಂದು ತಪ್ಪಿಗೂ ಅವಿಧೇಯತ್ವಕ್ಕೂ ನ್ಯಾಯ ವಾದ ಪ್ರತಿಫಲ [ಹೊಂದುವದು]" (ಇಬ್ರಿಯ 2:2; KJV).

ಅಮೆರಿಕದ ಅಧ್ಯಕ್ಷನಾದ Abraham Lincolnನು 1865ರಲ್ಲಿ ಹತ್ಯೆಗೈಯಲ್ಪಟ್ಟ ವೇಳೆ, ಅನೇಕರು ಹೀಗೆ ಹೇಳಿದರು, "Lincolnನು ಮರಣಿಸಿದನು, ಮತ್ತು ನಿರೀಕ್ಷೆಯೇ ಹೊರಟು ಹೋಯಿತು!" ಸುವಾರ್ತೆಯ ಬೋಧಕನು ಹಾಗೂ ನಾಗರೀಕ ಯುದ್ಧದಲ್ಲಿ ಸೇನಾನಾಯಕನಾಗಿದ್ದ James A. Garfieldನು, ಆ ಸಂದರ್ಭದಲ್ಲಿ New York ಪಟ್ಟಣದಲ್ಲಿದ್ದನು. ಸೆಂಟ್ರಲ್ ಪಾರ್ಕಿನಲ್ಲಿ ಶೋಕ ಆಚರಿಸುತ್ತಿದ್ದ ಜನರ ಒಂದು ಗುಂಪಿನ ಮುಂದೆ ನಿಂತವನಾಗಿ, ಆತನು ಅಮೆರಿಕಕ್ಕೆ ಆಗಿದ್ದ ನಷ್ಟವನ್ನು ಒಪ್ಪಿಕೊಂಡನು, ಆದರೆ ಬಳಿಕ ಆತನು ಹೀಗೆ ಹೇಳಿದನು, "ಸರ್ವಶಕ್ತ ಕರ್ತನು ಈಗಲೂ ಆಳ್ವಿಕೆ ಮಾಡುತ್ತಾನೆಂಬುದನ್ನು

ನೆನಪಿಟ್ಟುಕೊಳ್ಳಿರಿ!"[50] ದಿನಗಳು ಒಳ್ಳೆಯವುಗಳಾಗಿದ್ದರೂ ಸರಿಯೇ ಅಥವಾ ಅಷ್ಟೊಂದು ಒಳ್ಳೆಯವುಗಳಾಗಿಲ್ಲದಿದ್ದರೂ ಸರಿಯೇ, ಆ ಸತ್ಯವನ್ನು ಎಂದಿಗೂ ಮರೆಯದಿರೋಣ.

**"ಹಲ್ಲೆಲೂಯಾ ಪಲ್ಲವಿ" (19:6)**

> ಹಲ್ಲೆಲೂಯಾ! ಹಲ್ಲೆಲೂಯಾ!
> ಸರ್ವಶಕ್ತನಾಗಿರುವ ದೇವರಾದ ಕರ್ತನು ಆಳುತ್ತಾನೆ.
> ......................
> ಆತನು ಸದಾಕಾಲಕ್ಕೂ, ಸದಾಕಾಲಕ್ಕೂ ಮತ್ತು ಎಂದೆಂದಿಗೂ ಆಳುವನು,
> ರಾಜಾಧಿರಾಜನು ಕರ್ತಾಧಿಕರ್ತನು!
> ರಾಜಾಧಿರಾಜನು ಕರ್ತಾಧಿಕರ್ತನು!
> ಮತ್ತು ಆತನು ಸದಾಕಾಲಕ್ಕೂ ಮತ್ತು ಎಂದೆಂದಿಗೂ
> ಯುಗಯುಗಾಂತರಗಳಲ್ಲಿಯೂ ಆಳ್ವಿಕೆ ಮಾಡುವನು.
> ಹಲ್ಲೆಲೂಯಾ! ...[51]

Handelನ *Messiah* ಗೀತೆಯು ಮಾರ್ಚ್ 23, 1743ರಂದು London ನಗರದಲ್ಲಿ ಪ್ರದರ್ಶನ ಮಾಡಲ್ಪಟ್ಟಾಗ, ಇಂಗ್ಲೆಂಡಿನ ರಾಜನು ಅಲ್ಲಿ ಹಾಜರಿದ್ದನು, "ಯಾಕೆಂದರೆ ಸರ್ವಶಕ್ತನಾಗಿರುವ ದೇವರಾದ ಕರ್ತನು ಆಳುತ್ತಾನೆ" ಎಂಬ ಪಲ್ಲವಿ ಹಾಡಲ್ಪಡುವಾಗ ಶ್ರೋತೃಗಳು ಎಷ್ಟೊಂದು ಮನ ಕಲುಕಲ್ಪಟ್ಟರೆಂದರೆ, ಅರಸನೂ ಸೇರಿದಂತೆ ಎಲ್ಲರೂ ಎದ್ದು ನಿಂತರು. ಹೀಗೆ ಯಾವಾಗೆಲ್ಲಾ ಮತ್ತು ಎಲ್ಲೆಲ್ಲಿ *Messiah* ಗೀತೆಯು ಹಾಲ್ಪಡುತ್ತಿತ್ತೋ ಆಗ "ಹಲ್ಲೆಲೂಯಾ ಪಲ್ಲವಿ" ವೇಳೆ ಎದ್ದು ನಿಲ್ಲುವ ಸಂಪ್ರದಾಯವು ಆರಂಭಗೊಂಡಿತ್ತು.[52]

ಪ್ರಕಟನೆ ಪುಸ್ತಕದ "ಹಲ್ಲೆಲೂಯಾ ಪಲ್ಲವಿ" ಓದಲ್ಪಡುವಾಗ ನೀವು ಶಾರೀರಿಕವಾಗಿ ಎದ್ದು ನಿಲ್ಲುವಿರೋ ಅಥವಾ ಇಲ್ಲವೋ ಎಂಬುದು ಅಮುಖ್ಯವಾದದ್ದು. ಹೇಗೂ, *ಆತ್ಮೀಕವಾಗಿ* ಭಯಭಕ್ತಿ ಹಾಗೂ ಸ್ತುತಿಯೊಂದಿಗೆ ಪ್ರತಿಕ್ರಿಯಿಸುವದು ಪ್ರಾಮುಖ್ಯವಾಗಿರುತ್ತದೆ. ಸರ್ವಶಕ್ತನು ಪರಲೋಕ ಹಾಗೂ ಭೂಲೋಕಗಳಲ್ಲಿ ಆಳ್ವಿಕೆ ಮಾಡುತ್ತಾನೆಂದು ಪವಿತ್ರಾತ್ಮನು ಘೋಷಿಸುತ್ತಾನೆ, ಆದರೆ ಇದು ಒಂದು ಜ್ವಲಂತ ಪ್ರಶ್ನೆಯು ಹಾಗೆಯೇ ಉಳಿಸುತ್ತದೆ: ಆತನು ನಿಮ್ಮ ಹೃದಯದಲ್ಲಿ ಹಾಗೂ ಜೀವಿತದಲ್ಲಿ ರಾಜನಾಗಿ ಆಳ್ವಿಕೆ ಮಾಡುತ್ತಾನೋ?

**"ವಿವಾಹ ಹಾಗೂ ಯುದ್ಧ" (19:7-21)**

ಒಂದು ಪ್ರಸಂಗವು "ಕುರಿಯಾದಾತನ ವಿವಾಹದ ಔತಣ" (ವಚನಗಳು 7-10) ಮತ್ತು ಬಿಳೀ ಕುದುರೆ ಸವಾರನ ಮುಂದಾಳತ್ವದಲ್ಲಿ ನಡೆಯುವ ಯುದ್ಧವನ್ನು (ವಚನಗಳು 11-21) ಒಂದುಗೂಡಿಸಬಹುದು. Milo Hadwinನು ಎರಡೂ ವಿಭಾಗಗಳನ್ನು ಈ ಶಿರ್ಷೀಕೆಯಲ್ಲಿ ಸೇರ್ಪಡೆಗೊಳಿಸುತ್ತಾನೆ: "ಔತಣ ಹಾಗೂ ಕದನ"[53] Myer Pearlmanನು "ವಿವಾಹ ಹಾಗೂ ಯುದ್ಧ"[54] ಎಂಬ ಶಿರ್ಷೀಕೆಯನ್ನು ಬಳಸಿದನು. ಕರ್ತನ ಔತಣದಲ್ಲಿ ಊಟ ಮಾಡುವವರ ಸಂಭ್ರಮವನ್ನು ಕುರಿಯಾದಾತನೊಂದಿಗೆ ಯುದ್ಧಕ್ಕೆ ಇಳಿದಿರುವವರ ಘೋರವಾದ ಅಂತ್ಯಾವಸ್ಥೆಯೊಂದಿಗೆ ವಿರುದ್ಧ ಹೋಲಿಕೆ ಮಾಡಬಹುದು. ಈ ಎರಡನೆಯ ವ್ಯಕ್ತಿಗಳು ಬೆಂಕಿಯ ಕೆರೆಗೆ ಹೋಗುವದು ನಿಶ್ಚಯ ಅಥವಾ ಪಕ್ಷಿಗಳಿಗೆ ಸತ್ತ ಬೇಟೆಗಳಾಗುವರು.

### ವಿವಾಹದ ಆಮಂತ್ರಣ (19:7-10)

ಕೆಲವರು ವಾಕ್ಯಭಾಗವನ್ನು ಅಕ್ಷರಶಃಗೊಳಿಸುವ ಪ್ರಯತ್ನವನ್ನು ಮಾಡಿದ್ದಾರೆ: ಅವರು ಪರಲೋಕದಲ್ಲಿ ಒಂದು ಚಿಕ್ಕ ವಿವಾಹ ಸಮಾರಂಭವು ನಡೆಯುವದನ್ನು ಕಲ್ಪನೆ ಮಾಡಿಕೊಳ್ಳುತ್ತಾರೆ. ಒಬ್ಬ ಬೋಧಕನಂತೂ ಪೌಲನು ನಿಶ್ಚಿತಾರ್ಥದಲ್ಲಿ (2 ಕೊರಿಂಥ 11:2) ಮುಂದಾಳತ್ವವನ್ನು ವಹಿಸಿಕೊಂಡವನಾದ್ದರಿಂದ ಆತನೇ ಸಮಾರಂಭವನ್ನು ನಡಿಸಿ ಕೊಡುವನೆಂಬ ಮನವರಿಕೆ ಹೊಂದಿರುತ್ತಾನೆ. ಇಲ್ಲಿ ಭಾಷೆಯು ಸಾಂಕೇತಿಕವಾದದ್ದೆಂಬುದನ್ನು ನೆನಪಿಟ್ಟುಕೊಳ್ಳಿರಿ. ಸಾಂಕೇತಿಕತೆಯು ಸುಂದರ, ರೋಮಾಂಚಕರ, ಮತ್ತು ಮನಕಲುಕುವಂಥದ್ದು - ಆದರೆ ಆಗಲೂ ಅದು ಸಾಂಕೇತಿಕತೆಯೇ ಆಗಿದೆ.

ನಾವು ಸಾರಲ್ಪಟ್ಟ ಸುವಾರ್ತೆಯನ್ನು ಕೇಳಿಸಿಕೊಳ್ಳುವಾಗ ಮದುವೆಗೆ ಆಮಂತ್ರಣವನ್ನು ಪಡೆದುಕೊಳ್ಳುತ್ತೇವೆ. ನಾವು ಯೇಸುವಿನಲ್ಲಿ ನಂಬಿಕೆಯಿಟ್ಟು ನೀರಿನಲ್ಲಿ ಮುಳುಗಿ ದೀಕ್ಷಾಸ್ನಾನ ಮಾಡಿಸಿಕೊಳ್ಳುವಾಗ, ನಾವು ಕ್ರಿಸ್ತನೊಂದಿಗೆ ನಿಶ್ಚಿತಾರ್ಥ ಮಾಡಿಕೊಂಡವರಾಗುತ್ತೇವೆ. ನಾವು ಯೇಸುವಿನ ಸಂಗಡ ಹೊಸದಾದ ಹಾಗೂ ಉತ್ಸಾಹಕರವಾದ ಸಂಬಂಧವನ್ನು ಹೊಂದಿರುತ್ತೇವೆ, ಆತನು ನಮ್ಮನ್ನು ಪ್ರೀತಿಸುವವನು ಹಾಗೂ ನಮಗಾಗಿ ಕಾಳಜಿ ಮಾಡುವವನು ಆಗಿರುತ್ತಾನೆ. ಹೇಗೂ, ಆತನು ತನ್ನ ಮದಲಗಿತ್ತಿಯನ್ನು ಕರೆದೊಯ್ಯಲು ಬರುವ ವೇಳೆ ನಾವು ಇನ್ನೂ ಹೆಚ್ಚು ಅದ್ಭುತವಾದ ಸಂಬಂಧವನ್ನು ಅನುಭವಿಸುತ್ತೇವೆ.

ಒಂದು ದಿನ - ಅದು ಬೇಗನೆ ಆಗಿರಬಹುದು ಅಥವಾ ಬೇಗನೆ ಆಗಿಲ್ಲದಿರಬಹುದು - ಆ ಸಮಯವು ಬರುವದು. ಆಗ ಪ್ರತಿಯೊಬ್ಬನು ಯೇಸುವಿನ ನ್ಯಾಯತೀರ್ಪಿನ ಸಿಂಹಾಸನದ ಮುಂದೆ ನಿಲ್ಲುವನು (20:11-15), ಮತ್ತು ಆತನು ತನ್ನವರನ್ನು ಗುರುತಿಸುವನು. ಆತನು ಹೇಳುವ ಈ ಮಾತುಗಳನ್ನು ಕೇಳಿಸಿಕೊಳ್ಳುವದು ಎಷ್ಟು ಅದ್ಭುತವಾಗಿರುವದು: "ನನ್ನ ತಂದೆಯ ಆಶೀರ್ವಾದ ಹೊಂದಿದವರೇ ಬನ್ನಿರಿ, ಲೋಕಾದಿಯಿಂದ ನಿಮಗೋಸ್ಕರ ಸಿದ್ಧಮಾಡಿದ ರಾಜ್ಯವನ್ನು ಸ್ವಾಸ್ತ್ಯವಾಗಿ ತೆಗೆದುಕೊಳ್ಳಿರಿ" (ಮತ್ತಾಯ 25:34)! ಯೇಸುವಿನ ಸಂಗಡ ನಮ್ಮ ಐಕ್ಯತೆಯು ಸಂಪೂರ್ಣಗೊಳ್ಳುವದು, ಮತ್ತು ಒಂದು ನಿತ್ಯವಾದ ವಿವಾಹ ಕೊಂಡಾಟವು ಆರಂಭಗೊಳ್ಳುವದು!

### ಮಹಾ ಜಯ (19:11-21)

ಒಬ್ಬರು 19:11-21ರ ವಾಕ್ಯಭಾಗವನ್ನು "ಪ್ರದರ್ಶನಕ್ಕೆ ಒಂದು ಅಂತಿಮ ಪರೀಕ್ಷೆ" ಎಂದು ಕರೆದರು. G. B. Cairdನು ಇದಕ್ಕೆ "ನಾಶಕನ ನಾಶನ" ಎಂಬ ಶಿರ್ಷಿಕೆ ಇಟ್ಟನು. 19:11-21ನ್ನು ಇನ್ನೊಂದು ವಿಧ ಹೀಗಿರುತ್ತದೆ: (1) ಅರಸನ ಬಿರುದುಗಳು, (2) ಅರಸನ ಕೆಲಸ, (3) ಅರಸನ ವಿಜಯ.[55] ಇನ್ನೂ ಒಂದು ಹೀಗಿರುತ್ತದೆ (1) ಮಹಾ ನಾಯಕ, (2) ಮಹಾ ಭೋಜನ, (3) ಮಹಾ ವಿಜಯ.[56] ಅಲ್ಲದೆ ನೀವು ವಾಕ್ಯದಲ್ಲಿ ಯೇಸುವಿನ ಕುರಿತು ಸಿಕ್ಕುವ ನಾಲ್ಕು ಬಿರುದುಗಳ ಮೇಲೆ ಸಹ ಪ್ರಸಂಗಿಸಬಹುದು: (1) "ನಂಬಿಗಸ್ತನೂ ಸತ್ಯವಂತನೂ" (ವ. 11); (2) "ದೇವರ ವಾಕ್ಯ" (ವ. 13); (3) "ರಾಜಾಧಿರಾಜನು" (ವ. 16); (4) "ಕರ್ತರ ಕರ್ತನು" (ವ. 16).

### ನೀವು ಯಾರನ್ನು ಹಿಂಬಾಲಿಸುವಿರಿ? (19:11-21)

19:11-21ರ ರೂಪಕವು ಅಕ್ಷರಶಃ ಆಗಿರುವದಿಲ್ಲ. ಕರ್ತನ ಸೈನ್ಯವು ಸವಾರಿ ಮಾಡುವ ಬಿಳೀ ಕುದುರೆಗಳಿಗಾಗಿ ಪರಲೋಕದಲ್ಲಿ ಅಶ್ವಲಾಯವು ಇರುವದಿಲ್ಲ, ಮತ್ತು ದೇವರ ಬಳಿಯಲ್ಲಿ

ದುಷ್ಟರನ್ನು ತಿಂದು ಹಾಕುವದಕ್ಕೆ ಸಿದ್ಧವಿರುವ ಹಸಿದ ಪಕ್ಷಿಗಳ ಗುಂಪು ಇರುವದಿಲ್ಲ. ಈ ವಾಕ್ಯಭಾಗವು ಯೇಸುವು ಆತನ ವೈರಿಗಳ ಮೇಲೆ ಗಳಿಸುವ ಜಯದ ಸಂಕೇತವಾಗಿರುತ್ತದೆ. ಹೇಗೂ, ವಾಕ್ಯಭಾಗವನ್ನು ಅಕ್ಷರಶಃ ಅರ್ಥೈಸಿಕೊಳ್ಳಬಾರದು ಎಂಬ ವಾಸ್ತವಾಂಶದ ಅರ್ಥವು ಇದನ್ನು ಗಂಭೀರವಾಗಿ ಪರಿಗಣಿಸಬಾರದು ಎಂದಾಗಿರುವದಿಲ್ಲ. ನಾವು ಮೃಗವನ್ನಾದರು ಹಿಂಬಾಲಿಸಬಹುದು, ಅಥವಾ ನಾವು ರಾಜಾಧಿರಾಜನೂ ಕರ್ತರ ಕರ್ತನೂ ಆಗಿರುವಾತನನ್ನು ಹಿಂಬಾಲಿಸಬಹುದು - ಮತ್ತು ಅದೊಂದು ಅತ್ಯಂಥ ಗಂಭೀರವಾದ ವಿಷಯವಾಗಿರುತ್ತದೆ.

Goetzeನು ರಚಿಸಿದ "ಮನುಷ್ಯರಿಂದ ತಾತ್ಸಾರ ಹಾಗೂ ತಿರಸ್ಕಾರಗೊಂಡವನು" ಎಂಬ ಹೆಸರಿನ ಪ್ರಸಿದ್ಧ ಕಲಾಕೃತಿ, ಒಂದು ವಾಹನಗಳು ಅಧಿಕವಾಗಿ ಓಡಾಡುತ್ತಿರುವ ಹೆದ್ದಾರಿಯ ಮಧ್ಯದಲ್ಲಿ ಮುಳ್ಳಿನ-ಕಿರೀಟ ಧರಿಸಿದ ಯೇಸುವನ್ನು ಚಿತ್ರಿಸಿರುತ್ತದೆ:

> ಆತನು ಜೀವನದ ಪ್ರತಿಯೊಂದು ಬಣ್ಣನೆಯ ಹಾಗೂ ಸ್ಥಳದ ಜನರಿಂದ ಸುತ್ತುವರೆಯಲ್ಪಟ್ಟಿರುತ್ತಾನೆ: ಪಿಕಾಸಿಯನ್ನು ಹಿಡಿದಿರುವ ಕೆಲಸಗಾರನು, ಸವಾರಿ-ಚಾವಟಿಯನ್ನು ಹಿಡಿದಿರುವ ಕುದುರೆಯವನು, ಮಗುವನ್ನು ಹಿಡಿದುಕೊಂಡಿರುವ ತಾಯಿ, ತಾಜಾ ವಿದ್ಯಾಮಾನದ ಕುರಿತು ಕೂಗುತ್ತಿರುವ ಸುದ್ದಿಪತ್ರಿಕೆ ಹುಡುಗನು. ಆದರೆ ಕಲಾಕೃತಿಯನ್ನು ಇನ್ನೊಮ್ಮೆ ನೋಡಿರಿ, ಮತ್ತು ಎಲ್ಲಾ ಕಣ್ಣುಗಳು ಕ್ರಿಸ್ತನಿಂದ *ದೂರವಾಗಿ ಬೇರೆ ಕಡೆಗೆ* ತಿರುಗಿಸಲ್ಪಟ್ಟಿವೆ. ಯಾವನೂ ಆತನ ಕಡೆಗೆ ಸ್ವಲ್ಪವೂ ಗಮನವನ್ನು ಕೊಡುತ್ತಿಲ್ಲ. ಲೋಕದ ರೀತಿಯ ಕುರಿತಾದ ಒಂದು ನಿಜವಾದ ಪ್ರತಿನಿಧಿತ್ವ ಇದಾಗಿರುತ್ತದೆ.[57]

ಯೇಸುವು ಈಗ ತಿರಸ್ಕಾರಕ್ಕೊಳಗಾಗಬಹುದು (ಯೋಹಾನ 12:48), ಆದರೆ ಸದಾಕಾಲಕ್ಕೂ ತಿರಸ್ಕರಿಸಲ್ಪಡುವದಿಲ್ಲ. ಒಂದು ದಿನ ಆತನು ಬರಲಿರುವನು, ರಾಜಾಧಿರಾಜನೂ ಕರ್ತರ ಕರ್ತನೂ ಆಗಿ ಪ್ರಕಾಶಮಾನದಿಂದ ಬರುವನು. ಇಂದು ಆತನನ್ನು ತಿರಸ್ಕರಿಸುವವರು ಅಂದು ಆತನಿಂದ ತಿರಸ್ಕರಿಸಲ್ಪಡುವರು. ಈಗ ಆತನನ್ನು ಅಂಗೀಕರಿಸಿಕೊಳ್ಳುವವರು ಆಗ ಆತನಿಂದ ಅಂಗೀಕರಿಸಿಕೊಳ್ಳಲ್ಪಡುವರು. ಇದಕ್ಕಿಂತ ಹೆಚ್ಚು ಗಂಭೀರವಾದದ್ದು ಬೇರೆ ಇನ್ನಾವದೂ ಇರಲಾರದು.

---

**ಅಡಿಟಿಪ್ಪಣಿಗಳು**

[1]Paul Lee Tan, *Encyclopedia of 7,700 Illustrations: Signs of the Times* (Rockville, Md.: Assurance Publishers, 1979), 326. George F. Handel, ಈತನು 1685 ರಂದು ಜರ್ಮನಿಯಲ್ಲಿ ಜನಿಸಿದನು ಮತ್ತು 1759 ರಂದು ಲಂಡನ್ ಪಟ್ಟಣದಲ್ಲಿ ಸತ್ತನು, ಈತನು ಆತನ ಕಾಲದಲ್ಲಿ ಮಹಾನ್ ಸಂಯೋಜಕರಲ್ಲೊಬ್ಬನಾಗಿದ್ದನು. ಆತನು ಸರ್ವಕಾಲಕ್ಕೂ ಅತ್ಯಂಥ ವ್ಯಾಪಕವಾಗಿ ಪ್ರದರ್ಶನ ಮಾಡಲ್ಪಟ್ಟ *Messiah* ಎಂಬ ಗೀತರೂಪಕಕ್ಕೆ ಪ್ರಖ್ಯಾತನಾಗಿರುತ್ತಾನೆ. [2]W. B. West, Jr., *Revelation Through First-Century Glasses*, ed. Bob Prichard (Nashville: Gospel Advocate Co., 1997), 119. [3]Leon Morris, *Revelation*, rev. ed., The Tyndale New Testament Commentaries, ed. Leon Morris (Grand Rapids, Mich.: Wm. B. Eerdmans Publishing Co., 1987), 211. [4]George Eldon Ladd, *A Commentary on the Revelation of John* (Grand Rapids, Mich.: Wm. B. Eerdmans Publishing Co., 1972), 238. [5]Ibid., 241. [6]Albert H. Baldinger, *Preaching From Revelation: Timely Messages for Troubled Hearts* (Grand Rapids, Mich.: Zondervan Publishing House, 1960), 107. [7]Ray Summers, *Worthy Is the Lamb* (Nashville: Broadman Press, 1951), 195. [8]William Barclay, *The Revelation of John,* vol. 2, rev. ed., The Daily Study Bible Series (Philadelphia: Westminster Press, 1976), 169. [9]Frank Pack, *Revelation,* Part 2 (Austin, Tex.: R. B. Sweet Co.,

1965), 40. [10]J. W. Roberts, *The Revelation to John (The Apocalypse),* The Living Word Commentary, ed. Everett Ferguson (Austin, Tex.: Sweet Publishing Co., 1974), 157.

[11]Ibid. [12]Owen L. Crouch, *Expository Preaching and Teaching: Revelation* (Joplin, Mo.: College Press Publishing Co., 1985), 344. [13]Philip E. Hughes, *The Book of the Revelation: A Commentary* (Grand Rapids, Mich.: Wm. B. Eerdmans Publishing Co., 1990), 197. [14]Robert H. Mounce, *The Book of Revelation,* The New International Commentary on the New Testament, ed. F. F. Bruce (Grand Rapids, Mich.: Wm. B. Eerdmans Publishing Co., 1977), 339. [15]Clovis G. Chappell, *Sermons From Revelation* (New York: Abingdon Press, 1943), 192. [16]Ibid., 193. [17]G. B. Caird, *A Commentary on the Revelation of St. John the Divine*, Harper's New Testament Commentaries, ed. Henry Chadwick (London: Adam & Charles Black, 1966), 234. [18]William Hendriksen, *More Than Conquerors* (Grand Rapids, Mich.: Baker Book House, 1954), 215. [19]Samuel J. Stone, "The Church's One Foundation," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [20]Thomas F. Torrance, *The Apocalypse Today* (Grand Rapids, Mich.: Wm. B. Eerdmans Publishing Co., 1959), 130.

[21]Mounce, 340. [22]H. L. Ellison, *1 Peter—Revelation*, Scripture Union Bible Study Books (Grand Rapids, Mich.: Wm. B. Eerdmans Publishing Co., 1969), 83. [23]Henry B. Swete, *The Apocalypse of St. John*, 3d ed. (London: Macmillan Co., 1909; reprint, Grand Rapids, Mich.: Wm. B. Eerdmans Publishing Co., 1954), 247. [24]Burton Coffman, *Commentary on Revelation* (Austin, Tex.: Firm Foundation Publishing House, 1979), 443. [25]Morris, 221. [26]Michael Wilcock, *The Message of Revelation: I Saw Heaven Opened*, The Bible Speaks Today, ed. John R. W. Stott (Downers Grove, Ill.: Intervarsity Press, 1975), 173. [27]Swete, 248. [28]*American Heritage Dictionary*, 1994 ed., s.v. "Spirit." [29]James M. Efird, *Revelation for Today* (Nashville: Abingdon Press, 1989), 109. [30]Barclay, 177.

[31]G. R. Beasley-Murray, *The Book of Revelation*, The New Century Bible Commentary, ed. Matthew Black (Grand Rapids, Mich.: Wm. B. Eerdmans Publishing Co., 1974), 277. [32]Edward P. Myers, *After These Things I Saw: A Study of Revelation* (Joplin, Mo.: College Press Publishing Co., 1997), 309. [33]Barclay, 178. [34]Roberts, 164. [35]Albertus Pieters, *Studies in the Revelation of St. John* (Grand Rapids, Mich.: Wm. B. Eerdmans Publishing Co., 1954), 204. [36]Coffman, 451. [37]Morris, 225. [38]Ladd, 252. [39]ಈ ವಾಕ್ಯಸಾಲು ಮತ್ತು ಮುಂಚಿನದ್ದು James D. Strauss, *The Seer, the Saviour, and the Saved*, rev. ed., Bible Study Textbook Series (Joplin, Mo.: College Press, 1979), 260 ರಿಂದ ಆಯ್ದುಕೊಳ್ಳಲಾಗಿದೆ. [40]Baldinger, 105.

[41]Beasley-Murray, 278 (ಒತ್ತಿ ಹೇಳಿದ್ದು ನನ್ನದು). [42]Donald Guthrie, *The Relevance of John's Apocalypse* (Grand Rapids, Mich.: Wm. B. Eerdmans Publishing Co., 1987), 102. [43]Coffman, 451. [44]Homer Hailey, *Revelation: An Introduction and Commentary* (Grand Rapids, Mich.: Baker Book House, 1979), 388 (ಒತ್ತಿ ಹೇಳಿದ್ದು ನನ್ನದು). [45]Martin H. Franzmann, *The Revelation to John* (St. Louis: Concordia Publishing House, 1976), 128. [46]Adapted from Morris, 225–26. [47]Warren W. Wiersbe, *The Bible Exposition Commentary,* vol. 2 (Wheaton, Ill.: Victor Books, 1989), 610. [48]Beasley-Murray, 283. [49]Chappell, 197. ನಂತರ ಬರುವ ಮೊದಲ ಮೂರು ಅಂಶಗಳು Chappell, 197–98ದಿಂದ ಆಯ್ದುಕೊಳ್ಳಲಾಗಿವೆ. ನಾಲ್ಕನೆಯ ಅಂಶವು ಸೇರ್ಪಡೆಗೊಳಿಸಿದ್ದಾಗಿದೆ. [50]ಈ ಕಥೆಯು West, 128 ದಲ್ಲಿ ಸಿಕ್ಕುತ್ತದೆ; Garfieldನು ಅನಂತರದಲ್ಲಿ 1881ರಲ್ಲಿ ಅಮೆರಿಕದ ಇಪ್ಪತ್ತನೆಯ ಅಧ್ಯಕ್ಷನಾದನು.

[51]George F. Handel, "Hallelujah Chorus," *Songs of Faith and Praise*, comp. and ed. Alton H. Howard (West Monroe, La.: Howard Publishing Co., 1994). [52]ಈ ಕಥೆಯು Tan, 480ದಿಂದ ತೆಗೆದುಕೊಳ್ಳಲ್ಪಟ್ಟಿದೆ. [53]Milo Hadwin, *The Overcomers: Sermons on Revelation* (Arlington, Tex.: Mission Printing, n.d.), 195–203. [54]Myer Pearlman, *Windows Into the Future: Devotional Studies in the Book of Revelation* (Springfield, Mo.: Gospel Publishing House, 1941), 153–57. [55]Adapted from Merrill C. Tenney, *The Book of Revelation*, Proclaiming the New Testament

(Grand Rapids, Mich.: Baker Book House, 1963), 96–98. [56]John Stacy, *Preaching Through Revelation* (Winona, Miss.: J. C. Choate Publications, 1983), 169–71ದಿಂದ ಆಯ್ದುಕೊಳ್ಳಲಾಗಿದೆ. [57]Hendriksen, 63.